‘ಸಂಭ್ರಮ ಶನಿವಾರ’ ಆಚರಣೆಗೆ ಸೂಚನೆ

ಬೆಂಗಳೂರು: ರಾಜ್ಯದ ಎಲ್ಲ ಶಾಲೆಗಳಲ್ಲಿ ಪ್ರತಿ ತಿಂಗಳು ಒಂದು ಶನಿವಾರ ‘ಬ್ಯಾಗ್ ರಹಿತ’ ದಿನವನ್ನಾಗಿ ಆಚರಿಸಲು ಸೂಚಿಸಲಾಗಿದೆ.

ಈ ದಿನವನ್ನು ‘ಸಂಭ್ರಮ ಶನಿವಾರ’ವನ್ನಾಗಿ ಆಚರಿಸಬೇಕು ಎಂದು ಸಮಗ್ರ ಶಿಕ್ಷಣ ಕರ್ನಾಟಕ (ಎಸ್ಎಸ್‌ಕೆ) ಸುತ್ತೋಲೆ ಹೊರಡಿಸಿದೆ. ಈ ದಿನ ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಯಲ್ಲಿ ಭಾಗವಹಿಸಲು ಉತ್ತೇಜನ ನೀಡಬೇಕು ಎಂದು ಹೇಳಿದೆ.

ಪಠ್ಯೇತರ ಚಟುವಟಿಕೆ ಪುಸ್ತಕಗಳ ವಿವರಗಳನ್ನೂ ಎಸ್ಎಸ್‌ಕೆ ಬಿಡುಗಡೆ ಮಾಡಿದೆ. ಚಟುವಟಿಕೆ ಪುಸ್ತಕವನ್ನು ಡಿಎಸ್‌ಇಆರ್‌ಟಿ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಪುನೀತ್ ಅಭಿಮಾನಿ ಯುವಕ ಆತ್ಮಹತ್ಯೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಹೊಸ ಆನಂದೂರು ಗ್ರಾಮದಲ್ಲಿ ಚಿತ್ರನಟ ಪುನೀತ್ ರಾಜಕುಮಾರ್ ಅಭಿಮಾನಿ ಶನಿವಾರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಗ್ರಾಮದ ಹರೀಶ್ ಅವರ ಪುತ್ರ ಕಿರಣ್ (22) ತಮ್ಮ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನೆಚ್ಚಿನ ನಟನ ಪ್ರಥಮ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ಮುಂದೆ ನಿಂತು ಆಯೋಜಿಸಿದ್ದರು.

‘ಗಂಧದ ಗುಡಿ’ ಚಿತ್ರದ 25 ಟಿಕೆಟ್‌ಗಳನ್ನು ತಂದು ಸ್ನೇಹಿತರಿಗೆ ಹಂಚಿದ್ದರು. ಕಾರ್ಯಕ್ರಮದ ಬಳಿಕ ಮನೆಗೆ ತೆರಳಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದರು.

ಒಬಿಸಿ ಸಮಾವೇಶದಲ್ಲಿ ಸಿದ್ದರಾಮಯ್ಯ ಅವರಿಗೆ ಮುಖ್ಯಮಂತ್ರಿ ಬೊಮ್ಮಾಯಿ ಪ್ರಶ್ನೆ

‘ಹಿಂದುಳಿದವರನ್ನು ಏಕೆ ಮರೆತಿರಿ’

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಹಿಂದುಳಿದ ಸಮುದಾಯಗಳನ್ನು ಕತ್ತಲಲ್ಲಿಟ್ಟಿದ್ದರು. ಅವರು ಮಾಡಲಾಗದ ಕೆಲಸಗಳನ್ನು ನಮ್ಮ ಸರ್ಕಾರ ಮಾಡಿದೆ. 20 ಸಾವಿರ ಕುರಿಗಾರರ ಸಂಘಗಳಿಗೆ ₹354 ಕೋಟಿ ಅನುದಾನ ನೀಡಿದ್ದೇವೆ. ಸಿದ್ದರಾಮಯ್ಯ ಅವರೇಕೆ ಆಗ ಕುರಿಗಾರರ ಕಷ್ಟ ಕೇಳಲಿಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದರು.

ನಗರದ ಹೊರವಲಯದ ನಾಗನಹಳ್ಳಿಯಲ್ಲಿ ಭಾನುವಾರ ಬಿಜೆಪಿ ಒಬಿಸಿ ಘಟಕ ಆಯೋಜಿಸಿದ್ದ ಹಿಂದುಳಿದ ವರ್ಗದವರ ವಿರಾಟ್ ಸಮಾವೇಶದಲ್ಲಿ ಮಾತನಾಡಿದ ಅವರು ತಮ್ಮ ಭಾಷಣದ ಬಹುತೇಕ ಸಮಯವನ್ನು ಸಿದ್ದರಾಮಯ್ಯ ಅವರ ಟೀಕೆಗೇ ಮೀಸಲಿಟ್ಟರು.

‘ಸಿದ್ದರಾಮಯ್ಯ ಅವರೇ, ನೀವು ಎಲ್ಲ ಕಾಲಕ್ಕೂ ಮೋಸ ಮಾಡಲು ಸಾಧ್ಯವಿಲ್ಲ. ನೀವು ಅಧಿಕಾರದಲ್ಲಿ ಇದ್ದಾಗ ಒಬಿಸಿ ಸಮುದಾಯದವರಿಗೆ ಸಂಪುಟದಲ್ಲಿ ಪ್ರಾತಿನಿಧ್ಯ ನೀಡಿರಲಿಲ್ಲ. ಎಸ್ಸಿ, ಎಸ್ಟಿ ಸಮುದಾಯದವರಿಗೆ ಮೀಸಲಾತಿ ಪ್ರಮಾಣವನ್ನು ಇಷ್ಟು ವರ್ಷ ಆಳಿದ್ದ ಕಾಂಗ್ರೆಸ್ ಹೆಚ್ಚಿಸಲಿಲ್ಲ. ನಮ್ಮ ಸರ್ಕಾರ ಎಸ್ಸಿ ಸಮುದಾಯದವರಿಗೆ ಶೇ 15ರಿಂದ 17ರಷ್ಟು, ಎಸ್ಟಿ ಸಮುದಾಯದವರಿಗೆ ಶೇ 3ರಿಂದ ಶೇ 7ರಷ್ಟು ಹೆಚ್ಚಿಸಿದೆ. ಸ್ವಾವಲಂಬನೆ, ಸ್ವಾಭಿಮಾನದ ಜೀವನ ಮಾಡಬೇಕು ಎಂಬ ಉದ್ದೇಶದಿಂದ ಎಷ್ಟೇ ವಿರೋಧವಿದ್ದರೂ ಮೀಸಲಾತಿ ಹೆಚ್ಚಿಸಿದೆವು’ ಎಂದರು.

‘ತಳವಾರ, ಪರಿವಾರ ಸಮುದಾಯವನ್ನು ಪರಿಶಿಷ್ಟ ಪಟ್ಟಿಯಲ್ಲಿ ಸೇರಿಸಿದ್ದೇವೆ. ಈ ಸಮಾವೇಶಕ್ಕೆ ಖಾಲಿ ಕೈಯಲ್ಲಿ ಬಂದಿಲ್ಲ. ಅದರ ಆದೇಶ ಪತ್ರವನ್ನು ಜೊತೆಗೇ ತಂದಿದ್ದೇನೆ’ ಎಂದು ಪತ್ರವನ್ನು ಪ್ರದರ್ಶಿಸಿದರು.

ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾನ್ ಮಾತನಾಡಿ, ‘ಕಾಂಗ್ರೆಸ್‌ನವರು ದೇಶದಾದ್ಯಂತ ಭಾರತ ಜೋಡೊ ಯಾತ್ರೆ ಮಾಡುತ್ತಿದ್ದಾರೆ. ಈಗ ದೇಶವನ್ನು ಜೋಡಿಸುತ್ತಿದ್ದಾರೆ ಎಂದರೆ ಅದನ್ನು ಹಿಂದೆ ಯಾರೋ ಒಬ್ಬರು ಇಬ್ಭಾಗಿಸಿರಬೇಕಲ್ಲವೇ? ಆ ಕೆಲಸವನ್ನು ಅವರದೇ ಕುಟುಂಬದ ಪ್ರಧಾನಿ ಪಂಡಿತ್ ಜವಹರಲಾಲ್ ನೆಹರು ಮಾಡಿದ್ದರು’ ಎಂದು ಟೀಕಿಸಿದರು.

ಕೇಂದ್ರ ಸಂಸದೀಯ ವ್ಯವಹಾರ, ಕಲ್ಲಿದ್ದಲು ಮತ್ತು ಗಣಿ ಸಚಿವ ಪ್ರಲ್ಹಾದ ಜೋಶಿ ಮಾತನಾಡಿ, ‘ಮೋದಿ ಅವರ ಸಂಪುಟದಲ್ಲಿ 27 ಜನ ಒಬಿಸಿ ಸಮುದಾಯಕ್ಕೆ ಸೇರಿದವರು, 12 ಜನ ಪರಿಶಿಷ್ಟರು ಸಚಿವ ಸ್ಥಾನ ಪಡೆದಿದ್ದಾರೆ. ಜನಸಂಖ್ಯೆಯಲ್ಲಿ ಶೇ 54 ರಷ್ಟು ಇರುವ ಒಬಿಸಿ ಸಮುದಾಯದವರಿಗೆ ಆಯೋಗವೇ ಇರಲಿಲ್ಲ. ವೈದ್ಯಕೀಯ ಸೀಟುಗಳಲ್ಲಿ ಮೀಸಲಾತಿ ಕಲ್ಪಿಸಿ, ಸೀಟುಗಳನ್ನು ಸಂಖ್ಯೆಯನ್ನೂ ಹೆಚ್ಚಿಸಲಾಗಿದೆ’ ಎಂದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಮಾತನಾಡಿ, ‘ಹುಲಿಯಾ ಎಂದು ಕರೆಸಿಕೊಳ್ಳುವ ಸಿದ್ದರಾಮಣ್ಣ ಈ ಬಾರಿ ಕಾಡಿಗೆ ಹೋಗುತ್ತಾರೆ. ಅಹಿಂದ ಹೆಸರಲ್ಲಿ ಜನರನ್ನು ಒಡೆದು ಖಳನಾಯಕರಾದವರು ಮುಂದಿನ ದಿನಗಳಲ್ಲಿ ನಿರುದ್ಯೋಗಿ ಆಗುತ್ತಾರೆ’ ಎಂದು ವ್ಯಂಗ್ಯವಾಡಿದರು.

ಬಿಎಸ್‌ವೈ ಹೆಸರು ಹೇಳದ್ದಕ್ಕೆ ಆಕ್ಷೇಪ: ಸಮಾವೇಶದಲ್ಲಿ ಬಿಜೆಪಿ ಸಮುದಾಯದ ಒಬಿಸಿ ವಿಭಾಗದ ರಾಷ್ಟ್ರೀಯ ಅಧ್ಯಕ್ಷ ಲಕ್ಷ್ಮಣ್ ತಮ್ಮ ಭಾಷಣದಲ್ಲಿ ಯಡಿಯೂರಪ್ಪ ಅವರ ಹೆಸರು ಹೇಳುವುದನ್ನು ಮರೆತರು. ಇದನ್ನು ಗಮನಿಸಿದ ಬಿಎಸ್‌ವೈ ಅಭಿಮಾನಿಗಳು ಹೆಸರು ಏಕೆ ಹೇಳುತ್ತಿಲ್ಲ ಎಂದು ಪ್ರಶ್ನಿಸಿದರು. ಇದನ್ನು ಪಕ್ಷದ ಮುಖಂಡರೊಬ್ಬರು ಲಕ್ಷ್ಮಣ್ ಅವರ ಗಮನಕ್ಕೆ ತಂದಾಗ ಯಡಿಯೂರಪ್ಪ ಅವರ ಹೆಸರನ್ನೂ ಹೇಳಿದ ಕೂಡಲೇ ಕರತಾಡನ ಮೊಳಗಿತು.



ಕಲಬುರಗಿಯಲ್ಲಿ ಆಯೋಜಿಸಿದ್ದ ಬಿಜೆಪಿ ಒಬಿಸಿ ವಿರಾಟ್ ಸಮಾವೇಶದಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಬಿಜೆಪಿ ರಾಷ್ಟ್ರೀಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾನ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಜನರತ್ತ ಕೈಬೀಸಿದರು. ಬಿ.ಜಿ. ಪಾಟೀಲ, ಸುನೀಲ ವಲ್ಯಾಪುರೆ, ಬಿ.ಎ. ಬಸವರಾಜ, ಭಗವಂತ ಖೂಬಾ, ಸಿ.ಟಿ. ರವಿ, ಕೆ.ಎಸ್. ಈಶ್ವರಪ್ಪ, ಗೋವಿಂದ ಕಾರಜೋಳ, ಎಂಟಿಬಿ ನಾಗರಾಜ್, ರಾಜಕುಮಾರ ಪಾಟೀಲ ತೇಲ್ಕೂರ ಇದ್ದರು

> ಮುಂದಿನ ದಿನಗಳಲ್ಲಿ ಮೈಸೂರು ಭಾಗದಿಂದ ನಾನು, ಕಲಬುರಗಿಯಿಂದ ಬಸವರಾಜ ಬೊಮ್ಮಾಯಿ ಅವರು ರಥಯಾತ್ರೆ ಮಾಡಲಿದ್ದೇವೆ. ದಾವಣಗೆರೆಯಲ್ಲಿ ಸುಮಾರು 8 ಲಕ್ಷ ಜನರನ್ನು ಸೇರಿಸಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಸಮಾವೇಶ ಮಾಡಲಿದ್ದೇವೆ
>
> **ಬಿ.ಎಸ್. ಯಡಿಯೂರಪ್ಪ**, ಬಿಜೆಪಿ ರಾಷ್ಟ್ರೀಯ ಸಂಸದೀಯ ಮಂಡಳಿ ಸದಸ್ಯ

> ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಒಬಿಸಿಗೆ ಸೇರಿದ ಒಬ್ಬ ನಾಯಕನನ್ನೂ ಮುಖ್ಯಮಂತ್ರಿ ಮಾಡಲಿಲ್ಲ. ಬಿಜೆಪಿ ನನ್ನನ್ನು ಆಯ್ಕೆ ಮಾಡಿ ಸಮುದಾಯಕ್ಕೆ ಪ್ರಾತಿನಿಧ್ಯ ನೀಡಿದೆ. ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಸಿದ್ದರಾಮಯ್ಯ ಅವರು ಒಬಿಸಿ ಸಮುದಾಯಕ್ಕೆ ಎಷ್ಟು ಹಣ ಖರ್ಚು ಮಾಡಿದ್ದಾರೆ?
>
> **ಶಿವರಾಜ ಸಿಂಗ್ ಚೌಹಾನ್**, ಮಧ್ಯಪ್ರದೇಶ ಮುಖ್ಯಮಂತ್ರಿ

ಸುದ್ದಿ 2 ನಿಮಿಷ

ಬಿಜೆಪಿಯವರೇ ತೊಂದರೆ ಕೊಡುತ್ತಿದ್ದಾರೆ: ಜನಾರ್ದನ ರೆಡ್ಡಿ

ಬಳ್ಳಾರಿ: ‘ರಾಜ್ಯದಲ್ಲಿ ನಾನೇ ಕಟ್ಟಿ ಬೆಳೆಸಿದ ಪಕ್ಷದವರೇ ನನಗೆ ತೊಂದರೆ ಕೊಡುತ್ತಿದ್ದಾರೆ’ ಎಂದು ಬಿಜೆಪಿ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಗಣಿ ಉದ್ಯಮಿ ಜಿ.ಜನಾರ್ದನ ರೆಡ್ಡಿ, ‘ಕೆಲವೇ ದಿನಗಳಲ್ಲಿ ಮುಂದಿನ ರಾಜಕೀಯ ನಡೆ ನಿರ್ಧರಿಸುತ್ತೇನೆ’ ಎಂದು ಪ್ರಕಟಿಸಿದರು.

ಇಲ್ಲಿನ ಈದ್ಗಾ ಮೈದಾನದಲ್ಲಿ ಭಾನುವಾರ ‘ಮುಸ್ಲಿಂ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿ’ ಉದ್ಘಾಟಿಸಿ ಮಾತನಾಡಿದ ರೆಡ್ಡಿ, ‘ನನ್ನ ಶತ್ರುಗಳು ಕಾಂಗ್ರೆಸ್‌ನವರು ಆಗಿರಬಹುದು. ಅವರ ರಾಜಕೀಯ ಧರ್ಮ ನನಗೆ ತೊಂದರೆ ಕೊಟ್ಟಿರಬಹುದು. ಆದರೆ, ನಮ್ಮವರೇ ನನಗೆ ಈಗ ತೊಂದರೆ ಕೊಡುವ ಪರಿಸ್ಥಿತಿಯಲ್ಲಿದ್ದಾರೆ’ ಎಂದು ಕಿಡಿ ಕಾರಿದರು.

‘ರಾಜ್ಯ ವಿಧಾನಸಭೆ ಚುನಾವಣೆ ಸಮೀಪಿಸುತ್ತಿದ್ದು, ಕೆಲವೇ ದಿನಗಳಲ್ಲಿ ನನ್ನ ರಾಜಕೀಯ ನಡೆ ಏನೆಂಬುದನ್ನು ನಿಮಗೆ ತಿಳಿಸುತ್ತೇನೆ. ನನ್ನ ಜತೆಯಲ್ಲಿ ಬಳ್ಳಾರಿಯ ಮುಸ್ಲಿಂರು ಬರುತ್ತಾರೆ ಎಂಬ ನಂಬಿಕೆ ಇದೆ’ ಎಂದರು.

‘ನನ್ನ ಸಹೋದರ, ಶಾಸಕ ಜಿ. ಸೋಮಶೇಖರ ರೆಡ್ಡಿ ಮುಸ್ಲಿಂರ ವಿರುದ್ಧ ಯಾವುದೋ ವಿಚಾರ ಮಾತನಾಡಿದ್ದಾರೆ ಎಂದು ಕೆಲವರು ಅಪಪ್ರಚಾರ ಮಾಡಿದ್ದಾರೆ. ಅದಕ್ಕೆ ಅವರು ಕ್ಷಮೆ ಕೇಳಿದ್ದಾರೆ’ ಎಂದು ಜನಾರ್ದನ ರೆಡ್ಡಿ ಸ್ಪಷ್ಟಪಡಿಸಿದರು. ಅವರು ಈ ಮಾತು ಹೇಳುವಾಗ ಬಳ್ಳಾರಿ ನಗರದ ಬಿಜೆಪಿ ಶಾಸಕ ಜಿ. ಸೋಮಶೇಖರ ರೆಡ್ಡಿ ವೇದಿಕೆಯಲ್ಲಿದ್ದರು.



‘ಸುಪ್ರೀಂ ಕೋರ್ಟ್ ಆದೇಶದಂತೆ ನ. 6ರ ಬಳಿಕ ಬಳ್ಳಾರಿಯಿಂದ ಹೊರಗೆ ಹೋಗುತ್ತಿದ್ದೇನೆ. ನಾನು ಬೆಂಗಳೂರಿಗೆ ಹೋಗಿ ಕುಳಿತುಕೊಳ್ಳುವುದಿಲ್ಲ. ಜನರ ನಡುವೆ ಹೋಗುತ್ತೇನೆ’ ಎಂದು ರೆಡ್ಡಿ ಸ್ಪಷ್ಟಪಡಿಸಿದರು.

ಮಾಜಿ ಸಂಸದ ಮುದ್ದಹನುಮೇಗೌಡ ನ.3ರಂದು ಬಿಜೆಪಿಗೆ ಸೇರ್ಪಡೆ

ತುಮಕೂರು: ಕಾಂಗ್ರೆಸ್‌ಗೆ ರಾಜೀನಾಮೆ ನೀಡಿರುವ ಮಾಜಿ ಸಂಸದ ಎಸ್.ಪಿ.ಮುದ್ದಹನುಮೇಗೌಡ ನ.3ರಂದು ಬಿಜೆಪಿಗೆ ಸೇರ್ಪಡೆಯಾಗಲಿದ್ದಾರೆ.

ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಅವರು ಅಧಿಕೃತವಾಗಿ ಬಿಜೆಪಿ ಸೇರಲಿದ್ದಾರೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕುಣಿಗಲ್ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಅವರು ಭರವಸೆ ಸಿಗದಿದ್ದಾಗ ಕಳೆದ ತಿಂಗಳು ಕಾಂಗ್ರೆಸ್ ತೊರೆದಿದ್ದರು. ಬಿಜೆಪಿ ಸೇರಲಿದ್ದಾರೆ ಎಂಬ ಸುದ್ದಿ ಬಹಳ ದಿನಗಳಿಂದ ದಟ್ಟವಾಗಿ ಹರಿದಾಡುತ್ತಿತ್ತು. ಇದಕ್ಕೆ ಇಂಬು ನೀಡುವಂತೆ ಅವರು ಬಿಜೆಪಿಯ ಮುಖಂಡರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದರು.

ಮೊದಲು ಕಾಂಗ್ರೆಸ್‌ನಲ್ಲಿದ್ದ ಮುದ್ದಹನುಮೇಗೌಡ ಅವರು ನಂತರ ಜೆಡಿಎಸ್ ಸೇರಿದ್ದರು. ಬಳಿಕ ಮತ್ತೆ ಕಾಂಗ್ರೆಸ್‌ಗೆ ಮರಳಿದ್ದರು. ತುಮಕೂರು ಲೋಕಸಭಾ ಕ್ಷೇತ್ರವನ್ನು ಕಾಂಗ್ರೆಸ್, ಜೆಡಿಎಸ್‌ಗೆ ಬಿಟ್ಟು ಕೊಟ್ಟಿದ್ದರಿಂದ ತುಮಕೂರು ಸಂಸದರಾಗಿದ್ದ ಮುದ್ದಹನುಮೇಗೌಡ ಅವರು ಕಳೆದ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರಲಿಲ್ಲ.

ಭ್ರಷ್ಟಾಚಾರ: ನ್ಯಾಯಾಂಗ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಲ್ಲ ಸರ್ಕಾರಗಳ ಅವಧಿಯಲ್ಲಿನ ಭ್ರಷ್ಟಾಚಾರದ ಬಗ್ಗೆ ಸುಪ್ರೀಂಕೋರ್ಟ್‌ನ ಹಾಲಿ ನ್ಯಾಯಮೂರ್ತಿಗಳ ನೇತೃತ್ವದ ಸಮಿತಿಯಿಂದ ತನಿಖೆ ಮಾಡಿಸಿ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸವಾಲು ಹಾಕಿದರು.

ಭಾನುವಾರ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ‘ನಮ್ಮ ಸರ್ಕಾರದ ಅವಧಿಯಲ್ಲಿ ಎಂಟು ಪ್ರಕರಣಗಳನ್ನು ಸಿಬಿಐ ತನಿಖೆಗೆ ವಹಿಸಿದ್ದೆ. ಅವುಗಳ ವರದಿ ಬಂದು ಸತ್ಯ ಏನೆಂದು ಈಗ ಗೊತ್ತಾಗಿದೆ’ ಎಂದರು.

‘ನಿಮ್ಮ ಕಾಲದಲ್ಲೂ ಭ್ರಷ್ಟಾಚಾರ ನಡೆದಿದೆ ಎಂದು ಬಿಜೆಪಿಯವರು ಹೇಳುತ್ತಿದ್ದಾರೆ. ಭ್ರಷ್ಟಾಚಾರ ನಡೆದಿದ್ದರೆ ಆಗ ವಿರೋಧ ಪಕ್ಷವಾಗಿದ್ದ ಬಿಜೆಪಿ ಸುಮ್ಮನಿತ್ತು. ಇದೇ ಕಾರಣಕ್ಕೆ 2006ರಿಂದ ಈವರೆಗಿನ ಸರ್ಕಾರಗಳ ಅವಧಿಯಲ್ಲಿ ಯಾವೆಲ್ಲಾ ಭ್ರಷ್ಟಾಚಾರ ನಡೆದಿದೆ, ಅವೆಲ್ಲವುಗಳ ತನಿಖೆಗೆ ಪ್ರತ್ಯೇಕ ತನಿಖಾ ಆಯೋಗ ರಚಿಸಲಿ’ ಎಂದರು.

ಭ್ರಷ್ಟಾಚಾರಕ್ಕೆ ಸಾಕ್ಷ್ಯ ಅಲ್ಲವೇ?: ‘ಇನ್‌ಸ್ಪೆಕ್ಟರ್ ನಂದೀಶ್ ಸಾವಿನ ಬಗ್ಗೆ ಸಚಿವ ಎಂ.ಟಿ.ಬಿ. ನಾಗರಾಜ್, ‘₹ 70 ಲಕ್ಷದಿಂದ ₹ 80 ಲಕ್ಷ ಕೊಟ್ಟು ವರ್ಗಾವಣೆ ಪಡೆದು ಬಂದರೆ ಹೃದಯಾಘಾತ ಆಗದೆ ಇರುತ್ತದೆಯೇ?’ ಎಂದು ಹೇಳಿರುವುದು ಭ್ರಷ್ಟಾಚಾರಕ್ಕೆ ಸಾಕ್ಷ್ಯ ಅಲ್ಲವೇ?’ ಎಂದು ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

‘ಕಾಂಗ್ರೆಸ್‌ಗೆ ನೈತಿಕ ಹಕ್ಕಿಲ್ಲ’

ಬೆಂಗಳೂರು: ‘ಪತ್ರಕರ್ತರಿಗೆ ಉಡುಗೊರೆ ನೀಡಲು ನಾನು ಯಾರಿಗೂ ಸೂಚಿಸಿಲ್ಲ. ಲೋಕಾಯುಕ್ತಕ್ಕೆ ಈ ಬಗ್ಗೆ ಯಾರೋ ದೂರು ನೀಡಿದ್ದು, ತನಿಖೆಯಾಗುತ್ತದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕಾಂಗ್ರೆಸ್ ಆರೋಪಕ್ಕೆ ಭಾನುವಾರ ಪ್ರತಿಕ್ರಿಯಿಸಿದ ಅವರು, ‘ಸುಳ್ಳನ್ನು ಸೃಷ್ಟಿಸುವ ಕೆಲಸವನ್ನು ಕಾಂಗ್ರೆಸ್‌ನವರು ಮಾಡುತ್ತಿದ್ದಾರೆ. ಅವರಿಗೆ ಮಾತನಾಡಲು ನೈತಿಕ ಹಕ್ಕಿಲ್ಲ. ಎಲ್ಲ ಪತ್ರಕರ್ತರು ಉಡುಗೊರೆ ಪಡೆದಿದ್ದಾರೆ ಎಂದು ವ್ಯಾಖ್ಯಾನಿಸುವುದೂ ಸರಿಯಲ್ಲ’ ಎಂದರು.

‘ಇನ್‌ಸ್ಪೆಕ್ಟರ್ ನಂದೀಶ್ ಪ್ರಕರಣದ ಬಗ್ಗೆ ಪೊಲೀಸ್ ಮಹಾ ನಿರ್ದೇಶಕರಿಂದ ಮಾಹಿತಿ ಪಡೆದು ತನಿಖೆ ಕೈಗೊಳ್ಳಲಾಗುವುದು’ ಎಂದರು.

‘ಲೋಕಾಯುಕ್ತದ ಮೇಲೆ ನಂಬಿಕೆ ಇಲ್ಲವೆ?’

‘ಪತ್ರಕರ್ತರಿಗೆ ನಗದು ಉಡುಗೊರೆ ನೀಡಲಾಗಿದೆ ಎಂಬ ಆರೋಪದ ಕುರಿತು ಲೋಕಾಯುಕ್ತದಲ್ಲಿ ದೂರು ದಾಖಲಾಗಿದೆ. ಅಲ್ಲಿ ನಡೆಯುವ ತನಿಖೆ ಮೇಲೆ ಕಾಂಗ್ರೆಸ್‌ನವರಿಗೆ ನಂಬಿಕೆ ಇಲ್ಲವೆ’ ಎಂದು ಬಿಜೆಪಿ ಪ್ರಶ್ನಿಸಿದೆ.

ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಚಿವರಾದ ಆರ್.ಅಶೋಕ ಮತ್ತು ಡಾ.ಕೆ. ಸುಧಾಕರ್, ‘ಈ ಪ್ರಕರಣವನ್ನು ಬಳಸಿಕೊಂಡು ಸರ್ಕಾರ ಹಾಗೂ ಪತ್ರಕರ್ತರ ವರ್ಚಸ್ಸಿಗೆ ಮಸಿ ಬಳಿಯಲು ಕಾಂಗ್ರೆಸ್ ಪ್ರಯತ್ನಿಸುತ್ತಿದೆ’ ಎಂದು ಆರೋಪಿಸಿದರು.



ಶಿಕಾರಿಪುರದ ಸೊಪ್ಪಿನಕೇರಿಯಲ್ಲಿ ಭಾನುವಾರ ನಡೆದ ಹೋರಿ ಹಬ್ಬದಲ್ಲಿ ಹೋರಿ ಓಟದ ಮೈನವಿರೇಳಿಸುವ ದೃಶ್ಯ.

ಪ್ರಜಾವಾಣಿ ಚಿತ್ರ: ಎಚ್.ಎಸ್. ರಘು

ಶಿಕಾರಿಪುರ: ಹೋರಿ ಬೆದರಿಸುವ ಸ್ಪರ್ಧೆಯಲ್ಲಿ ಯುವಕ ಸಾವು


ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ತರ್ಲಘಟ್ಟದಲ್ಲಿ ಭಾನುವಾರ ನಡೆದ ಹೋರಿ ಬೆದರಿಸುವ ಸ್ಪರ್ಧೆಯಲ್ಲಿ ಹೋರಿ ತಿವಿದು ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ.

ಕಲ್ಮನೆ ಗ್ರಾಮದ ರಂಗಪ್ಪ ಅವರ ಪುತ್ರ, ಕೂಲಿ ಕಾರ್ಮಿಕ ವಸಂತ (30) ಮೃತಪಟ್ಟವರು. ಸ್ಪರ್ಧೆ ವೀಕ್ಷಣೆಗೆ ಬಂದಿದ್ದಾಗ ಹೋರಿ ತಿವಿದಿದೆ. ಶಿಕಾರಿಪುರ ಗ್ರಾಮಾಂತರ ಠಾಣೆಯಲ್ಲಿ ಆಕಸ್ಮಿಕ ಸಾವು ಪ್ರಕರಣ ದಾಖಲಾಗಿದೆ.

ಹೋರಿ ಬೆದರಿಸುವ ಸ್ಪರ್ಧೆ ವೇಳೆ ಜಿಲ್ಲೆಯಲ್ಲಿ ಕಳೆದ ವಾರ ಇಬ್ಬರು ಮೃತಪಟ್ಟಿದ್ದರು.

ಆರ್‌ಎಸ್‌ಎಸ್ ಪ್ರಚಾರಕ ಚಂದ್ರಶೇಖರ್ ಭಂಡಾರಿ ನಿಧನ



ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಪ್ರಚಾರಕರೂ ಆಗಿದ್ದ ಲೇಖಕ ಚಂದ್ರಶೇಖರ್ ಭಂಡಾರಿ (87) ಅವರು ಭಾನುವಾರ ನಿಧನರಾದರು.

ಆರ್‌ಎಸ್‌ಎಸ್ ಕರ್ನಾಟಕ ಪ್ರಾಂತದ ಪ್ರಚಾರ ಪ್ರಮುಖ್ ಹಾಗೂ ಅಖಿಲ ಭಾರತೀಯ ಸಾಹಿತ್ಯ ಪರಿಷತ್ ರಾಜ್ಯ ಸಂಘಟನಾ ಕಾರ್ಯದರ್ಶಿ ಆಗಿದ್ದರು. ಮಂಗಳೂರಿನಲ್ಲಿ ಪ್ರೌಢಶಾಲಾ ಶಿಕ್ಷಕರಾಗಿ ಕೆಲಸ ಮಾಡಿದ್ದರು.

‘ಧರೆಗವತರಿಸಿದೆ ಸ್ವರ್ಗದ ಸ್ಪರ್ಧಿಯು ಸುಂದರ ತಾಯ್ನೆಲವು...’ ಸೇರಿ ಹಲವು ದೇಶಭಕ್ತಿ ಗೀತೆಗಳನ್ನು ರಚಿಸಿದ್ದರು. ಚಂದ್ರಶೇಖರ್ ಅವರು ಅನುವಾದಿಸಿದ್ದ ‘ಸಾಮಾಜಿಕ ಕ್ರಾಂತಿ ಸೂರ್ಯ ಡಾ.ಬಿ. ಆರ್.ಅಂಬೇಡ್ಕರ್’ ಕೃತಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಿಂದ 2011ರಲ್ಲಿ ಉತ್ತಮ ಅನುವಾದಕ ಪ್ರಶಸ್ತಿ ಲಭಿಸಿತ್ತು.

ಅಂತಿಮ ದರ್ಶನಕ್ಕೆ ವ್ಯವಸ್ಥೆ: ಆರೆಸ್ಸೆಸ್‌ನ ‘ಕೇಶವ ಕೃಪಾ’ ಕಾರ್ಯಾಲಯದಲ್ಲಿ ಸೋಮವಾರ ಬೆಳಿಗ್ಗೆ 8 ಗಂಟೆಯಿಂದ 9 ಗಂಟೆವರೆಗೆ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಬೆಳಿಗ್ಗೆ 11 ಗಂಟೆಗೆ ಬನಶಂಕರಿ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.62	4,769	6,448
ಹಾರಂಗಿ	2,859	2,854.38	52	1,700
ಕಬಿನಿ	2284	2,282.32	180	1,500
ಹೇಮಾವತಿ	2,922	2,921.10	1,254	2,867
ಲಿಂಗನಮಕ್ಕಿ	1,819	1,812	1,627	6,086
ಸೂಪಾ (ಮೀ)	564	553.72	677	3,208
ಮಾಣಿ	595	589.25	46	756
ತುಂಗಭದ್ರಾ	1,633	1632.88	7050	9099
ಮಲಪ್ರಭಾ	2079.5	2,079.50	394	394
ಘಟಪ್ರಭಾ	2175	2,175	189	189
ಭದ್ರಾ	186	185.5	1,785	2,086
ಆಲಮಟ್ಟಿ (ಮೀ)	519.6	519.60	15,951	15,951
ನಾರಾಯಣಪುರ (ಮೀ)	492.25	492.25	13,500	13,500

* ನೆಲಮಟ್ಟದಿಂದ

ಪ್ರಜಾವಾಣಿ @75 ಅಮೃತ ಮಹೋತ್ಸವ

ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು PVAT75@PRAJAVANI.CO.IN ಗೆ ಕಳುಹಿಸಿ. ಪೂರ್ಣ ಪ್ರತಿಕ್ರಿಯೆಗಳನ್ನು PRAJAVANI.NET ನಲ್ಲಿ ನೋಡಬಹುದು

‘ಹೆಸರಿಗೆ ತಕ್ಕಂತೆ ಜನಪರ, ವಿಶ್ವಾಸಾರ್ಹ’



ನಮ್ಮ ಹೆಮ್ಮೆಯ ‘ಪ್ರಜಾವಾಣಿ’ ದಿನಪತ್ರಿಕೆಯು 74 ವಸಂತಗಳನ್ನು ಪೂರೈಸಿ ಅಮೃತ ಮಹೋತ್ಸವ ವರ್ಷಕ್ಕೆ ಕಾಲಿಟ್ಟಿರುವುದು ಸಂತಸ ತರಿಸಿದೆ. ಈ ಸುದೀರ್ಘ ಅವಧಿಯಲ್ಲಿ ಹೆಸರಿಗೆ ತಕ್ಕಂತೆ ಜನಪರವಾದ ನಿಲುವುಗಳನ್ನು ಪ್ರತಿಪಾದಿಸುತ್ತ ಪ್ರಜೆಗಳಿಗೆ ಧ್ವನಿಯಾಗಿ ‘ಅತ್ಯಂತ ವಿಶ್ವಾಸಾರ್ಹ ದಿನ ಪತ್ರಿಕೆ’ ಎಂಬ ಕೀರ್ತಿಗೆ ಪಾತ್ರವಾಗಿದೆ. ಮುಂದಿನ ದಿನಗಳಲ್ಲೂ ಈ ಪತ್ರಿಕೆಯು ಯಶಸ್ಸು ಕಾಣಲಿ ಎಂದು ಹಾರೈಸುವೆ.

ಎಂ.ಬಿ.ಪಾಟೀಲ, ಅಧ್ಯಕ್ಷ, ಕೆಪಿಸಿಸಿ ಪ್ರಚಾರ ಸಮಿತಿ

‘ಪರಿಣಾಮ ಬೀರಿದ ಪತ್ರಿಕೆ’

ನನ್ನ ಅಚ್ಚುಮೆಚ್ಚಿನ ದಿನಪತ್ರಿಕೆ ‘ಪ್ರಜಾವಾಣಿ’ಯ ಪದಬಂಧ, ವಾಚಕರವಾಣಿ, ಸುಭಾಷಿತ ಚಿಕ್ಕಂದಿನಿಂದಲೂ ಆಕರ್ಷಿಸುತ್ತ ಬಂದಿದೆ. ಉಪನ್ಯಾಸಕಿಯಾಗಿ, ಇಂದು ಕಾಲೇಜಿನ ಪ್ರಾಂಶುಪಾಲೆಯಾಗಲು ‘ಪ್ರಜಾವಾಣಿ’ ಬೀರಿದ ಪ್ರಭಾವ ಅನನ್ಯ. ಇದು ಹೀಗೇ ಜನಪರ ಕಾರ್ಯಗಳನ್ನು ಮಾಡುತ್ತಾ ಯಶಸ್ವಿಯಾಗಲಿ ಎಂದು ಆಶಿಸುವೆ.

ಎಂ.ಎಸ್.ಮಂಜುಳಾ, ಪ್ರಾಚಾರ್ಯರು, ಅರಳಕುಪ್ಪೆ, ಪಾಂಡವಪುರ ತಾ.

‘ವಸ್ತುನಿಷ್ಠ, ನಿಖರತೆಯ ಪ್ರತಿರೂಪ’

‘ಪ್ರಜಾವಾಣಿ’ ಸಮಸ್ತ ಕನ್ನಡಿಗರ ಮನೆ ಮನೆಯ ದಿನಪತ್ರಿಕೆಯಾಗಿ ಹೊರಹೊಮ್ಮುತ್ತಿರುವುದು ಅತ್ಯಂತ ಸಂತಸದ ಸಂಗತಿ. ಪ್ರಕಟಿತ ವರದಿಗಳು, ಸುದ್ದಿಗಳು ಅತ್ಯಂತ ನಿಖರ ಹಾಗೂ ವಸ್ತುನಿಷ್ಠವಾಗಿರುವುದೇ ಇದಕ್ಕೆ ಕಾರಣ. ವಿದ್ಯಾರ್ಥಿದೆಸೆಯಿಂದಲೂ ಓದುತ್ತಿರುವ ಪತ್ರಿಕೆಯಿದು. ನನಗೀಗಲೂ ನೆನಪಿದೆ 'ಶಿಕ್ಷಕರ ನೇಮಕಾತಿ ಕುರಿತು ಪತ್ರಿಕಾ ಪ್ರಕಟಣೆಗಳು ಬೇರೆ ಪತ್ರಿಕೆಗಳಲ್ಲಿ ಬಂದಾಗ್ಯೂ ಪ್ರಜಾವಾಣಿಯಲ್ಲಿ ವರದಿ ಬಂದಾಗಲೇ ಖಾತ್ರಿ' ಕಾಯೋಣ ಎಂದದ್ದು ಹಸಿ ನೆನಪು. ಸಾಹಿತ್ಯದ ಒಂದಷ್ಟು ಬರಹಗಳನ್ನು ಪ್ರಕಟಿಸುತ್ತಾ ಬರಹಕ್ಕೆ ಪ್ರೇರಣೆಯಾಗಿರುವ, 75 ವಸಂತಕ್ಕೆ ಕಾಲಿಟ್ಟಿರುವ ‘ಪ್ರಜಾವಾಣಿ’ ಇನ್ನಷ್ಟು ಬೆಳೆಯಲಿ ಎಂದು ಮನದುಂಬಿ ಹಾರೈಸುತ್ತೇನೆ.

ಸುರೇಶ್ ಕಲಾಪ್ರಿಯಾ, ಶಿಕ್ಷಕ, ಬರಹಗಾರ, ಗಂಗಾವತಿ


‘ಮೊದ್ದು ಮಣಿಯಿಂದ ಇಂದಿನವರೆಗೂ ಆಪ್ತ’



ಮೈಸೂರಿನಲ್ಲಿದ್ದಾಗ, ನಾನು ಚಿಕ್ಕವಯಸ್ಸಿನಲ್ಲಿದ್ದಾಗಲೂ ಮನೆಯಲ್ಲಿ ‘ಪ್ರಜಾವಾಣಿ’ಯನ್ನೇ ತರಿಸುತ್ತಿದ್ದೆವು. ದೊಡ್ಡವರೆಲ್ಲಾ ಸುದ್ದಿಗಾಗಿ ಪತ್ರಿಕೆ ನೋಡುತ್ತಿದ್ದರೆ ನಾನು ಮಾತ್ರ ‘ಮೊದ್ದು ಮಣಿ’ಗಾಗಿ ಹಾತೊರೆಯುತ್ತಿದ್ದೆ. ಅನೇಕ ಹಿರಿಯರ ಅಂಕಣಗಳು, ವ್ಯಂಗ್ಯಚಿತ್ರಗಳನ್ನು ತುಂಬಾ ಇಷ್ಟಪಡುತ್ತಿದ್ದೆ. ನನಗಿಂತ ಮೂರು ವರ್ಷ ಹಿರಿಯ ವಯಸ್ಸಿನ ಪತ್ರಿಕೆಯಿದು. ಸುದ್ದಿಗಳು ಸ್ಪಷ್ಟ, ಸ್ವಚ್ಛ, ಯಥಾವತ್ತಾಗಿ ಬರುತ್ತಿವೆ. ನಾನಂತೂ ಅಂಟಿಕೊಂಡಿದ್ದೇನೆ. ಟಿವಿಯಲ್ಲಿ ಅದೆಷ್ಟೇ ಸುದ್ದಿ ಬರಲಿ. ಬೆಳಿಗ್ಗೆ ಪತ್ರಿಕೆ ಓದದೇ ಸಮಾಧಾನವಂತೂ ಇಲ್ಲ. ಪತ್ರಿಕೆಯನ್ನು ತರುವ ಧಾವಂತದಲ್ಲಿ ಒಮ್ಮೆ ಬಿದ್ದು ಗಾಯಗೊಂಡಿದ್ದೂ ಇದೆ. ಅದೇನೇ ಇದ್ದರೂ ‘ಪ್ರಜಾವಾಣಿ’ ನನಗೆ ತುಂಬಾ ಇಷ್ಟವಾದ ಪತ್ರಿಕೆ. ಪತ್ರಿಕೆಯ ಕಾಯಕ ನಿರಂತರವಾಗಿರಲಿ. ಇನ್ನೂ ಹೆಚ್ಚು ಜನರಿಗೆ ತಲುಪಲಿ. ಶುಭಾಶಯಗಳು.

ಗಿರಿಜಾ ಲೋಕೇಶ್, ಚಲನಚಿತ್ರ, ರಂಗಭೂಮಿ ನಟಿ

‘ಕನ್ನಡ, ಸಾಹಿತ್ಯ ಬೆಳೆಸಿದ ಪತ್ರಿಕೆ’



ಪ್ರಜೆಗಳ ಧ್ವನಿಯೇ ಆಗಿರುವ ‘ಪ್ರಜಾವಾಣಿ’ 75ರ ಸಂಭ್ರಮದಲ್ಲೂ ಶಕ್ತಿಯುತವಾಗಿರಲು ಅದು ತನ್ನೊಂದಿಗೆ ಭಾಷೆ ಮತ್ತು ಕನ್ನಡ ಸಾಹಿತ್ಯ ಬೆಳೆಸಿರುವುದೇ ಕಾರಣ. ‘ಪ್ರಜಾವಾಣಿ’ಯೊಂದಿಗಿನ ಹಲವು ದಶಕಗಳ ಸಂಬಂಧದಲ್ಲಿ ಧಾರವಾಡ ಸಾಹಿತ್ಯ ಸಂಭ್ರಮ ಆಯೋಜಿಸಿದ ದಿನಗಳು ಮರೆಯಲಾಗದ್ದು. ಸಂಪಾದಕರಾದ ಕೆ.ಎನ್. ಶಾಂತಕುಮಾರ ಅವರು ಈ ಕಾರ್ಯಕ್ರಮವನ್ನು ಪ್ರಾಯೋಜಿಸುವ ನಿರ್ಧಾರದ ಮೂಲಕ ಸಾಹಿತ್ಯವನ್ನು ಬೆಳೆಸಿದರು. ನಾಡಿನಾದ್ಯಂತ ಮುಂಚೂಣಿ ಪತ್ರಿಕೆಯಾಗಿರುವ ‘ಪ್ರಜಾವಾಣಿ’ ಹೊರತರುವ ದೀಪಾವಳಿ ವಿಶೇಷಾಂಕಕ್ಕೆ ಇಂದಿಗೂ ಸರಿಸಾಟಿಯಾದ ಮತ್ತೊಂದಿಲ್ಲ. ‘ಪ್ರಜಾವಾಣಿ’ ಇನ್ನಷ್ಟು ಎತ್ತರಕ್ಕೆ ಬೆಳೆದು ಶತಮಾನ ಕಾಣುವಂತಾಗಬೇಕು. ಅದರೊಂದಿಗೆ ಕನ್ನಡವನ್ನು ಇನ್ನಷ್ಟು ಬೆಳೆಸಿ ಉದ್ಧರಿಸಲಿ ಎಂದು ಹಾರೈಸುತ್ತೇನೆ.

ಡಾ.ರಮಾಕಾಂತ ಜೋಶಿ, ಪ್ರಕಾಶಕ, ಮನೋಹರ ಗ್ರಂಥಮಾಲೆ, ಧಾರವಾಡ

‘ವಿಶ್ವವಿದ್ಯಾಲಯದ ಕವಿಯನ್ನಾಗಿಸಿದ ಪತ್ರಿಕೆ’

ವಿದ್ಯಾರ್ಥಿಯಾಗಿನಿಂದ ಇಲ್ಲಿಯವರೆಗೂ ಪ್ರಜಾವಾಣಿ ಓದುಗ. ಪಕ್ಷ, ಜಾತಿ, ಧರ್ಮ, ಸಿದ್ಧಾಂತಗಳ ಗಡಿ ಮೀರಿ ಸತ್ಯದ ಪರ, ಸಾಮಾಜಿಕ ನ್ಯಾಯದ ಪರ ಧ್ವನಿ ಎತ್ತುತ್ತಲೇ ಇದೆ. ಮಾನವಿಯತೆಗೆ ಒತ್ತು ನೀಡುತ್ತಲೇ ಇದೆ. ನನ್ನ 'ಅಪ್ಪ' ಕವಿತೆ ಮೊದಲ ಸಲ ಪ್ರಕಟಗೊಂಡಾಗ ಸಂತೋಷದಲ್ಲಿ ತೇಲಿದ್ದೆ. ಪುಸ್ತಕದಲ್ಲಿ ಪ್ರಕಟವಾಗದ ಈ ಕವಿತೆ ಪಠ್ಯವಾಯಿತು. ಪ್ರತಿಭೆಗಳನ್ನು ಗುರುತಿಸುವಲ್ಲಿ ಪ್ರಜಾವಾಣಿ ಹಿಂದೆ ಬೀಳುವುದಿಲ್ಲ ಎಂಬುದಕ್ಕೆ ನಾನೇ ನು ಉದಾಹರಣೆಯಾದೆ. 'ಸಾಪ್ತಾಹಿಕ ಪುರವಣಿಯಲ್ಲಿ' 'ದೀಪಾವಳಿ ಸಂಚಿಕೆಗಳಲ್ಲಿ' ಪ್ರಕಟವಾದ ಬಹುತೇಕ ಕವಿತೆಗಳು ರಾಜ್ಯದ ನಾನಾ ವಿಶ್ವವಿದ್ಯಾಲಯಗಳ ವಿವಿಧ ತರಗತಿಗಳಿಗೆ ಪಠ್ಯವಾಗಿವೆ. 'ವಿಶ್ವವಿದ್ಯಾಲಯದ ಕವಿ' 'ಬಡವನ ಕವಿತೆಗೆ ಶ್ರೀಮಂತರ ಬೇಡಿಕೆ' ಎಂಬ ಪ್ರೀತಿಗೂ ಪಾತ್ರನಾದೆ. ನನ್ನ ಬೆಳವಣಿಗೆಯಲ್ಲಿ 'ಪ್ರಜಾವಾಣಿ'ಯ ಪಾತ್ರವೂ ಇದೆ. 75ರ ಸಂಭ್ರಮದಲ್ಲಿರುವ ಪ್ರೀತಿಯ 'ಪ್ರಜಾವಾಣಿ'ಗೆ ಶುಭಾಶಯಗಳು ಹಾಗೂ ಅಭಿನಂದನೆಗಳು

ಸತ್ಯಾನಂದ ಪಾತ್ರೋಟ, ಬಾಗಲಕೋಟೆ

ವಿದ್ಯಾರ್ಥಿಗಳಿಗೆ ‘ಮಾರ್ಗದರ್ಶಿ’

ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುವವರಿಗೆ ಎಲ್ಲ ಆಯಾಮಗಳಲ್ಲಿ ಮಾಹಿತಿ ನೀಡಬಲ್ಲ ಏಕೈಕ ಕನ್ನಡ ದಿನಪತ್ರಿಕೆ ‘ಪ್ರಜಾವಾಣಿ’. ಇದನ್ನೇ ಶೈಕ್ಷಣಿಕ ಸಾಮಗ್ರಿಯಾಗಿ ಅಭ್ಯಸಿಸಿ, ಸಾಧನೆ ಮೆರೆದವರ ದೊಡ್ಡ ಪಟ್ಟಿಯೇ ಇದೆ. ಇನ್ನು ಪ್ರಗತಿಪರ ಆಲೋಚನೆಗೆ ಪೂರಕವಾದ ವರದಿ ಪ್ರಕಟಿಸುವುದರಲ್ಲೂ ಪತ್ರಿಕೆ ಸದಾ ಮುಂಚೂಣಿಯಲ್ಲಿದೆ. ಕಳೆದ 25 ವರ್ಷಗಳಿಂದ ನಾನು ‘ಪ್ರಜಾವಾಣಿ’ ಕಾಯಂ ಓದುಗಳು. ಒಂದಿಡೀ ಕುಟುಂಬ ಸದಸ್ಯರಿಗೆ ಮಾರ್ಗದರ್ಶನ ನೀಡಬಲ್ಲ ಮಾಹಿತಿ ಇದರಲ್ಲಿರುತ್ತದೆ. ನಿತ್ಯವೂ ಓದುತ್ತ, ನಮ್ಮ ಕುಟುಂಬದ ಪತ್ರಿಕೆಯೇ ಆಗಿರುವ ‘ಪ್ರಜಾವಾಣಿ’ 75ರ ಸಂಭ್ರಮದಲ್ಲಿರುವುದು ಖುಷಿ ತಂದಿದೆ.

ಡಾ.ನಿರ್ಮಲಾ ಬಟ್ಟಲ್, ಪ್ರಾಚಾರ್ಯರು, ಎಂ.ಎಸ್‌ಆರ್‌ಎಸ್ ಬಿಇಡಿ ಕಾಲೇಜು, ಬೆಳಗಾವಿ

ಹೋರಾಟಕ್ಕಿಳಿಯುವ ಕಾಲ ಹತ್ತಿರ: ನಿರ್ಮಲಾನಂದನಾಥ ಸ್ವಾಮೀಜಿ

ಒಕ್ಕಲಿಗರ ಸ್ಥಿತಿಗತಿ ಅರಿಯಲು ಸಮೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಕ್ಕಲಿಗರ ಸ್ಥಿತಿಗತಿ ಅರಿಯಲು ವೈಜ್ಞಾನಿಕ ಸಮೀಕ್ಷೆ ನಡೆಸಲಾಗುತ್ತಿದೆ. ಇದರ ವರದಿಯನ್ನು ಸರ್ಕಾರದ ಮುಂದಿಟ್ಟು ಸವಲತ್ತಿಗಾಗಿ ಹೋರಾಟ ನಡೆಸುವ ಕಾಲ ಹತ್ತಿರವಾಗಿದೆ’ ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ಸಾಹಿತ್ಯ ಸಂಗಮ ಟ್ರಸ್ಟ್ ಮತ್ತು ಒಕ್ಕಲಿಗರ ವಾಯ್ಸ್ ಮಾಸಪತ್ರಿಕೆ ಸಹಯೋಗದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ‘ಮಣ್ಣಿನ ಹಣತೆ’ ಸಂಪುಟ–3 ಬಿಡುಗಡೆ ಮಾಡಿ ಅವರು ಮಾತನಾಡಿದರು.

‘ಸಮೀಕ್ಷೆ ಕಾರ್ಯ ಪ್ರಗತಿಯಲ್ಲಿದೆ. ಪೂರ್ಣಗೊಂಡ ಕೂಡಲೇ ಒಕ್ಕಲಿಗರಿಗೆ ಇರುವ ತೊಂದರೆಗಳು, ಬೇಕಾಗಿರುವ ಸವಲತ್ತುಗಳ ಬಗ್ಗೆ ಸರ್ಕಾರಕ್ಕೆ ಸವಿಸ್ತಾರ ಬೇಡಿಕೆ ಸಲ್ಲಿಸಲಾಗುವುದು. ಒಕ್ಕಲಿಗರ ಧ್ವನಿಗೆ ಸಂಚಕಾರ ಬರುವ ದಿನಗಳು ಕಾಣಿಸುತ್ತಿವೆ. ಹೀಗಾಗಿ, ಧ್ವನಿ ಎತ್ತಬೇಕಾದ ಅನಿವಾರ್ಯತೆ ಇದೆ. ಕಾನೂನಿನ ಇತಿಮಿತಿಯಲ್ಲಿ ಬೇಡಿಕೆಗಳನ್ನು ಸಿದ್ಧಪಡಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಪೂರ್ವಭಾವಿ ಸಭೆಗಳು ನಡೆಯುತ್ತಿವೆ’ ಎಂದು ಹೇಳಿದರು.

‘ಸಮುದಾಯದವರು ಬುದ್ಧಿವಂತರಾಗಬೇಕು. ಸುತ್ತಮುತ್ತ ಏನೆಲ್ಲಾ ಪಿತೂರಿ ನಡೆಯುತ್ತಿದೆ ಎಂದು ತಿಳಿಯಬೇಕು. ಕೆಲವರಿಗೆ ಅಧಿಕಾರ ಕೊಟ್ಟಿದ್ದೇವೆ, ಅವರು ನಮ್ಮನ್ನು ಸುಮ್ಮನಿರಿಸಲು ಯತ್ನಿಸುತ್ತಿದ್ದಾರೆ. ಇಂತವರ ಬಗ್ಗೆ ನಿಗಾ ವಹಿಸಬೇಕು. ಈಗ ಸೂಕ್ಷ್ಮವಾಗಿ ಹೇಳುತ್ತಿದ್ದೇನೆ. ಕಾಲ ಬಂದಾಗ ಬಹಿರಂಗವಾಗಿಯೇ ಹೇಳುತ್ತೇನೆ’ ಎಂದರು.

‘ಒಕ್ಕಲಿಗರು ಸಾಮ್ರಾಜ್ಯ ಸ್ಥಾಪಿಸಿ ಈ ನಾಡನ್ನು ಆಳಿದ ಉದಾಹರಣೆಗಳಿವೆ. ಗಂಗರ ಸಾಮ್ರಾಜ್ಯದಲ್ಲಿ ಅಕ್ಕಪಕ್ಕದ ರಾಜ್ಯಗಳೆಲ್ಲವೂ ಸೇರಿದ್ದವು. ಕೆಂಪೇಗೌಡ ತಮಿಳುನಾಡಿನವರು ಎಂಬ ವಾದವೂ ಸರಿಯಲ್ಲ. ತಮಿಳುನಾಡು ಕೂಡ ಗಂಗರ ಆಳ್ವಿಕೆಗೆ ಒಳಪಟ್ಟಿತ್ತು. ಒಕ್ಕಲಿಗರು ಒಳ ಭೇದಗಳನ್ನು ಹುಡುಕದೆ ಒಗ್ಗಟ್ಟಿನಿಂದ ಮುಂದೆ ಸಾಗಬೇಕು. ಮಕ್ಕಳಿಗೆ ಇತಿಹಾಸ ತಿಳಿಸಿಕೊಡುವ ಪ್ರಯತ್ನವೂ ಆಗಬೇಕು’ ಎಂದು ಸ್ವಾಮೀಜಿ ಪ್ರತಿಪಾದಿಸಿದರು. ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಸಮುದಾಯದವರನ್ನು ಇದೇ ವೇಳೆ ಸನ್ಮಾನಿಸಲಾಯಿತು.



ಮಣ್ಣಿನ ಹಣತೆ ಸಂಪುಟ–3 ಪುಸ್ತಕವನ್ನು ನಿರ್ಮಲಾನಂದನಾಥ ಸ್ವಾಮೀಜಿ ಬಿಡುಗಡೆ ಮಾಡಿದರು. ಕೃತಿಯ ಸಂಪಾದಕ ಎಸ್.ನಾಗಭೂಷಣ, ಸಾಹಿತಿ ವಿದ್ಯಾಧರ ಕುಡೆಕಲ್ಲು, ಆದಿಚುಂಚನಗಿರಿ ವಿಜಯನಗರ ಶಾಖಾ ಮಠದ ಸೌಮ್ಯನಾಥ ಸ್ವಾಮೀಜಿ, ಮಠದ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ, ನ್ಯಾಯಮೂರ್ತಿಗಳಾದ ಎ.ಜೆ.ಸದಾಶಿವ, ಚಂದ್ರಶೇಖರಯ್ಯ ಇದ್ದರು

– ಪ್ರಜಾವಾಣಿ ಚಿತ್ರ

ಸೋಮವಾರ, ಅಕ್ಟೋಬರ್ 31, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 300 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಹಿಳಾ ಮತ
ಹಿಜಾಬ್ ಬೇಕು-ಬೇಡಗಳ ಹೋರಾಟ

ಇಂದು
ಶಿಕ್ಷಣ 4

ಟಿ20 ವಿಶ್ವಕಪ್ : ಲುಂಗಿ ವೇಗಕ್ಕೆ ಮುಗ್ಗರಿಸಿದ ಭಾರತ 10

ಸೋಲ್‌ನಲ್ಲಿ ಕಾಲ್ತುಳಿತ: ಮೃತರ ಸಂಖ್ಯೆ 153ಕ್ಕೆ ಏರಿಕೆ 8

ಗುಜರಾತ್‌ನ ಮೋರ್ಬಿ ಜಿಲ್ಲೆಯ ಮಚ್ಚು ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದ್ದ ಸೇತುವೆ

ತೂಗುಸೇತುವೆ ಕುಸಿತ: 78 ಸಾವು

ಪ್ರಜಾವಾಣಿ ವಾರ್ತೆ

ಮೋರ್ಬಿ (ಗುಜರಾತ್): ಪಶ್ಚಿಮ ಗುಜರಾತ್‌ನ ಮಚ್ಚು ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದ್ದ ಶತಮಾನದಷ್ಟು ಹಳೆಯ ತೂಗುಸೇತುವೆ ಭಾನುವಾರ ಸಂಜೆ ಕುಸಿದು ಕನಿಷ್ಠ 78 ಮಂದಿ ಮೃತಪಟ್ಟಿದ್ದಾರೆ. ಸುಮಾರು ನೂರಾರು ಮಂದಿ ನದಿ ನೀರಿನಲ್ಲಿ ಸಿಲುಕಿದ್ದಾರೆ.

'ದುರ್ಘಟನೆಯ ವೇಳೆ ಸುಮಾರು 150 ವರ್ಷಗಳಷ್ಟು ಹಳೆಯದಾದ ಸೇತುವೆ ಮೇಲೆ ಸುಮಾರು 200ಕ್ಕೂ ಹೆಚ್ಚು ಜನರು ಇದ್ದರು. ಸಾವಿನ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ. ಇದುವರೆಗೆ 160 ಮಂದಿಯನ್ನು ರಕ್ಷಿಸಲಾಗಿದೆ' ಎಂದು ಮೋರ್ಬಿ ಜಿಲ್ಲಾಡಳಿತ ಮಾಹಿತಿ ನೀಡಿದೆ.

ಮೋರ್ಬಿ ಪಟ್ಟಣದ ಪ್ರಮುಖ ಪ್ರವಾಸಿ ಆಕರ್ಷಣೆಯಾಗಿರುವ 230 ಮೀಟರ್ ಉದ್ದದ ಈ ಸೇತುವೆಯನ್ನು ಇತ್ತೀಚೆಗಷ್ಟೇ ದುರಸ್ತಿ ಮಾಡಲಾಗಿದ್ದು ಗುಜರಾತಿಗಳ ಹೊಸ ವರ್ಷ ಅ. 26 ರಂದು ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸಲಾಗಿತ್ತು. ಸ್ಥಳೀಯರ ಪ್ರಕಾರ ಸೇತುವೆಯನ್ನು ನಿರ್ವಹಣೆಗಾಗಿ ಆರು ತಿಂಗಳ ಕಾಲ ಬಂದ್ ಮಾಡಲಾಗಿತ್ತು. 'ಒರೆವಾ' ಎನ್ನುವ ಖಾಸಗಿ ಸಂಸ್ಥೆಗೆ ಸೇತುವೆಯ ಕಾಮಗಾರಿಯನ್ನು ಮೋರ್ಬಿಯ ಸ್ಥಳೀಯ ಪ್ರಾಧಿಕಾರವು ಹಸ್ತಾಂತರಿಸಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಮಚ್ಚು ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದ್ದ ತೂಗುಸೇತುವೆ ಕುಸಿದಿರುವುದು —ಪಿಟಿಐ ಚಿತ್ರ

ಗೃಹ ಖಾತೆಯ ರಾಜ್ಯ ಸಚಿವ ಹರ್ಷ್ ಸಂಘ್ವಿ ಮಾತನಾಡಿ, 'ತೂಗುಸೇತುವೆ ಸಂಜೆ 6.30ರ ವೇಳೆಗೆ ಕುಸಿದು ಬಿದ್ದಿದೆ. ಈ ವೇಳೆ 150 ಜನರು ಸೇತುವೆಯ ಮೇಲಿದ್ದರು. ಇದುವರೆಗೆ 70 ಜನರನ್ನು ರಕ್ಷಿಸಲಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ರಕ್ಷಿಸಲಾದವರಲ್ಲಿ ಬಹುತೇಕರು ಅಪಾಯದಿಂದ ಪಾರಾಗಿದ್ದಾರೆ. ಇನ್ನೂ ರಕ್ಷಣಾ ಕಾರ್ಯ ಮುಂದುವರಿದಿದೆ' ಎಂದು ತಿಳಿಸಿದ್ದಾರೆ.

ಸ್ಥಳಕ್ಕೆ ಭೇಟಿ ನೀಡಿದ ಗುಜರಾತ್‌ನ ಕಾರ್ಮಿಕ ಸಚಿವ ಬ್ರಿಜೇಶ್ ಮೆರ್ಜಾ, 'ಘಟನೆಯಲ್ಲಿ 60ಕ್ಕೂ ಹೆಚ್ಚು ಮಂದಿ ಸಾವಿಗೀಡಾಗಿದ್ದಾರೆ' ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಆದರೆ, ದುರಂತದಲ್ಲಿ ಸಾವಿಗೀಡಾದವರ ಸಂಖ್ಯೆಯನ್ನು ಸರ್ಕಾರ ಇನ್ನೂ ಅಧಿಕೃತವಾಗಿ ಘೋಷಿಸಿಲ್ಲ. ಸಾವಿಗೀಡಾದವರಲ್ಲಿ ಮಹಿಳೆಯರು ಮತ್ತು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿದ್ದರು ಎಂದು ಮೂಲಗಳು ತಿಳಿಸಿವೆ.

ಘಟನಾ ಸಂಬಂಧಿ ವಿಡಿಯೊಗಳಲ್ಲಿ ಸೇತುವೆಯ ಹಗ್ಗಕ್ಕೆ ನೇತಾಡುತ್ತಿದ್ದವರು ಸಹಾಯಕ್ಕಾಗಿ ಜನರಿಗೆ ಯಾಚಿಸುತ್ತಿರುವ ದೃಶ್ಯಗಳು ಮನಕಲಕುವಂತಿವೆ.

ಭಾರತೀಯ ನೌಕಾಪಡೆಯ 50 ಸಿಬ್ಬಂದಿಯೊಂದಿಗೆ ಎನ್‌ಡಿಆರ್‌ಎಫ್‌ನ 3 ತುಕಡಿಗಳು, ಐಎಎಫ್‌ನ 30 ಸಿಬ್ಬಂದಿ ಜೊತೆಗೆ ಸೇನಾ ಸಿಬ್ಬಂದಿ ಹಾಗೂ 7 ಅಗ್ನಿಶಾಮಕ ದಳದ ತಂಡಗಳು ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಾಗಿ ಮೋರ್ಬಿಗೆ ತೆರಳಿವೆ.

'ಸೇತುವೆ ವೀಕ್ಷಣೆಗಾಗಿ ಒಟ್ಟು 400 ಟಿಕೆಟ್‌ಗಳನ್ನು ವಿತರಿಸಲಾಗಿತ್ತು. ಘಟನೆಯ ಸಮಯದಲ್ಲಿ ಸೇತುವೆಯ ಮೇಲೆ ಎಷ್ಟು ಜನರಿದ್ದರು ಎಂದು ನಿಖರವಾಗಿ ಹೇಳುವುದು ಕಷ್ಟ.

9ನೇ ಪುಟ ನೋಡಿ

67 ಸಾಧಕರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಗರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಹಿತ್ಯ, ವಿಜ್ಞಾನ, ಸಮಾಜಸೇವೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವ 67 ಪ್ರಮುಖರನ್ನು 2022ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.


ಪ್ರಶಸ್ತಿ ಪುರಸ್ಕೃತರ ಪಟ್ಟಿಯನ್ನು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ಭಾನುವಾರ ಪ್ರಕಟಿಸಿದರು. ನವೆಂಬರ್ 1ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಭಾರತೀಯ ಬಾಹ್ಯಾಕಾಶ ಸಂಸ್ಥೆಯ (ಇಸ್ರೊ) ಮಾಜಿ ನಿರ್ದೇಶಕ ಕೆ.ಶಿವನ್, ಹೂವಿನಹಡಗಲಿಯ ಪೌರಕಾರ್ಮಿಕ ಮಹಿಳೆ ಮಲ್ಲಮ್ಮ, ಸಾಹಿತಿಗಳಾದ ಪ್ರೊ.ಅ.ರಾ.ಮಿತ್ರ, ಪ್ರೊ.ಎಂ.ಕೃಷ್ಣೇಗೌಡ, ಸೋಲಿಗರಲ್ಲಿ ಸಹಕಾರ ಚಳವಳಿಯ ಅರಿವು ಮೂಡಿಸುತ್ತಿರುವ ಸೋಲಿಗರ ಮಾದಮ್ಮ, ಹಾವೇರಿಯ ವೀರಗಾಸೆ ಕಲಾವಿದ ಮಹೇಶ್ವರ ಗೌಡ ಲಿಂಗದಹಳ್ಳಿ ಅವರೂ ಪಟ್ಟಿಯಲ್ಲಿ ಇದ್ದಾರೆ.


ಸಚಿವ ವಿ.ಸುನಿಲ್ ಕುಮಾರ್ ಅಧ್ಯಕ್ಷತೆಯ ಆಯ್ಕೆ ಸಲಹಾ ಸಮಿತಿ ಹಲವು ಹೆಸರುಗಳನ್ನು ಶಿಫಾರಸು ಮಾಡಿತ್ತು. ಮುಖ್ಯಮಂತ್ರಿ ಅಧ್ಯಕ್ಷತೆಯ ಉನ್ನತಮಟ್ಟದ ಸಭೆಯಲ್ಲಿ ಪುರಸ್ಕೃತರ ಪಟ್ಟಿಯನ್ನು ಅಂತಿಮಗೊಳಿಸಲಾಗಿತ್ತು.



ಕೆ. ಶಿವನ್



ಅ.ರಾ. ಮಿತ್ರ.



ದತ್ತಣ್ಣ



ಪ್ರೊ. ಕೃಷ್ಣೇಗೌಡ

'ನಾನು ಯಾವುದೇ ಪ್ರಶಸ್ತಿ ಬಯಸಿದವನಲ್ಲ. ವಿಜ್ಞಾನ ಕ್ಷೇತ್ರದ ಸಾಧನೆ ಗುರುತಿಸಿ, ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಿರುವುದು ಸಂತಸ ತಂದಿದೆ. ಇಸ್ರೊ ಪರವಾಗಿ ಈ ಪ್ರಶಸ್ತಿ ಸ್ವೀಕರಿಸುತ್ತೇನೆ'

ಕೆ.ಶಿವನ್, ಇಸ್ರೊ ಮಾಜಿ ಅಧ್ಯಕ್ಷ

ನಿವೃತ್ತ ಐಎಎಸ್ ಅಧಿಕಾರಿ ಎಂ.ಮದನ್ ಗೋಪಾಲ್, ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಕೊಡಗು ಜಿಲ್ಲೆಯ ಗಣೇಶ್ ತಿಮ್ಮಯ್ಯ, ಚಿಕ್ಕಮಗಳೂರು ಜಿಲ್ಲೆಯ ಚಂದ್ರಶೇಖರ್ ನಾರಣಾಪುರ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾ ನಿರ್ದೇಶಕ ಡಾ.ಎಲ್. ಎಚ್. ಮಂಜುನಾಥ್, ಪರಿಸರ ಸೇವೆಯಲ್ಲಿ ತೊಡಗಿರುವ ರಾಮನಗರದ ಸಾಲುಮರದ ನಿಂಗಣ್ಣ, ಇಂಗ್ಲಿಷ್ ಕಡಲ್ಗಾಲುವೆ ಈಜಿರುವ ಅಂಗವಿಕಲ ಈಜುಪಟು ರಾಘವೇಂದ್ರ ಅಣ್ವೇಕರ್, ಉಡುಪಿ ಜಿಲ್ಲೆಯ ದೈವ ನರ್ತಕ ಗುಡ್ಡ ಪಾಣಾರ ಕೂಡ ಪುರಸ್ಕೃತರ ಪಟ್ಟಿಯಲ್ಲಿದ್ದಾರೆ.

₹ 5 ಲಕ್ಷ ನಗದು, 25 ಗ್ರಾಂ ಚಿನ್ನ

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಈ ಬಾರಿ ₹ 5 ಲಕ್ಷ ನಗದು ಮತ್ತು 25 ಗ್ರಾಂ ಚಿನ್ನ ಹಾಗೂ ಪ್ರಶಸ್ತಿ ಫಲಕ ನೀಡಿ ಗೌರವಿಸಲಾಗುತ್ತದೆ. ಹಿಂದೆ ₹ 1 ಲಕ್ಷ ನಗದು ನೀಡಲಾಗುತ್ತಿತ್ತು. ಈ ವರ್ಷದಿಂದ ಪ್ರಶಸ್ತಿ ಜತೆಗಿನ ನಗದು ಮೊತ್ತವನ್ನು ₹ 5 ಲಕ್ಷಕ್ಕೆ ಹೆಚ್ಚಿಸಲಾಗಿದೆ.

5ನೇ ಪುಟ ನೋಡಿ

ಪ್ರತಿಕ್ರಿಯೆ 5

ಚಿನಕುರಳಿ

ಪ್ರಕಾಶ್ ಶೆಟ್ಟಿ



ರಸ್ತೆಗುಂಡಿಯಿಂದ ಮತ್ತೊಂದು ಅಪಘಾತ: ಸಾವು

ಬೆಂಗಳೂರು: ಯಲಹಂಕ ಸಂಚಾರ ಠಾಣೆ ವ್ಯಾಪ್ತಿಯ ಅಟ್ಟೂರು ಮುಖ್ಯ ರಸ್ತೆಯಲ್ಲಿ ಕಾರು ಹಾಗೂ ಬೈಕ್ ನಡುವೆ ಶನಿವಾರ ರಾತ್ರಿ ಅಪಘಾತ ಸಂಭವಿಸಿದ್ದು, ಬೈಕ್ ಹಿಂಬದಿ ಸವಾರ ಹರ್ಷದ್ (22) ಎಂಬುವರು ಮೃತಪಟ್ಟಿದ್ದಾರೆ.

'ಹದಗೆಟ್ಟ ರಸ್ತೆಯಲ್ಲಿರುವ ಗುಂಡಿಗಳಿಂದ ಅಪಘಾತ ಸಂಭವಿಸಿದೆ' ಎಂಬುದಾಗಿ ಸ್ಥಳೀಯರು ಆರೋಪಿಸಿದ್ದು, ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ. 3B

ಭಗತ್ ಸಿಂಗ್ ನೇಣು ಪಾತ್ರದ ಅಭ್ಯಾಸ: ವಿದ್ಯಾರ್ಥಿ ಸಾವು

ಚಿತ್ರದುರ್ಗ: ಸ್ವಾತಂತ್ರ್ಯ ಹೋರಾಟ ಗಾರ ಭಗತ್ ಸಿಂಗ್ ನೇಣು ಗಂಬಕ್ಕೆ ಏರುವ ಪಾತ್ರದ ಅಭ್ಯಾಸದ ವೇಳೆ ಆಕಸ್ಮಿಕವಾಗಿ ಹಗ್ಗವು ಕೊರಳಿಗೆ ಉರುಳಾಗಿ ವಿದ್ಯಾರ್ಥಿಯೊಬ್ಬ ಮೃತಪಟ್ಟಿದ್ದಾನೆ.



ಸಂಜಯ್ ಗೌಡ

ನಗರದ ಕೆಳಗೋಟೆ ನಿವಾಸಿ ನಾಗರಾಜ ಅವರ ಮಗ, ಎಸ್‌ಎಲ್‌ವಿ ಶಿಕ್ಷಣ ಸಂಸ್ಥೆಯಲ್ಲಿ 7ನೇ ತರಗತಿ ಓದುತ್ತಿದ್ದ ಸಂಜಯ್ ಗೌಡ (12) ಮೃತ ವಿದ್ಯಾರ್ಥಿ.

'ರಾಜ್ಯೋತ್ಸವದ ಅಂಗವಾಗಿ ನವೆಂಬರ್ 1ರಂದು ಹಮ್ಮಿಕೊಂಡಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಗತ್‌ಸಿಂಗ್ ಪಾತ್ರವನ್ನು ಸಂಜಯ್‌ಗೆ ನೀಡಲಾಗಿತ್ತು. ಮನೆಯಲ್ಲಿ ಯಾರೂ ಇಲ್ಲದಾಗ ಆ ಪಾತ್ರದ ಅಭ್ಯಾಸ ನಡೆಸುತ್ತಿದ್ದಾಗ ಈ ಘಟನೆ ನಡೆದಿದೆ' ಎಂದು ಬಡಾವಣೆ ಠಾಣೆ ಪೊಲೀಸರು ಮಾಹಿತಿ ನೀಡಿದ್ದಾರೆ.

5ನೇ ಪುಟ ನೋಡಿ

ಒಳ ಪುಟಗಳು

ದಯಾಮರಣಕ್ಕೆ ಗುತ್ತಿಗೆದಾರ ಮನವಿ 3B
ಬಂಡೆಮಠದ ಶ್ರೀ ಆತ್ಮಹತ್ಯೆ: ಮೂವರ ಬಂಧನ 3B
ಪೌರಕಾರ್ಮಿಕ ಮಹಿಳೆಗೆ ರಾಜ್ಯೋತ್ಸವ ಪ್ರಶಸ್ತಿ 5
ಬಳ್ಳಾರಿ ಮೂಲಕ ಬೆಂಗಳೂರು-ಹೈದರಾಬಾದ್‌ಗೆ ವಿಮಾನ 8
ನವೆಂಬರ್ 8ಕ್ಕೆ ಪೂರ್ಣ ಚಂದ್ರಗ್ರಹಣ 9

ಸಿಎಎ ಸಿಂಧುತ್ವ: ಇಂದು 'ಸುಪ್ರೀಂ' ವಿಚಾರಣೆ

ನವದೆಹಲಿ (ಪಿಟಿಐ): ಪೌರತ್ವ (ತಿದ್ದುಪಡಿ) ಕಾಯ್ದೆಯ (ಸಿಎಎ) ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳೂ ಸೇರಿ ಸುಮಾರು 232 ಅರ್ಜಿಗಳ ವಿಚಾರಣೆಯನ್ನು ಸೋಮವಾರ ಕೈಗೆತ್ತಿಕೊಳ್ಳಲು ಸುಪ್ರೀಂ ಕೋರ್ಟ್ ನಿರ್ಧರಿಸಿದೆ.

ಮುಖ್ಯ ನ್ಯಾಯಮೂರ್ತಿ ಯು.ಯು. ಲಲಿತ್ ಮತ್ತು ನ್ಯಾಯಮೂರ್ತಿಗಳಾದ ಎಸ್. ರವೀಂದ್ರ ಭಟ್ ಮತ್ತು ಬೇಲಾ ಎಂ. ತ್ರಿವೇದಿ ಇರುವ ತ್ರಿಸದಸ್ಯ ಪೀಠವು ಈ ಅರ್ಜಿಗಳ ವಿಚಾರಣೆ ನಡೆಸಲಿದೆ. ಅರ್ಜಿಗಳ ಕುರಿತು ಪ್ರತಿಕ್ರಿಯೆ ನೀಡಲು ಕೇಂದ್ರ ಸರ್ಕಾರಕ್ಕೆ ನಾಲ್ಕು ವಾರಗಳ ಸಮಯಾವಕಾಶ ನೀಡಿರುವ ಸುಪ್ರೀಂ ಕೋರ್ಟ್, ಈ ಕಾಯ್ದೆ ಪ್ರಶ್ನಿಸಿ ಸಲ್ಲಿಕೆ ಆಗಿರುವ ಅರ್ಜಿಗಳ ವಿಚಾರಣೆ ನಡೆಸದಂತೆ ಹೈಕೋರ್ಟ್‌ಗಳನ್ನು ತಡೆದಿದೆ.

ಈ ಕಾಯ್ದೆ ಪ್ರಶ್ನಿಸಿ ಅರ್ಜಿ ಸಲ್ಲಿಸಿದ್ದ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (ಐಯುಎಂಎಲ್), ಮೂಲಭೂತ ಹಕ್ಕಾದ ಸಮಾನತೆಯ ಹಕ್ಕನ್ನು ಈ ಕಾಯ್ದೆಯು ಉಲ್ಲಂಘಿಸುತ್ತದೆ ಎಂದು ಹೇಳಿತ್ತು. ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್, ಆರ್‌ಜೆಡಿ ನಾಯಕ ಮನೋಜ್ ಝಾ, ಟಿಎಂಸಿ ಸಂಸದೆ ಮಹುವಾ ಮೋಯಿತ್ರಾ ಮತ್ತು ಎಐಎಂಐಎಂ ನಾಯಕ ಅಸಾದುದ್ದೀನ್ ಓವೈಸಿ ಮುಂತಾದವರು ಈ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಅರ್ಜಿ ಸಲ್ಲಿಸಿದ್ದರು.

‘ನ್ಯಾಷನಲ್ ಕಾಲೇಜು ಮೈದಾನದಲ್ಲಿ ನ. 6ರಂದು ಖರ್ಗೆಗೆ ಅಭಿನಂದನೆ’

ಬೆಂಗಳೂರು: ಎಐಸಿಸಿ ನೂತನ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ನ. 6ರಂದು ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಅಭಿನಂದನೆ ಕಾರ್ಯಕ್ರಮ ಹಮ್ಮಿಕೊಳ್ಳಲು ಕೆಪಿಸಿಸಿ ನಿರ್ಧರಿಸಿದೆ.

ಕಾರ್ಯಕ್ರಮದ ಸ್ವರೂಪದ ಕುರಿತಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ಸೇರಿದಂತೆ ಕಾಂಗ್ರೆಸ್ ನಾಯಕರು ಭಾನುವಾರ ಚರ್ಚೆ ನಡೆಸಿದರು.

‘ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಪಕ್ಷದ ಟಿಕೆಟ್‌ನಿಂದ ಸ್ಪರ್ಧಿಸಲು ಬಯಸುವವರು ನ. 5ರಿಂದ 15ರ ಒಳಗೆ ಅರ್ಜಿ ಸಲ್ಲಿಸುವಂತೆ ಕೂಡಾ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಮಹದಾಯಿ ಮತ್ತು ಕೃಷ್ಣಾ ಜಲಾನಯನ ಪ್ರದೇಶ ಅಭಿವೃದ್ಧಿಗೆ ಆಗ್ರಹಿಸಿ ಟ್ರ್ಯಾಕ್ಟರ್ ರ್‍ಯಾಲಿ, ಡಿಸೆಂಬರ್‌ನಲ್ಲಿ ಮಂಗಳೂರಿನಲ್ಲಿ ಮೀನುಗಾರರ ಸಮಾವೇಶ ಹಮ್ಮಿಕೊಳ್ಳುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು’ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಕನ್ನಡ ಸಂಘರ್ಷ ಸಮಿತಿಯ 44ನೇ ಸಂಸ್ಥಾಪನಾ ದಿನಾಚರಣೆ

‘ಪ್ರಾದೇಶಿಕ ಭಾಷೆ ಹತ್ತಿಕ್ಕುವ ಯತ್ನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇತ್ತೀಚಿನ ದಿನಗಳಲ್ಲಿ ಸ್ಥಳೀಯ ಭಾಷೆಗಳನ್ನು ಹತ್ತಿಕ್ಕುವ ವಾತಾವರಣ ದಟ್ಟವಾಗುತ್ತಿದೆ. ಪ್ರಾದೇಶಿಕ ಭಾಷೆಗಳಿಗೆ ಆದ್ಯತೆ ದೊರೆಯುತ್ತಿಲ್ಲ’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ನಗರದಲ್ಲಿ ಭಾನುವಾರ ನಡೆದ ಕನ್ನಡ ಸಂಘರ್ಷ ಸಮಿತಿಯ 44ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಪ್ರಾದೇಶಿಕತೆ ರಾಷ್ಟ್ರೀಯವಾದಕ್ಕೆ ವಿರುದ್ಧವಲ್ಲ. ಪ್ರಾದೇಶಿಕ ಭಾಷೆಗಳ ಘನತೆ ಕಾಪಾಡಲು ಹೋರಾಟಗಳು ನಡೆಯಬೇಕು. ಅದಕ್ಕಾಗಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮ ರೂಪಿಸಿ ಒಟ್ಟಾಗಿ ಹೋರಾಟ ರೂಪಿಸುವ ಅತ್ಯವಿದೆ’ ಎಂದು ಅಭಿಪ್ರಾಯಪಟ್ಟರು.

‘ಉದ್ಯೋಗದಲ್ಲೂ ಸ್ಥಳೀಯರಿಗೆ ಆದ್ಯತೆ ನೀಡಬೇಕು. ಒಕ್ಕೂಟ ವ್ಯವಸ್ಥೆಯಲ್ಲಿ ರಾಷ್ಟ್ರೀಯ ಉದ್ಯೋಗ ನೀತಿಯನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿ, ಸ್ಥಳೀಯರಿಗೆ ಉದ್ಯೋಗದಲ್ಲಿ ಮೀಸಲಾತಿ ದೊರೆಯುವಂತೆ ಮಾಡಬೇಕು. ವಿವಿಧತೆಯಲ್ಲಿ ಏಕತೆ ಕಾಣುವುದೇ ಸೌಂದರ್ಯ. ಕನ್ನಡ ಭಾಷೆಯನ್ನು ಜನರ ಮುಖಾಂತರ ನೋಡುವ ಹಾಗೂ ಕಟ್ಟುವ ಕೆಲಸವಾಗಬೇಕು. ಭಾವ, ಬುದ್ಧಿ, ಸಂಸ್ಕೃತಿಯನ್ನು ಬಿಂಬಿಸುವ ಜನ ಸಮುದಾಯವೇ ಭಾಷೆಗೆ ಮುಖ್ಯವಾಗಿದೆ’ ಎಂದು ಹೇಳಿದರು.



ನಗರದಲ್ಲಿ ಭಾನುವಾರ ನಡೆದ ಕನ್ನಡ ಸಂಘರ್ಷ ಸಮಿತಿಯ 44ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಕನ್ನಡ ಕಟ್ಟಾಳು ಪ್ರಶಸ್ತಿಯನ್ನು ಸಮೀವುಲ್ಲಾ ಖಾನ್ ಮತ್ತು ನಿಸ್ಸೀಮ ಕನ್ನಡತಿ ಪ್ರಶಸ್ತಿಯನ್ನು ಡಾ. ರಾಧಿಕಾ ರಂಜನಿ ಅವರಿಗೆ ಪ್ರದಾನ ಮಾಡಲಾಯಿತು. ವೀರಭದ್ರ ಚನ್ನಮಲ್ಲದೇಶೀಕೇಂದ್ರ ಸ್ವಾಮೀಜಿ, ಎಂ.ಎಸ್. ಶಶಿಕಲಾಗೌಡ, ಎ.ಎಸ್. ನಾಗರಾಜಸ್ವಾಮಿ ಇದ್ದರು.

ವೀರಭದ್ರ ಚನ್ನಮಲ್ಲದೇಶೀಕೇಂದ್ರ ಸ್ವಾಮೀಜಿ ಮಾತನಾಡಿ, ‘ಕನ್ನಡ ಭಾಷೆ, ಸಂಸ್ಕೃತಿ ಮೇಲೆ ಆಕ್ರಮಣ ನಡೆಯುತ್ತಿದೆ. ಆಡಳಿತ ನಡೆಸುವವರು ಇದನ್ನು ತಡೆಯುವ ಇಚ್ಛಾಶಕ್ತಿ ತೋರಬೇಕು’ ಎಂದು ಅಭಿಪ್ರಾಯಪಟ್ಟರು.

ಕನ್ನಡ ಕಟ್ಟಾಳು ಪ್ರಶಸ್ತಿಯನ್ನು ಸಮೀವುಲ್ಲಾ ಖಾನ್ ಅವರಿಗೆ ನಿಸ್ಸೀಮ ಕನ್ನಡತಿ ಪ್ರಶಸ್ತಿಯನ್ನು ಡಾ. ರಾಧಿಕಾ ರಂಜನಿ ಅವರಿಗೆ ಪ್ರದಾನ ಮಾಡಲಾಯಿತು.

ಸಾಹಿತಿ ಎಂ.ಎಸ್. ಶಶಿಕಲಾ ಗೌಡ, ಸಮಿತಿ ಅಧ್ಯಕ್ಷ ಎ.ಎಸ್. ನಾಗರಾಜಸ್ವಾಮಿ, ಪ್ರಧಾನ ಕಾರ್ಯದರ್ಶಿ ತಾ.ಸಿ. ತಿಮ್ಮಯ್ಯ ಹಾಗೂ ಕಾರ್ಯದರ್ಶಿ ಇಂದಿರಾ ಶರಣ್ ಜಮ್ಮಲದಿನ್ನಿ ಇದ್ದರು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ ಜೋಶಿ ಎಚ್ಚರಿಕೆ

ಎಸ್‌ಎಸ್‌ಸಿ ಕನ್ನಡ ವಿರೋಧಿ ನೀತಿ ವಿರುದ್ಧ ನ್ಯಾಯಾಂಗ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ಟಾಫ್ ಸೆಲೆಕ್ಷನ್ ಕಮಿಷನ್‌ನ (ಎಸ್‌ಎಸ್‌ಸಿ) ಕನ್ನಡ ವಿರೋಧಿ ನೀತಿ ವಿರುದ್ಧ ನ್ಯಾಯಾಂಗ ಹೋರಾಟಕ್ಕೆ ಚಿಂತನೆ ನಡೆಸಲಾಗಿದೆ’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

‘ಎಸ್‌ಎಸ್‌ಸಿ ನಡೆಸುತ್ತಿರುವ ಪ್ರವೇಶ ಪರೀಕ್ಷೆಯಲ್ಲಿ ಕನ್ನಡಿಗರಿಗೆ ನಿರಂತರವಾಗಿ ಅನ್ಯಾಯವಾಗುತ್ತಿದೆ. ಕಾನ್‌ಸ್ಟೆಬಲ್ ಹುದ್ದೆಗಳಿಗೆ ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಮಾತ್ರ ಪ್ರವೇಶ ಪರೀಕ್ಷೆ ನಡೆಸುತ್ತಿರುವುದನ್ನು ಆರಂಭದಿಂದಲೂ ವಿರೋಧಿಸಲಾಗಿದೆ. ಹಿಂದಿ ಭಾಷೆಗೆ ಬೆಣ್ಣೆ, ಕನ್ನಡಕ್ಕೆ ಸುಣ್ಣ ಎನ್ನುವ ರೀತಿಯಲ್ಲಿ ಎಸ್‌ಎಸ್‌ಸಿ ನಡೆದುಕೊಳ್ಳುತ್ತಿರುವುದನ್ನು ಸಹಿಸಿಕೊಳ್ಳಲು ಸಾಧ್ಯವೇ ಇಲ್ಲ’ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಗಡಿ ಭದ್ರತಾ ಪಡೆ (ಬಿಎಸ್‌ಎಫ್), ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಸೇರಿ ಕೇಂದ್ರ ಭದ್ರತಾ ಪಡೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಇತ್ತೀಚೆಗೆ ಅರ್ಜಿ ಆಹ್ವಾನಿಸಿರುವ ಎಸ್‌ಎಸ್‌ಸಿ, ಮತ್ತೆ ಪ್ರಾದೇಶಿಕ ಭಾಷೆಗಳ ವಿರೋಧಿ ನೀತಿಯನ್ನು ಅನುಸರಿಸಿದೆ. ಕಂಪ್ಯೂಟರ್ ಆಧರಿತ ಈ ಪರೀಕ್ಷೆಯಲ್ಲಿ ಕೇವಲ ಇಂಗ್ಲಿಷ್, ಹಿಂದಿ ಭಾಷೆ ಮಾತ್ರ ಇರಲಿದೆ. ಅಭ್ಯರ್ಥಿಗಳು ಮಾನ್ಯತೆ ಪಡೆದ ಯಾವುದೇ ಮಂಡಳಿಯಿಂದ 10ನೇ ತರಗತಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಎನ್ನುವ ನಿಯಮವಿದೆ. 10ನೇ ತರಗತಿಯವರೆಗೆ ಓದಿದ ಪ್ರಾದೇಶಿಕ ಅಭ್ಯರ್ಥಿಗಳಿಗೆ ಹಿಂದಿ ಅಥವಾ ಇಂಗ್ಲಿಷ್ ಭಾಷೆಯಲ್ಲಿ ಎಷ್ಟರ ಮಟ್ಟಿಗೆ ಪ್ರಾಬಲ್ಯ ಇರುವುದಕ್ಕೆ ಸಾಧ್ಯ’ ಎಂದು ಪ್ರಶ್ನಿಸಿದ್ದಾರೆ.

‘ಪರಿಷತ್ತಿನ ಕೆಲ ಸದಸ್ಯರು ಎಸ್‌ಎಸ್‌ಸಿಯ ಕನ್ನಡ ವಿರೋಧಿ ನೀತಿ ಪ್ರಶ್ನಿಸಿ, ನ್ಯಾಯಾಲಯದ ಮೆಟ್ಟಿಲೇರಲು ಸೂಚಿಸಿದ್ದಾರೆ. ಆದ್ದರಿಂದ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅರಳಿ ನಾಗರಾಜ್ ಅವರೊಂದಿಗೆ ಸಮಾಲೋಚನೆ ನಡೆಸಿ, ನ್ಯಾಯಾಂಗ ಹೋರಾಟ ನಡೆಸುತ್ತೇವೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನವಕರ್ನಾಟಕ: ವಿಶೇಷ ರಿಯಾಯಿತಿ

ಬೆಂಗಳೂರು: ಕನ್ನಡ ರಾಜ್ಯೋತ್ಸವದ ಪ್ರಯುಕ್ತ ನವಕರ್ನಾಟಕ ಪ್ರಕಾಶನವು ಕನ್ನಡ ಪುಸ್ತಕಗಳ ಮೇಲೆ ವಿಶೇಷ ರಿಯಾಯಿತಿ ಘೋಷಿಸಿದೆ.

ನವೆಂಬರ್ ತಿಂಗಳು ಪೂರ್ತಿ ವಿಶೇಷ ರಿಯಾಯಿತಿ ನೀಡಲಾಗುತ್ತದೆ. ಬಹುತೇಕ ಪುಸ್ತಕಗಳಿಗೆ ಶೇ 10 ರಷ್ಟು ರಿಯಾಯಿತಿ ನೀಡಲಾಗಿದೆ. ಶಾಲಾ-ಕಾಲೇಜುಗಳು, ಸಂಘ–ಸಂಸ್ಥೆಗಳು ತಮ್ಮ ವಾಚನಾಲಯಗಳಿಗೆ ಪುಸ್ತಕಗಳನ್ನು ಖರೀದಿಸಲು ಈ ಅವಕಾಶ ಬಳಸಿಕೊಳ್ಳಬೇಕು.

ಕೆಂಪೇಗೌಡ ರಸ್ತೆಯ ದೇವಾಂಗ ಟವರ್ ಹಾಗೂ ಕ್ರೆಸೆಂಟ್ ರಸ್ತೆಯ ಎಂಬೆಸಿ ಸೆಂಟರ್‌ನಲ್ಲಿ ಮಳಿಗೆಯಿದೆ ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 9480686862, 9480686858

ಹಣ ಪಡೆದು ಹುದ್ದೆ ನೀಡಿದ ಸಿದ್ದರಾಮಯ್ಯ: ಆರೋಪ

ಬೆಂಗಳೂರು: ‘ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಚೆಕ್ ರೂಪದಲ್ಲಿ ₹ 1.30 ಕೋಟಿ ಪಡೆದು ಎಲ್. ವಿವೇಕಾನಂದ ಎಂಬವರಿಗೆ ಪ್ರಭಾವಿ ಹುದ್ದೆ ನೀಡಿದ್ದಾರೆ’ ಎಂದು ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕದ ಅಧ್ಯಕ್ಷ ರಮೇಶ್ ಎನ್. ಆರ್. ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, ‘ಕಿಂಗ್ಸ್ ಕೋರ್ಟ್ ವಿವೇಕ್ ಎಂದೇ ಗುರುತಿಸಿಕೊಂಡಿರುವ ಎಲ್. ವಿವೇಕಾನಂದ ಅವರಿಂದ 2014ರ ಜು. 28ರಂದು ₹ 1.30 ಕೋಟಿ ಮೌಲ್ಯದ ಚೆಕ್ ಅನ್ನು ಸಿದ್ದರಾಮಯ್ಯ ಪಡೆದಿದ್ದಾರೆ. ಅವರನ್ನು ಬೆಂಗಳೂರು ಟರ್ಫ್ ಕ್ಲಬ್ (ಬಿಟಿಸಿ) ಉಸ್ತುವಾರಿ ಹುದ್ದೆಗೆ ನೇಮಿಸಿದ್ದರು. ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿಯೂ ನೇಮಿಸಿದ್ದರು’ ಎಂದು ದೂರಿದರು.

‘ಸಾಲ ಪಡೆದುಕೊಂಡಿರುವುದಾಗಿ ಲೋಕಾಯುಕ್ತ ಮತ್ತು ಚುನಾವಣೆ ಆಯೋಗಕ್ಕೆ ಸಿದ್ದರಾಮಯ್ಯ ಮಾಹಿತಿ ನೀಡಿದ್ದಾರೆ. ಆದರೆ, ಅವರಿಂದ ಹಣ ಪಡೆದು ಹುದ್ದೆ ನೀಡಿದ್ದಾರೆ. ಇದು ಕಾನೂನು ಪ್ರಕಾರ ಅಕ್ರಮ. ಕೇಂದ್ರ ಸರ್ಕಾರದ ಗೃಹ ಇಲಾಖೆಯ ನಿಯಮ 4.1ರ ಅನ್ವಯ, ಮುಖ್ಯಮಂತ್ರಿ ಅಥವಾ ಯಾವುದೇ ವ್ಯಕ್ತಿಗೆ ಪ್ರಭಾವಿ ಹುದ್ದೆ ನೀಡಿ, ಫಲಾನುಭವಿಯಿಂದ ಉಡುಗೊರೆ, ನಗದು ಅಥವಾ ಯಾವುದೇ ರೂಪದಲ್ಲಿ ಹಣ ಸ್ವೀಕರಿಸುವುದು ಅಪರಾಧ’ ಎಂದರು.

‘ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ ಸಿದ್ಧರಾಮಯ್ಯ ವಿರುದ್ಧ ಈ ಬಗ್ಗೆ ಲೋಕಾಯುಕ್ತದಲ್ಲಿ ದೂರು ದಾಖಲಿಸಲಾಗುತ್ತಿದೆ. ಭ್ರಷ್ಟಾಚಾರ, ಅಧಿಕಾರ ದುರುಪಯೋಗ, ವಂಚನೆ ಪ್ರಕರಣ ದಾಖಲಿಸಲಾಗುತ್ತಿದೆ’ ಎಂದರು.

‘ಈ ಹಗರಣವನ್ನು ನ್ಯಾಯಾಂಗ ತನಿಖೆ ಅಥವಾ ಸಿಐಡಿಗೆ ವಹಿಸುವಂತೆ ಮುಖ್ಯಮಂತ್ರಿ ಅವರಿಗೂ ಪತ್ರ ಬರೆಯಲಾಗಿದೆ. ಜನಪ್ರತಿನಿಧಿಗಳ ನ್ಯಾಯಾಲಯದಲ್ಲೂ ಪ್ರಕರಣ ದಾಖಲಿಸಲಾಗುವುದು’ ಎಂದರು.

‘ಸಾಲ ಪಡೆದದ್ದು ನಿಜ, ತನಿಖೆಯಾಗಲಿ’

‘ನಾನು ವಿವೇಕ ಅವರ ಬಳಿ ಒಂದೂವರೆ ಕೋಟಿ ಸಾಲ ಪಡೆದಿದ್ದು ನಿಜ. ಅದನ್ನು ಇನ್ನೂ ತೀರಿಸಿಲ್ಲ. ಅವರು ನನ್ನ 40 ವರ್ಷಗಳ ಗೆಳೆಯ. ನಿವೇಶನ ಖರೀದಿಗೆ ಸಾಲ ಮಾಡುವುದು ತಪ್ಪಾ? ಅವರನ್ನು ಬಿಟಿಸಿ ಸದಸ್ಯನನ್ನಾಗಿ ಮಾಡಿದ್ದು ಕೂಡ ನಿಜ. ಆದರೆ, ಸಾಲ ಪಡೆದದ್ದಕ್ಕೂ ನೇಮಕ ಮಾಡಿದ್ದಕ್ಕೂ ಸಂಬಂಧ ಇಲ್ಲ’ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

‘ಸಾಲ ಪಡೆದಿರುವ ಈ ಪ್ರಕರಣವನ್ನು ಲೋಕಾಯುಕ್ತ ತನಿಖೆಗೆ ವಹಿಸುವುದಾದರೆ ನನ್ನ ವಿರೋಧ ಇಲ್ಲ. ತನಿಖೆ ಮಾಡಲಿ. ನಾನೇನು ಬಸವರಾಜ ಬೊಮ್ಮಾಯಿ ಅವರ ರೀತಿ ದಾಖಲೆ ಕೊಡಿ ಎಂದು ಕೇಳಲ್ಲ. ರಾಜ್ಯದಲ್ಲಿ ಸರ್ಕಾರದ ಭ್ರಷ್ಟಾಚಾರದಿಂದ ಜನ ಸಾಯುತ್ತಿದ್ದಾರೆ. ಇದರ ಬಗ್ಗೆ ತನಿಖೆ ಮಾಡಿಸಿ ಎಂದರೆ ಸಿದ್ದರಾಮಯ್ಯ ಸಾಲ ಪಡೆದಿದ್ದು ತನಿಖೆ ಮಾಡಿಸುತ್ತೇವೆ ಎನ್ನುತ್ತಾರೆ’ ಎಂದರು.

ಶಾ. ಬಾಲುರಾವ್ ಪ್ರಶಸ್ತಿ ಪ್ರದಾನ ಸಮಾರಂಭ

‘ಕನ್ನಡದಲ್ಲಿ ವೈಜ್ಞಾನಿಕ ಸಾಹಿತ್ಯ ಹೆಚ್ಚಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಜ್ಞಾನ, ತಂತ್ರಜ್ಞಾನ ಹಾಗೂ ಸಂಶೋಧನೆ ಕ್ಷೇತ್ರದಲ್ಲಿ ಕನ್ನಡದ ಬರವಣಿಗೆ ಹೆಚ್ಚದಿದ್ದರೆ ಭಾಷೆ ಬೆಳೆಯಲಾರದು’ ಎಂದು ಸಾಹಿತಿ ಸಿ. ವೀರಣ್ಣ ತಿಳಿಸಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನ ನಗರದಲ್ಲಿ ಭಾನುವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಕನ್ನಡ ಭಾಷಾ ಬೋಧಕಿ ಶೈಲಜಾ ಜಿ.ಪಿ. ಅವರಿಗೆ ‘ಶಾ. ಬಾಲೂರಾವ್ ಅನುವಾದ ಪ್ರಶಸ್ತಿ’ ಹಾಗೂ ಸಣ್ಣಕಥೆಗಾರ ಇಸ್ಮಾಯಿಲ್ ತಳಕಲ್ ಅವರಿಗೆ ‘ಶಾ. ಬಾಲೂರಾವ್ ಯುವ ಬರಹಗಾರ ಪ್ರಶಸ್ತಿ’ ಪ್ರದಾನ ಮಾಡಿದರು. ಈ ಪ್ರಶಸ್ತಿಗಳು ತಲಾ ₹ 25 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿವೆ.

‘ಭಾಷೆ ಜಾಗತಿಕ ಸ್ಪರ್ಧೆಗೆ ಒಡ್ಡಿಕೊಳ್ಳಲು ಎಲ್ಲ ಕ್ಷೇತ್ರಗಳಲ್ಲಿಯೂ ಸಮೃದ್ಧವಾಗಿ ಬೆಳೆಯಬೇಕು. ವೈದ್ಯಕೀಯ ಸೇರಿ ವಿವಿಧ ಕ್ಷೇತ್ರಗಳಲ್ಲಿನ ತಜ್ಞರು ತಮ್ಮ ಅನುಭವ ಹಾಗೂ ತಮ್ಮ ಕ್ಷೇತ್ರದಲ್ಲಿನ ಆವಿಷ್ಕಾರಗಳನ್ನು ಬರವಣಿಗೆಯ ರೂಪದಲ್ಲಿ ನೀಡಬೇಕು. ಕನ್ನಡದಲ್ಲಿ ವೈಜ್ಞಾನಿಕ ಸಾಹಿತ್ಯದ ಬರವಣಿಗೆ ಹೆಚ್ಚಬೇಕು’ ಎಂದು ಅವರು ಹೇಳಿದರು.

ಅನುವಾದ ಹೆಚ್ಚಲಿ: ವಿಜ್ಞಾನ ಬರಹಗಾರ ಟಿ.ಆರ್. ಅನಂತರಾಮು, ‘ವಿಜ್ಞಾನದ ಬರಹಗಳಿಗೆ ಸಾಹಿತ್ಯದ ಸ್ಪರ್ಶ ಬೇಕಾಗುತ್ತದೆ. ಇಲ್ಲವಾದರೆ ವಿಜ್ಞಾನ ಸಪ್ಪೆಯಾಗುತ್ತದೆ. ಅನುವಾದವೂ ಸೃಜನಶೀಲ ಸಾಹಿತ್ಯವಾಗಿದ್ದು, ಅದಕ್ಕೆ ಬೇರೆಯದೆ ರೀತಿಯಲ್ಲಿ ಜೀವಂತಿಕೆ ನೀಡಬೇಕಾಗುತ್ತದೆ’ ಎಂದರು.

‘ಎಸ್.ಎಲ್. ಭೈರಪ್ಪ ಅವರ ಕೃತಿಗಳನ್ನು ಹೊರತುಪಡಿಸಿದರೆ ಉಳಿದವರ ಕೃತಿಗಳು ಅಷ್ಟಾಗಿ ಬೇರೆ ಭಾಷೆಗೆ ಅನುವಾದಗೊಂಡಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಶಸ್ತಿ ಪುರಸ್ಕೃತ ಇಸ್ಮಾಯಿಲ್ ತಳಕಲ್, ‘ಐದಾರು ವರ್ಷಗಳಿಂದ ಸಾಹಿತ್ಯ ಕ್ಷೇತ್ರದಲ್ಲಿ ನನ್ನನ್ನು ತೊಡಗಿಸಿಕೊಂಡಿದ್ದೇನೆ. ಮೊದಲು ಕವಿತೆ ಬರೆಯುತ್ತಿದ್ದವನಿಗೆ, ಕಥೆಗಳನ್ನು ಬರೆಯಬೇಕೆಂಬ ತುಡಿತ ಪ್ರಾರಂಭವಾಯಿತು. ‘ಪ್ರಜಾವಾಣಿ’ಯಲ್ಲಿಯೂ ನನ್ನ ಕಥೆಗಳು ಪ್ರಕಟವಾದವು. ಪ್ರಶಸ್ತಿಯು ಇನ್ನಷ್ಟು ಬರವಣಿಗೆಗೆ ಉತ್ತೇಜನ ನೀಡಲಿದೆ’ ಎಂದು ಹೇಳಿದರು.



ಬಿ.ಎಂ.ಶ್ರೀ. ಪ್ರತಿಷ್ಠಾನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಿ.ಜಿ. ಶೈಲಜಾ ಅವರಿಗೆ ‘ಶಾ.ಬಾಲುರಾವ್ ಅನುವಾದ ಪ್ರಶಸ್ತಿ’ ಹಾಗೂ ಇಸ್ಮಾಯಿಲ್ ತಳಕಲ್ ಅವರಿಗೆ ‘ಶಾ.ಬಾಲುರಾವ್ ಯುವ ಬರಹಗಾರ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಟಿ.ಆರ್. ಅನಂತರಾಮು ಮತ್ತು ಸಿ. ವೀರಣ್ಣ ಇದ್ದಾರೆ. ಪ್ರಜಾವಾಣಿ ಚಿತ್ರ

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ಚಿಕ್ಕಪೇಟೆ ರಸ್ತೆಗಳಲ್ಲಿ ಗುಂಡಿಗಳ ದರ್ಬಾರ್

ಬಿವಿಕೆ ಅಯ್ಯಂಗಾರ್ ರಸ್ತೆಯ ಚಿಕ್ಕಪೇಟೆ ರಸ್ತೆಗಳಲ್ಲಿ ಗುಂಡಿಗಳಿದ್ದು ದುರಸ್ತಿಯಾಗಬೇಕಾಗಿದೆ. ಚರಂಡಿಯಲ್ಲಿ ಹರಿಬೇಕಾದ ನೀರು ರಸ್ತೆಯಲ್ಲಿ ಹರಿಯುತ್ತಿದೆ. ಹಲವು ತಿಂಗಳಗಳಿಂದ ಸಮಸ್ಯೆ ಹಾಗೆ ಇದ್ದು, ಇದುರೆಗೂ ರಸ್ತೆ ದುರಸ್ತಿಯಾಗಿಲ್ಲ. ಗುಂಡಿ ಇರುವ ಕಾರಣ ಭಾರಿ ಮಳೆಯಿಂದ ವಾಹನ ಸವಾರರಿಗೆ, ಜನ ಸಾಮಾನ್ಯರಿಗೆ ಓಡಾಡಲು ಸಮಸ್ಯೆಯಾಗುತ್ತಿದೆ. ಅಪಘಾತಗಳು ಸಂಭವಿಸುವ ಮುನ್ನ ಬಿಬಿಎಂಪಿ ಅಧಿಕಾರಿಗಳು ರಸ್ತೆ ದುರಸ್ತಿ ಕಾರ್ಯ ಕೈಗೊಳ್ಳಬೇಕು.

ಆದಿತ್ಯ ಜೇವೂರ್, ಸ್ಥಳೀಯ ನಿವಾಸಿ



ಚರಂಡಿ ನೀರಿನಿಂದ ತುಂಬಿದ ಗುಂಡಿಗಳು

‘ರಸ್ತೆ ದುರಸ್ತಿಗೊಳಿಸಿ’

ಟ್ರಿನಿಟಿ ಕ್ರಿಸ್ಟಿನಾ ಲೇಔಟ್‌ಗೆ (ಹನುಮಂತಪ್ಪ ಲೇಔಟ್) ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣ ಹಾಳಾಗಿದೆ. ಭಾರಿ ಮಳೆಗೆ ರಸ್ತೆಯು ಹದಗೆಟ್ಟು ಒಂದು ವರ್ಷವೇ ಕಳೆದಿದೆ. ಈ ರಸ್ತೆಯ ಬದಿಯಲ್ಲಿರುವ ಚರಂಡಿಗಳು ಮುಚ್ಚಿ ಹೋಗಿದ್ದು, ಮೋರಿ ನೀರು ರಸ್ತೆಯ ಮೇಲೆ ಹರಿಯುತ್ತಿದೆ. ಸ್ಥಳೀಯ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ರಸ್ತೆ ದುರಸ್ತಿಯಾಗಿಲ್ಲ. ಸಣ್ಣ ಮಳೆ ಬಂದರೂ ರಸ್ತೆಯು ಕೆಸರು ಗದ್ದೆಯಾಗುತ್ತದೆ. ಈ ರಸ್ತೆಯಲ್ಲಿ ವಾಹನ ಸವಾರರು, ವೃದ್ಧರು, ಮಕ್ಕಳು ಸಂಚರಿಸಲು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಆಟೋ, ಕ್ಯಾಬ್ ಚಾಲಕರು ಈ ಪ್ರದೇಶಕ್ಕೆ ಬರಲು ನಿರಾಕರಿಸುತ್ತಾರೆ. ಸಂಬಂಧ ಪಟ್ಟ ಅಧಿಕಾರಿಗಳು ಈಗಲಾದರೂ ಈ ರಸ್ತೆ ದುರಸ್ತಿಗೊಳಿಸಲಿ.

ಸಂದೀಪ, ಸ್ಥಳೀಯ ನಿವಾಸಿ



ಟ್ರಿನಿಟಿ ಕ್ರಿಸ್ಟಿನಾ ಲೇಔಟ್‌ಗೆ (ಹನುಮಂತಪ್ಪ ಲೇಔಟ್) ಸಂಪರ್ಕ ಕಲ್ಪಿಸುವ ರಸ್ತೆಯ ದುಃಸ್ಥಿತಿ

‘ಕೆಂಪೇಗೌಡ ರಸ್ತೆಯಲ್ಲಿ ಫ್ಲೆಕ್ಸ್ ಹಾವಳಿ’



ಕೆಂಪೇಗೌಡ ರಸ್ತೆಯಲ್ಲಿರುವ ಮರಗಳಿಗೆ ಹಾಕಿರುವ ಫ್ಲೆಕ್ಸ್.

ಮಹಾರಾಜ ಕಾಂಪ್ಲೆಕ್ಸ್ ಪಾರ್ಕಿಂಗ್ ಮುಂಭಾಗ ಮತ್ತು ಕೆಂಪೇಗೌಡ ರಸ್ತೆಯಲ್ಲಿ ಫ್ಲೆಕ್ಸ್ ಹಾವಳಿಗೆ ಕಡಿವಾಣವೇ ಇಲ್ಲ. ಈ ರಸ್ತೆಯಲ್ಲಿರುವ ಮರಗಳಿಗೆ ಮೊಳೆಗಳನ್ನು ಬಡಿದು ಕಟೌಟ್‌ಗಳನ್ನು ಅಳವಡಿಸಲಾಗಿದೆ. ಕನ್ನಡ ರಾಜ್ಯೋತ್ಸವವನ್ನು ಆಚರಣೆ ಮಾಡಲಿ. ಆದರೆ, ಪರಿಸರಕ್ಕೆ ಹಾನಿ ಮಾಡಿ ಮರಗಳಿಗೆ ಫ್ಲೆಕ್ಸ್‌ಗಳನ್ನು ಹಾಕುತ್ತಿರುವುದು ಖಂಡನೀಯ. ಬಿಬಿಎಂಪಿ ಇಂತಹ ಅತಿರೇಕಗಳನ್ನು ಕಂಡು ಕಾಣದಂತೆ ದಿವ್ಯ ಮೌನ ವಹಿಸಿರುವುದು ದುರಂತವೇ ಸರಿ.

ಶಿವಪ್ರಸಾದ್, ಸ್ಥಳೀಯ ನಿವಾಸಿ



ಆರ್‌.ಆರ್‌. ನಗರ ಬಿಎಂಟಿಸಿ ಬಸ್ ನಿಲ್ದಾಣದ ಮುಂಭಾಗದ ರಸ್ತೆ.

‘ಸುಗಮ ಸಂಚಾರಕ್ಕೆ ಕ್ರಮಕೈಗೊಳ್ಳಿ’

ಆರ್ ಆರ್ ನಗರದ ಬಿಎಂಟಿಸಿ ಬಸ್ ನಿಲ್ದಾಣದ ಮುಂಭಾಗದ ರಸ್ತೆಯಲ್ಲಿ ದೊಡ್ಡ ದೊಡ್ಡ ಗುಂಡಿಗಳೇ ಬಿದ್ದಿವೆ. ಹಿಂದೆ ಈ ರಸ್ತೆಯಲ್ಲಿ ಹಲವು ಅಪಘಾತಗಳು ಸಂಭವಿಸಿದ ಉದಾಹರಣೆಗಳಿವೆ. ಸಂಬಂಧಪಟ್ಟ ಅಧಿಕಾರಿಗಳು ರಸ್ತೆಯಲ್ಲಿನ ಅಪಾಯಕಾರಿ ಗುಂಡಿಗಳನ್ನು ಆದಷ್ಟು ಬೇಗ ಮುಚ್ಚಲು ಕ್ರಮ ಕೈಗೊಂಡು ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು.

ಶಿವರಾಜ್, ಸ್ಥಳೀಯ ನಿವಾಸಿ



ವಿಜಯನಗರದ ಮಾರುತಿ ಮಂದಿರದ ಹಿಂಭಾಗದ ರಸ್ತೆ.

‘ರಸ್ತೆ ಗುಂಡಿಗಳನ್ನು ಮೊದಲು ಮುಚ್ಚಿ’

ವಿಜಯನಗರದ ಮಾರುತಿ ಮಂದಿರದ ಹಿಂಭಾಗದ ರಸ್ತೆ ಗುಂಡಿಗಳಿಂದ ಕೂಡಿದೆ. ರಸ್ತೆಯ ಉದ್ದಕ್ಕೂ ಅಲ್ಲಲ್ಲಿ ಚರಂಡಿಗಾಗಿ ರಸ್ತೆ ಅಗೆದು ಹಾಗೆಯೇ ಬಿಡಲಾಗಿದೆ. ಇಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ಇದುವರೆಗೂ ಬಿಬಿಎಂಪಿ ಈ ರಸ್ತೆಯಲ್ಲಿರುವ ಗುಂಡಿಗಳನ್ನು ನೋಡಿಲ್ಲ. ಸ್ಥಳೀಯ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಆದಷ್ಟು ಬೇಗ ರಸ್ತೆ ಗುಂಡಿ ಮುಚ್ಚಿಸುವ ಕಾರ್ಯ ಕೈಗೊಳ್ಳಬೇಕು.

ಗೋ ಮೂರ್ತಿ ಯಾದವ್, ಸ್ಥಳೀಯ ನಿವಾಸಿ

‘ಬಿಜೆಪಿ ಯಾತ್ರೆಯಾದ ಕೆಂಪೇಗೌಡ ರಥ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡರ ಪ್ರತಿಮೆಗೆ ಮೃತ್ತಿಕೆ ಮತ್ತು ಜಲ ಸಂಗ್ರಹಿಸುವ ರಥದಲ್ಲಿ ಒಕ್ಕಲಿಗ ಸಮುದಾಯದ ಸ್ವಾಮೀಜಿಗಳು ಮತ್ತು ಎಚ್.ಡಿ.ದೇವೇಗೌಡರ ಭಾವಚಿತ್ರ ಹಾಕದಿರುವುದನ್ನು ಖಂಡಿಸಿ ದಾಸರಹಳ್ಳಿ ಶಾಸಕ ಆರ್.ಮಂಜುನಾಥ್ ಯಾತ್ರೆ ಉದ್ಘಾಟನೆಗೆ ಹಿಂದೇಟು ಹಾಕಿದರು.

ಶೆಟ್ಟಿಹಳ್ಳಿಯಿಂದ ಹೊರಟ ರಥದಲ್ಲಿ ಪ್ರಧಾನಿ ನರೇಂದ್ರಮೋದಿ ಅವರ ದೊಡ್ಡ ಭಾವಚಿತ್ರವಿದ್ದು, ಬಿ.ಎಸ್.ಯಡಿಯೂರಪ್ಪ, ಸಚಿವರಾದ ಸಿ.ಎನ್.ಅಶ್ವತ್ಥನಾರಾಯಣ, ಆರ್. ಅಶೋಕ್, ವಿ.ಸೋಮಣ್ಣ, ಎಸ್.ಟಿ. ಸೋಮಶೇಖರ್, ಬೈರತಿ ಬಸವರಾಜ್, ಕೆ.ಗೋಪಾಲಯ್ಯ, ಮುನಿರತ್ನ, ಸಂಸದ ಡಿ.ವಿ.ಸದಾನಂದಗೌಡ ಅವರ ಭಾವಚಿತ್ರಗಳು ಇದ್ದವು.

ಇದನ್ನು ಕಂಡ ಶಾಸಕ ಆರ್. ಮಂಜುನಾಥ್ ಯಾತ್ರೆ ಉದ್ಘಾಟನೆಗೆ ನಿರಾಕರಿಸಿದರು. ‘ಆದಿಚುಂಚನಗಿರಿ ಮಠದ ಬಾಲಗಂಗಾಧರನಾಥ ಸ್ವಾಮೀಜಿ, ನಿರ್ಮಲಾನಂದನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ ಸೇರಿ ಯಾರ ಭಾವಚಿತ್ರವನ್ನೂ ಹಾಕಿಲ್ಲ. ಪ್ರಧಾನಿ ಸ್ಥಾನಕ್ಕೆ ಏರಿದ ಏಕೈಕ ಕನ್ನಡಿಗರಾದ ಎಚ್.ಡಿ.ದೇವೇಗೌಡರ ಭಾವಚಿತ್ರವನ್ನೂ ಹಾಕಿಲ್ಲ. ಸರ್ಕಾರಿ ಕಾರ್ಯಕ್ರಮವನ್ನು ಬಿಜೆಪಿ ಕಾರ್ಯಕ್ರಮವನ್ನಾಗಿ ಪರಿವರ್ತಿಸಿಕೊಳ್ಳಲಾಗಿದೆ. ಈ ರಥವನ್ನು ನಾನು ಉದ್ಘಾಟನೆ ಮಾಡಬೇಕೆ’ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು.

‘ಸಚಿವರ ಭಾವಚಿತ್ರ ಹಾಕಿಕೊಳ್ಳಲು ನಮ್ಮ ವಿರೋಧ ಇಲ್ಲ. ಬೇಕೆಂದೆ ಈ ಸಮುದಾಯದ ಗಣ್ಯರ ಭಾವಚಿತ್ರಗಳನ್ನು ಕೈಬಿಡಲಾಗಿದೆ. ಅಧಿಕಾರಿಗಳಿಗೂ ಬಿಜೆಪಿ ಶಾಲು ಹಾಕಿಸಿ ಕೆಲಸ ಮಾಡಿಸುವ ಕಾಲ ದೂರ ಇಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಧಿಕಾರಿಗಳು ಮಂಜುನಾಥ್ ಅವರ ಮನವೊಲಿಸುವ ಪ್ರಯತ್ನ ಮಾಡಿದರು. ಯಾವುದೇ ಕಾರಣಕ್ಕೂ ಉದ್ಘಾಟನೆ ಮಾಡಬಾರದು ಎಂದು ಕಾರ್ಯಕರ್ತರೂ ಅಸಮಾಧಾನ ವ್ಯಕ್ತಪಡಿಸಿದರು.

‘ಅಧಿಕಾರಿಗಳು ಈ ರೀತಿ ನಡೆದುಕೊಳ್ಳುವುದು ಸರಿಯಲ್ಲ. ಕೆಂಪೇಗೌಡರಿಗೆ ಗೌರವ ತೋರಿಸುವುದು ನನ್ನ ಕರ್ತವ್ಯ. ಆದ್ದರಿಂದ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದ್ದೇನೆ’ ಎಂದರು.



ಕೆಂಪೇಗೌಡ ರಥಯಾತ್ರೆ ಉದ್ಘಾಟಿಸಲು ನಿರಾಕರಿಸಿ ಶಾಸಕ ಆರ್‌.ಮಂಜುನಾಥ್ ಆಕ್ರೋಶ ವ್ಯಕ್ತಪಡಿಸಿದರು

ಹವಾಮಾನ ವೈಪರೀತ್ಯ: ಡೆಂಗಿ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹವಾಮಾನದಲ್ಲಿ ವೈಪರೀತ್ಯ ಹಾಗೂ ಮಳೆಯಿಂದಾಗಿ ರಾಜ್ಯದಲ್ಲಿ ಡೆಂಗಿ ಪೀಡಿತರ ಸಂಖ್ಯೆ ಉಲ್ಬಣಗೊಂಡಿದ್ದು, ಈ ತಿಂಗಳು 591 ಪ್ರಕರಣಗಳು ದೃಢಪಟ್ಟಿವೆ.

ಈ ವರ್ಷ 1.48 ಲಕ್ಷಕ್ಕೂ ಅಧಿಕ ಡೆಂಗಿ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 66 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಈವರೆಗೆ ವರದಿಯಾದ ಒಟ್ಟು ಡೆಂಗಿ ಪ್ರಕರಣಗಳ ಸಂಖ್ಯೆ 7,317ಕ್ಕೆ ಏರಿಕೆಯಾಗಿದೆ. ಡೆಂಗಿ ಪೀಡಿತರಲ್ಲಿ ನಾಲ್ವರು ಮರಣ ಹೊಂದಿದ್ದಾರೆ. ಕಳೆದ ವರ್ಷ 7,189 ಡೆಂಗಿ ಪ್ರಕರಣಗಳು ದೃಢಪಟ್ಟಿದ್ದವು. ಜ್ವರ ಪೀಡಿತರಲ್ಲಿ ಐವರು ಮೃತಪಟ್ಟಿದ್ದರು.

ಈ ವರ್ಷ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ವರದಿಯಾಗಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿಯೇ 48,038 ಮಂದಿಯಲ್ಲಿ ಡೆಂಗಿ ಶಂಕೆ ವ್ಯಕ್ತವಾಗಿದ್ದು, 1,227 ಮಂದಿಯಲ್ಲಿ ಈ ಜ್ವರ ದೃಢಪಟ್ಟಿದೆ. ಮೈಸೂರಿನಲ್ಲಿ 660, ಉಡುಪಿಯಲ್ಲಿ 477, ಚಿತ್ರದುರ್ಗದಲ್ಲಿ 341 ಹಾಗೂ ದಕ್ಷಿಣ ಕನ್ನಡದಲ್ಲಿ 325 ಡೆಂಗಿ ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 300ಕ್ಕಿಂತ ಕಡಿಮೆ ಇವೆ.

ದಶಮಾನೋತ್ಸವ ಕಾರ್ಯಕ್ರಮ ನಾಳೆ

ಬೆಂಗಳೂರು: ಕೆನರಾ ಬ್ಯಾಂಕ್ ನಿವೃತ್ತ ಉದ್ಯೋಗಿಗಳ ಸಂಘದ ದಶಮಾನೋತ್ಸವ ಕಾರ್ಯಕ್ರಮ ನ.1ರಂದು ಜಯನಗರದ ಜಯರಾಮ ಸೇವಾ ಮಂಡಳಿಯಲ್ಲಿ ನಡೆಯಲಿದೆ.

ದಶಮಾನೋತ್ಸವದ ಅಂಗವಾಗಿ ನಿವೃತ್ತ ಉದ್ಯೋಗಿಗಳ ಸಭೆ ಮತ್ತು ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸಭೆ ಸಹ ನಡೆಯಲಿದೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಮುಖ ಸು.ರಾಮಣ್ಣ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ದೇಶದಾದ್ಯಂತ ಕಾರ್ಯಕಾರಿ ಸಮಿತಿಯ ಸದಸ್ಯರು ಮತ್ತು ಪ್ರತಿನಿಧಿಗಳು ಈ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಬ್ಯಾಂಕ್ ನಿವೃತ್ತ ಉದ್ಯೋಗಿಗಳ ಬೇಡಿಕೆ ಮತ್ತು ಪರಿಹಾರಗಳ ಬಗ್ಗೆ ವಿಸ್ತೃತ ಚರ್ಚೆ ನಡೆಯಲಿದೆ ಎಂದು ಸಂಘದ ಉಪ ಮಹಾ ಕಾರ್ಯದರ್ಶಿ ಎಂ.ಎಚ್. ಶಿವಪ್ರಕಾಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಕೀಲ ಡಿ.ಎನ್. ನಂಜುಂಡ ರೆಡ್ಡಿಗೆ ರಾಜ್ಯೋತ್ಸವ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿಗೆ ನ್ಯಾಯಾಂಗ ಕ್ಷೇತ್ರದಿಂದ ಹೈಕೋರ್ಟ್ ವಕೀಲ ಡಿ.ಎನ್. ನಂಜುಂಡ ರೆಡ್ಡಿ ಭಾಜನರಾಗಿದ್ದಾರೆ.



ಡಿ.ಎನ್. ನಂಜುಂಡ

68 ವರ್ಷ ವಯೋಮಾನದ ರೆಡ್ಡಿ, ಬಾಗೇಪಲ್ಲಿ ತಾಲ್ಲೂಕಿನ ದೇವರಗುಡಿಪಲ್ಲಿಯಲ್ಲಿ ಜನಿಸಿ, ಗುಂಡ್ಲುಪಲ್ಲಿಯಲ್ಲಿ 4ನೇ ತರಗತಿ ಕಲಿತಿದ್ದರು. ಬಳಿಕ, ಬಾಗೇಪಲ್ಲಿ ತಾಲ್ಲೂಕು ಬೋರ್ಡ್ ಶಾಲೆಯಲ್ಲಿ 5ರಿಂದ 10ನೇ ತರಗತಿ, ಬೆಂಗಳೂರಿನ ವಿಜಯಾ ಕಾಲೇಜಿನಲ್ಲಿ ಪಿಯು, ಸರ್ಕಾರಿ ಕಲಾ ಕಾಲೇಜಿನಲ್ಲಿ ಬಿ.ಎ ಪದವಿ, ಬಿಎಂಎಸ್ ಕಾನೂನು ಕಾಲೇಜಿನಲ್ಲಿ ಕಾನೂನು ಶಿಕ್ಷಣ ಪಡೆದು, ‘ಕೆಸ್ವೀ ಆ್ಯಂಡ್ ಕಂಪನಿ ಲಾ’ ಕಚೇರಿಯಿಂದ ವೃತ್ತಿ ಆರಂಭಿಸಿದ್ದರು.

2000ರಿಂದ ಸ್ವತಂತ್ರವಾಗಿ ವಕೀಲ ವೃತ್ತಿ ಆರಂಭಿಸಿದ ಅವರು, 2005ರಲ್ಲಿ ನಿಯೋಜಿತ ಹಿರಿಯ ವಕೀಲರಾಗಿ ನಿಯುಕ್ತರಾದರು. ಬಿಡಿಎ, ಬಿಬಿಎಂಪಿ, ಕಾವೇರಿ ನೀರಾವರಿ ನಿಗಮ ಸೇರಿದಂತೆ ಹಲವು ಇಲಾಖೆಯನ್ನು ಸರ್ಕಾರದ ಪರ ಅವರು ಪ್ರತಿನಿಧಿಸುತ್ತಿದ್ದಾರೆ.

ಎಸ್ಸೆಸ್ಸೆಲ್ಸಿ: ಉಚಿತ ಉಪನ್ಯಾಸ ತರಗತಿಗಳು

ಬೆಂಗಳೂರು: ಜನೋದಯ ಟ್ರಸ್ಟ್ ವತಿಯಿಂದ 2022–23ನೇ ಶೈಕ್ಷಣಿಕ ಸಾಲಿನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಉಚಿತ ಉಪನ್ಯಾಸ ತರಗತಿಗಳ (100 ದಿನಗಳ ಜ್ಞಾನ ಯಜ್ಞ) ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ನ. 5ರಿಂದ ಬೆಳಿಗ್ಗೆ 6.30ರಿಂದ 7.30ರವರೆಗೂ ಬಾಗಲಕುಂಟೆಯ ತ್ರಿವೇಣಿ ಪಬ್ಲಿಕ್ ಸ್ಕೂಲ್‌ನಲ್ಲಿ ತರಗತಿಗಳು ನಡೆಯಲಿವೆ. ನುರಿತ ಶಿಕ್ಷಕರಿಂದ ಉಪನ್ಯಾಸ ತರಗತಿಗಳು ನಡೆಯಲಿದ್ದು, ಆರ್ಥಿಕವಾಗಿ ಹಿಂದುಳಿದ ಆಸಕ್ತ ವಿದ್ಯಾರ್ಥಿಗಳು ತರಬೇತಿ ಪಡೆದುಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ 9743770250, 9731396361ಗೆ ಸಂಪರ್ಕಿಸಿ.

ಲಂಚ: ಡಿಎಚ್‌ಒ ಡಾ.ನಿರಂಜನ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಆಸ್ಪತ್ರೆಯೊಂದರ ಆರಂಭಕ್ಕೆ ಪರವಾನಗಿ ನೀಡಲು ₹ 40,000 ಲಂಚ ಪಡೆಯುತ್ತಿದ್ದ ಬೆಂಗಳೂರು ನಗರ ಜಿಲ್ಲಾ ಆರೋಗ್ಯಾಧಿಕಾರಿ (ಡಿಎಚ್‌ಒ) ಡಾ. ನಿರಂಜನ್ ಅವರನ್ನು ಲೋಕಾಯುಕ್ತ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ನಗರ ಜಿಲ್ಲೆಯ ವ್ಯಾಪ್ತಿಯಲ್ಲಿನ ಆಸ್ಪತ್ರೆಯೊಂದನ್ನು ಆರಂಭಿಸಲು ಅನುಮತಿ ಕೋರಿ ವ್ಯಕ್ತಿಯೊಬ್ಬರು ಅರ್ಜಿ ಸಲ್ಲಿಸಿದ್ದರು. ಪರವಾನಗಿ ನೀಡಲು ₹ 1 ಲಕ್ಷ ಲಂಚ ನೀಡುವಂತೆ ಡಿಎಚ್‌ಒ ಬೇಡಿಕೆ ಇಟ್ಟಿದ್ದರು. ನಂತರ ಮಾತುಕತೆ ನಡೆಸಿದಾಗ ₹ 40,000 ನೀಡಿದರೆ ಪರವಾನಗಿ ಪತ್ರ ನೀಡುವುದಾಗಿ ತಿಳಿಸಿದ್ದರು. ಈ ಕುರಿತು ಅರ್ಜಿದಾರರು ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ವಿಭಾಗಕ್ಕೆ ದೂರು ನೀಡಿದ್ದರು.

‘ಆರೋಪಿಯ ಸೂಚನೆಯಂತೆ ದೂರುದಾರರು ಶನಿವಾರ ಲಂಚದ ಹಣದೊಂದಿಗೆ ಭೇಟಿಯಾದರು. ಕಚೇರಿಯಿಂದ ಹೊರಬಂದ ಡಾ. ನಿರಂಜನ್ ಲಂಚದ ಹಣ ಪಡೆದುಕೊಂಡರು. ತಕ್ಷಣ ದಾಳಿಮಾಡಿದ ಲೋಕಾಯುಕ್ತದ ಪೊಲೀಸ್ ಅಧಿಕಾರಿಗಳು ಆರೋಪಿಯನ್ನು ಬಂಧಿಸಿದರು’ ಎಂದು ಲೋಕಾಯುಕ್ತದ ಉನ್ನತ ಮೂಲಗಳು ತಿಳಿಸಿವೆ.

ಲೋಕಾಯುಕ್ತ ಪೊಲೀಸ್ ವಿಭಾಗದ ಎಸ್‌ಪಿ ಅಶೋಕ್ ಕೆ.ವಿ. ಅವರ ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ಆ್ಯಂಟನಿ ಜಾನ್ ಮತ್ತು ತಂಡ ಕಾರ್ಯಾಚರಣೆ ನಡೆಸಿದೆ.

ಪ್ರಾಥಮಿಕ ವಿಚಾರಣೆ ಬಳಿಕ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಯಲಹಂಕದ ಆವಲಹಳ್ಳಿ ಕೆರೆಗೆ ಕಲ್ಮಶ ಹರಿಸಲು ನಕ್ಷೆಗೆ ವಿರುದ್ಧ ಸ್ಥಳಾಂತರ • ನಿವಾಸಿಗಳ ಮನವಿಗೆ ಸ್ಪಂದಿಸದ ಅಧಿಕಾರಿಗಳು

ರಾಜಕಾಲುವೆ ಹರಿವು ಬದಲು: ಬಡಾವಣೆ ಜಲಾವೃತ

• ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜಕಾಲುವೆಯ ಒತ್ತುವರಿ, ದಿಕ್ಕು ಬದಲಾವಣೆಯಿಂದ ಬಡಾವಣೆಗೆ ನೀರು ನುಗ್ಗಿ ಪರಿತಪಿಸುತ್ತಿರುವ ಸನ್‌ಸಿಟಿ ಬಡಾವಣೆ ನಿವಾಸಿಗಳು, ಮೂಲನಕ್ಷೆಯಂತೆ ರಾಜಕಾಲುವೆಗೆ ಅನುವು ಮಾಡಿಕೊಡಿ ಎಂಬ ಮನವಿಗೆ ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಅಧಿಕಾರಿಗಳು ಸೇರಿದಂತೆ ಜಿಲ್ಲಾಧಿಕಾರಿಯವರೂ ನಾಲ್ಕು ವರ್ಷದಿಂದ ಸ್ಪಂದಿಸಿಲ್ಲ.

ಯಲಹಂಕದ ಆವಲಹಳ್ಳಿ ಗ್ರಾಮದಲ್ಲಿರುವ ಸನ್ ಸಿಟಿ ಬಡಾವಣೆ ನಿರ್ಮಾಣದ ಸಂದರ್ಭದಲ್ಲಿ ರಾಜಕಾಲುವೆ ಒತ್ತುವರಿ ಹಾಗೂ ದಿಕ್ಕು ಬದಲಾವಣೆಯಾಗಿದೆ. ಇದರಿಂದ ಸನ್ ಸಿಟಿ ಬಡಾವಣೆಗೆ ಪ್ರತಿ ಬಾರಿ ಮಳೆಯ ಸಂದರ್ಭದಲ್ಲಿ ಮಳೆ ನೀರಿನ ಜೊತೆಗೆ ಮೇಲ್ಭಾಗದಲ್ಲಿರುವ ಬಡಾವಣೆಗಳ ಕಸ, ಕಲ್ಮಶವೂ ಮನೆಗಳಿಗೆ ನುಗ್ಗುತ್ತಿದೆ.

‘ಆವಲಹಳ್ಳಿಯ ಸರ್ವೆ ನಂ. 8/1, 8/5, 8/6, 6/1, 6/2ರಲ್ಲಿ ಸನ್ ಸಿಟಿಯವರು ಬಡಾವಣೆ ನಿರ್ಮಿಸಿದ್ದಾರೆ. ಈ ಸಂದರ್ಭದಲ್ಲಿ ರಾಜಕಾಲುವೆಯನ್ನು ಒತ್ತುವರಿ ಮಾಡಲಾಗಿದೆ. ಅಲ್ಲದೆ, ರಾಜಕಾಲುವೆ ಪಥವನ್ನು ಬದಲಿಸಲಾಗಿದೆ. ಮಳೆ ಬಂದಾಗ ನಮ್ಮ ಮನೆಗಳಿಗೆ ನೀರು ನುಗ್ಗಿದಾಗ ಈ ಒತ್ತುವರಿಯ ಸಮಸ್ಯೆ ನಮಗೆಲ್ಲ ಅರಿವಿಗೆ ಬಂತು. ಆದ್ದರಿಂದ ಮೂಲ ರಾಜಕಾಲುವೆಯನ್ನೇ ನಿರ್ಮಿಸಿಕೊಡಿ, ಎಲ್ಲ ರೀತಿಯ ಒತ್ತುವರಿ ತೆರವು ಮಾಡಿ ಎಂದು ಮನವಿ ಮಾಡಿಕೊಂಡಿದ್ದೇವೆ. ಗ್ರಾಮ ಪಂಚಾಯಿತಿ ಸದಸ್ಯರು, ಅಧ್ಯಕ್ಷರು, ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಸಿಇಒ, ಲೋಕಾಯುಕ್ತ, ಬಿಎಂಟಿಎಫ್‌ಗೂ 2018ರ ಜೂನ್‌ನಿಂದ ಈ ಬಗ್ಗೆ ಮನವಿ ನೀಡಿದ್ದೇವೆ. ಆದರೆ, ಯಾರೂ ಕ್ರಮ ಕೈಗೊಂಡಿಲ್ಲ’ ಎಂದು ಸನ್ ಸಿಟಿ ಬಡಾವಣೆಯ ನಿವಾಸಿಗಳು ಮಾಹಿತಿ ನೀಡಿದರು.


‘ರಾಜಕಾಲುವೆ ಒತ್ತುವರಿ ಹಾಗೂ ದಿಕ್ಕು ಬದಲಾಯಿಸಿ ಸನ್ ಸಿಟಿಯವರು ಪರ್ಯಾಯವಾಗಿ ನಿರ್ಮಿಸಿರುವ ರಾಜಕಾಲುವೆ ಎತ್ತರದಲ್ಲಿದೆ. ಹೀಗಾಗಿ ಮಳೆ ನೀರು ಹಾಗೂ ಕಲುಷಿತ ನೀರು ರಾಜಕಾಲುವೆಗೆ ಹರಿಯುತ್ತಿಲ್ಲ. ಬಡಾವಣೆಯ ಮನೆಗಳಿಗೆ ನುಗ್ಗುತ್ತಿದೆ. ಸೆಪ್ಟೆಂಬರ್, ಅಕ್ಟೋಬರ್‌ನಲ್ಲಿ ಅತಿಹೆಚ್ಚು ಮಳೆಯಾದಾಗ, ಇಲ್ಲಿನ ನಿವಾಸಿಗಳು ಸಾಕಷ್ಟು ಸಮಸ್ಯೆ ಎದುರಿಸಿದ್ದೇವೆ. ರಾತ್ರಿ-ಹಗಲು ನಿದ್ದೆಯಿಲ್ಲದೆ ನೀರು ಹೊರಗೆ ಹಾಕುವುದೇ ಕಾಯಕವಾಗಿತ್ತು. ನೀರು ಹೊರಹಾಕಲೂ ಅದಕ್ಕೆ ಹೋಗಲು ಜಾಗವಿರಲಿಲ್ಲ’ ಎಂದು ಸ್ಥಳೀಯರಾದ ಶೋಭಾ ಮತ್ತು ಪರಿಮಳ ಅವರು ಅಳಲು ತೋಡಿಕೊಂಡರು.


‘ಲಕ್ಷಾಂತರ ಹಣ ನೀಡಿ ನಿವೇಶನ ಪಡೆದು, ಮನೆ ಕಟ್ಟಿಕೊಂಡಿದ್ದೇವೆ. ಬಡಾವಣೆ ನಿರ್ಮಿಸುವಾಗ ರಾಜಕಾಲುವೆ ದಿಕ್ಕು ಬದಲಿಸಿದರೆ ನೀರು ಹೇಗೆ ಹರಿಯುತ್ತದೆ ಎಂಬ ಬಗ್ಗೆ ಅವರಿಗೆ ಗೊತ್ತಾಗುವುದಿಲ್ಲವೇ? ಎತ್ತರದ ಪ್ರದೇಶಕ್ಕೆ ನೀರು ಹರಿಯುವುದೇ? ಇಂತಹ ಜ್ಞಾನ ಇಲ್ಲದೆ ಅದಕ್ಕೆ ಅನುಮತಿ ನೀಡಿರುವ ಕಂದಾಯ ಇಲಾಖೆ ಅಧಿಕಾರಿಗಳು ಇಲ್ಲಿನ ಸಮಸ್ಯೆಗೆ ನೇರ ಕಾರಣ’ ಎಂದು ಶೋಭಾ ಮತ್ತು ಪರಿಮಳ ಅವರು ಆರೋಪಿಸಿದರು.


ಇತ್ತೀಚೆಗೆ ಮಳೆಯಾದ ಸಂದರ್ಭದಲ್ಲಿ ಜಲಾವೃತವಾಗಿದ್ದ ಸನ್ ಸಿಟಿ ಬಡಾವಣೆ

ಆವಲಹಳ್ಳಿ ಕೆರೆ ಒತ್ತುವರಿ

‘ಆವಲಹಳ್ಳಿ ಕೆರೆ ಬಿಬಿಎಂಪಿ ವ್ಯಾಪ್ತಿಗೆ ಬರುತ್ತದೆ. ಈ ಕೆರೆಯನ್ನು ಅಭಿವೃದ್ಧಿಗೊಳಿಸಲಾಗಿದ್ದರೂ ಒತ್ತುವರಿ ತೆರವು ಮಾಡಿಲ್ಲ. ಇದರ ಜೊತೆಗೆ ಗುಂಡುತೋಪು ಕೂಡ ಒತ್ತುವರಿಯಾಗಿದೆ. ಈ ಬಗ್ಗೆ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ. ಬಿಬಿಎಂಪಿ ಹಾಗೂ ಗ್ರಾಮ ಪಂಚಾಯಿತಿ ಗಡಿಯಲ್ಲಿ ಕೆರೆ ಇರುವುದರಿಂದ ಜವಾಬ್ದಾರಿಯನ್ನು ಅಧಿಕಾರಿಗಳು ವರ್ಗಾಯಿಸುತ್ತಿದ್ದಾರೆ’ ಎಂಬುದು ಸ್ಥಳೀಯರ ದೂರು. ಆವಲಹಳ್ಳಿ ಸರ್ವೆ ನಂ.10 ಹಾಗೂ ಸಿಂಗನಾಯಕಹಳ್ಳಿ ಸರ್ವೆ ನಂ.64ರಲ್ಲಿ ಆವಲಹಳ್ಳಿ ಕೆರೆ ಒಟ್ಟು 13 ಎಕರೆ 11 ಗುಂಟೆ ಪ್ರದೇಶದಲ್ಲಿದೆ. ಇದರಲ್ಲಿ 36 ಗುಂಟೆ ಒತ್ತುವರಿಯಾಗಿದೆ ಎಂದು ಸರ್ವೆಯಲ್ಲಿ ಉಲ್ಲೇಖಿಸಲಾಗಿದೆ.


ಆವಲಹಳ್ಳಿ ಕೆರೆ ಒತ್ತುವರಿ ಸೂಚಿಸಿರುವ ಕೆರೆ ಸರ್ವೆ ನಕ್ಷೆ



ಆವಲಹಳ್ಳಿ ಗ್ರಾಮದಲ್ಲಿರುವ ರಾಜಕಾಲುವೆ ನಕ್ಷೆ

ಲೋಕಾಯುಕ್ತಕ್ಕೂ ದೂರು..

‘ಆವಲಹಳ್ಳಿ ಗ್ರಾಮದ ಸನ್ ಸಿಟಿ ಬಡಾವಣೆಯಲ್ಲಿರುವ ಬಡಾವಣೆ ರಾಜಕಾಲುವೆ ಒತ್ತುವರಿ ಹಾಗೂ ದಿಕ್ಕು ಬದಲಾವಣೆಯಾಗಿದೆ. ಎಂ.ಎಸ್. ರಾಮಯ್ಯ ಬಡಾವಣೆಯ ಕಲುಷಿತ ನೀರು ನಮ್ಮ ಬಡಾವಣೆಗೆ ಹರಿಯುತ್ತಿದೆ. ಈ ಬಗ್ಗೆ ಪರಿಶೀಲನೆ ನಡೆಸಿ, ಗ್ರಾಮ ನಕ್ಷೆಯಂತೆ ರಾಜಕಾಲುವೆಯನ್ನು ನಿರ್ಮಿಸಲು ಅಧಿಕಾರಿಗಳಿಗೆ ಸೂಚಿಸಬೇಕು’ ಎಂದು ಸನ್ ಸಿಟಿ ನಿವಾಸಿಗಳು 2018ರ ಸೆ.19ರಂದು ಲೋಕಾಯುಕ್ತರಿಗೆ ದೂರು ನೀಡಿದ್ದಾರೆ. ‘ಆದರೆ, ಅವರಿಂದಲೂ ಯಾವುದೇ ರೀತಿಯ ಕ್ರಮ ಆಗಿಲ್ಲ’ ಎಂದು ನಿವಾಸಿಗಳು ಬೇಸರ ವ್ಯಕ್ತಪಡಿಸಿದರು.

ಅಧಿಕಾರಿಗಳ ಕುಮ್ಮಕ್ಕು: ಶಾಸಕ ಎಸ್‌.ಆರ್‌. ವಿಶ್ವನಾಥ್

‘ಕಂದಾಯ ಬಡಾವಣೆಗಳಲ್ಲಿ ರಾಜಕಾಲುವೆ, ಕೆರೆಗಳ ಒತ್ತುವರಿಯಾಗಿರುವುದು ನಿಜ. ಇದಕ್ಕೆಲ್ಲ ಅಧಿಕಾರಿಗಳ ಕುಮ್ಮಕ್ಕೇ ಕಾರಣ. ಒತ್ತುವರಿಯಾಗುತ್ತಿರುವುದನ್ನು ಕಂಡೂ ಸುಮ್ಮನಿರುತ್ತಾರೆ. ಈಗಲೇ ಕಂದಾಯ ಇಲಾಖೆ ಅಧಿಕಾರಿಗಳು ಎಚ್ಚೆತ್ತುಕೊಳ್ಳಬೇಕು. ಕೆರೆ ಹಾಗೂ ರಾಜಕಾಲುವೆ ಒತ್ತುವರಿ ತೆರವು ಮಾಡಬೇಕು. ನಕ್ಷೆಯಂತೆ ರಾಜಕಾಲುವೆ ನಿರ್ಮಿಸಬೇಕು. ಆವಲಹಳ್ಳಿ ಕೆರೆ ಹಾಗೂ ಸುತ್ತಮುತ್ತಲಿನ ಕೆರೆ ಒತ್ತುವರಿ ತೆರವು ಮಾಡಬೇಕು. ಈ ಬಗ್ಗೆ ಅಧಿಕಾರಿಗಳಿಗೆ ಮತ್ತೆ ಸೂಚನೆ ನೀಡಲಾಗುತ್ತದೆ’ ಯಲಹಂಕ ವಿಧಾನಸಭೆ ಕ್ಷೇತ್ರದ ಶಾಸಕ ಎಸ್.ಆರ್. ವಿಶ್ವನಾಥ್ ತಿಳಿಸಿದರು.

ಅಕ್ರಮ ಆಸ್ತಿ: ಬಿಬಿಎಂಪಿ ಅಧಿಕಾರಿಗೆ 4 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ್ದ ಪ್ರಕರಣದಲ್ಲಿ ಬಿಬಿಎಂಪಿಯ ಎಚ್‌ಎಸ್‌ಆರ್ ಬಡಾವಣೆಯ ಸಹಾಯಕ ಕಂದಾಯ ಅಧಿಕಾರಿಗಳ ಕಚೇರಿಯ ಮೌಲ್ಯಮಾಪಕ ಆರ್. ಪ್ರಸನ್ನಕುಮಾರ್ ಆರೋಪಿ ಎಂದು ಸಾರಿರುವ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯ, ನಾಲ್ಕು ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು ₹ 40 ಲಕ್ಷ ದಂಡ ವಿಧಿಸಿದೆ.

ಪ್ರಸನ್ನಕುಮಾರ್ ವಿರುದ್ಧ 2013ರ ಡಿಸೆಂಬರ್ 19ರಂದು ಪ್ರಸನ್ನಕುಮಾರ್ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿದ್ದ ಲೋಕಾಯುಕ್ತ ಪೊಲೀಸರು, ಡಿ. 20ರಂದು ಆರೋಪಿಯ ಮನೆ ಮೇಲೆ ದಾಳಿ ಮಾಡಿ ಶೋಧ ನಡೆಸಿದ್ದರು. ಅಧಿಕಾರಿಯು ತಮ್ಮ ಅಧಿಕೃತ ಆದಾಯಕ್ಕಿಂತ ₹ 26.39 (ಶೇಕಡ 31.71) ಲಕ್ಷ ಹೆಚ್ಚಿನ ಆಸ್ತಿ ಹೊಂದಿದ್ದಾರೆ ಎಂದು ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು.

ಲೋಕಾಯುಕ್ತ ವಿಶೇಷ ನ್ಯಾಯಾಲಯವು 2017ರಲ್ಲಿ ಆರೋಪಪಟ್ಟಿಯನ್ನು ಅಂಗೀಕರಿಸಿ, ವಿಚಾರಣೆ ಆರಂಭಿಸಿತ್ತು. ಪ್ರಕರಣದ ವಿಚಾರಣೆಯನ್ನು ಪೂರ್ಣಗೊಳಿಸಿ ಶನಿವಾರ ಆದೇಶ ಪ್ರಕಟಿಸಿದ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ. ಲಕ್ಷ್ಮೀನಾರಾಯಣ ಭಟ್, ‘ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿರುವ ಪ್ರಕರಣದಲ್ಲಿ ಪ್ರಸನ್ನಕುಮಾರ್ ಅಪರಾಧಿ’ ಎಂದು ಪ್ರಕಟಿಸಿದರು.

ಅಪರಾಧಿಗೆ ನಾಲ್ಕು ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು ₹ 40 ಲಕ್ಷ ದಂಡ ವಿಧಿಸಿ ನ್ಯಾಯಾಧೀಶರು ಆದೇಶ ಹೊರಡಿಸಿದರು. ದಂಡ ಪಾವತಿಗೆ ತಪ್ಪಿದರೆ ನಾಲ್ಕು ತಿಂಗಳ ಸಾಧಾರಣ ಜೈಲು ಶಿಕ್ಷೆ ಅನುಭವಿಸುವಂತೆ ಆದೇಶಿಸಿದರು.

ಸ್ವಚ್ಛತಾ ಕಾರ್ಯದಿಂದ ಪುನೀತ್ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಪೌರಕಾರ್ಮಿಕರು ಹಾಗೂ ಸ್ವಯಂ ಜಾಗೃತಿ ತಂಡದ ಸಹಭಾಗಿತ್ವದಲ್ಲಿ ಸ್ವಚ್ಛತಾ ಕಾರ್ಯ ನಡೆಸುವ ಮೂಲಕ ಪುನೀತ್ ರಾಜ್‌ಕುಮಾರ್ ಅವರ ಮೊದಲನೇ ವರ್ಷದ ಪುಣ್ಯಸ್ಮರಣೆ ಆಚರಿಸಲಾಯಿತು.

ನಾಗರಬಾವಿಯ ಕಲ್ಯಾಣನಗರ ಮೇಲ್ಸೇತುವೆ ಬಳಿ ಜನರು ಪ್ರತಿನಿತ್ಯ ಕಸವನ್ನು ಎಸೆಯುತ್ತಾರೆ. ಅವರಲ್ಲಿ ಜಾಗೃತಿ ಮೂಡಿಸುವ ಹಿನ್ನೆಲೆಯಲ್ಲಿ ‘ನಿಮ್ಮ ಗಂಧದಗುಡಿ’ ಎಂಬ ಕಾರ್ಯಕ್ರಮವನ್ನು ಶನಿವಾರ ಆಯೋಜಿಸಲಾಗಿತ್ತು. ಎಲ್ಲೆಂದರಲ್ಲಿ ಕಸ ಎಸೆಯಬೇಡಿ, ತಮ್ಮ ಸುತ್ತಮುತ್ತಲಿನ ಪರಿಸರ ಮಾಲಿನ್ಯಗೊಳ್ಳದಂತೆ ತಡೆಗಟ್ಟಿ ಎಂದು ಸ್ವಯಂ ಜಾಗೃತಿ ತಂಡದ ಸದಸ್ಯರು ಮನವಿ ಮಾಡಿದರು.


ಬಿಬಿಎಂಪಿ ಪೌರಕಾರ್ಮಿಕರು ಹಾಗೂ ಸ್ವಯಂ ಜಾಗೃತಿ ತಂಡದ ಸಹಭಾಗಿತ್ವದಲ್ಲಿ ಕಲ್ಯಾಣನಗರದಲ್ಲಿ ಸ್ವಚ್ಛತಾ ಕಾರ್ಯ ನಡೆಸಿ ಪುನೀತ್ ರಾಜ್‌ಕುಮಾರ್ ಅವರ ಮೊದಲನೇ ವರ್ಷದ ಪುಣ್ಯಸ್ಮರಣೆ ಆಚರಿಸಲಾಯಿತು

ಜನರು ಕಸ ಹಾಕುವ ಜಾಗವನ್ನು ಸ್ವಚ್ಛ ಮಾಡಲಾಯಿತು. ರಂಗೋಲಿ ಹಾಕಿ, ಕನ್ನಡ ಧ್ವಜ ಹಾರಿಸಲಾಯಿತು. ಸ್ವಯಂ ಜಾಗೃತಿ ತಂಡದ ಸದಸ್ಯರು ಪೌರಕಾರ್ಮಿಕರಿಗೆ ಸೀರೆ ಮತ್ತು ಸಿಹಿ ತಿನಿಸು ಹಂಚಿದರು. ತಂಡದ ರಾಜ್ಯ ಘಟಕದ ಅಧ್ಯಕ್ಷ ಅಜಯ್ ಕುಮಾರ್, ಸಂತೋಷ್ ಹಿಂಬಾಳೆ, ರವಿ, ನವೀನ್, ಅಭಿಷೇಕ್, ಮಂಜು, ಪ್ರಚಾರ ಸಮಿತಿ ಅಧ್ಯಕ್ಷರಾದ ಶ್ರೀಕಾಂತ್ ಕನ್ನಡಿಗ, ಆರೋಗ್ಯ ನಿರೀಕ್ಷಕ ಸತೀಶ್ ಮತ್ತು ಪೌರಕಾರ್ಮಿಕರು ಭಾಗವಹಿಸಿದ್ದರು.


ಅಪ್ಪು ಗೌರವಾರ್ಥ ಬೈಕ್ ಜಾಥಾ

ಬೆಂಗಳೂರು: ಪುನೀತ್ ರಾಜ್‌ಕುಮಾರ್ ಗೌರವಾರ್ಥ ಹಾಗೂ 67ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ‘3ಎಸ್ ಇವೆಂಟ್ ಮತ್ತು ಎಬಿಸಿ ಇಂಡಿಯಾ’ ಸಹೋಗದಲ್ಲಿ 1000 ಬೈಕ್‌ಗಳ ಜಾಥಾ ಭಾನುವಾರ ನಡೆಯಿತು.

‘ಅಕ್ಟೋಬರ್ ಬೈಕರ್ಸ್ ಫೆಸ್ಟ್ 2022’ ಹೆಸರಿನಲ್ಲಿ ಈ ಜಾಥಾ ಆಯೋಜಿಸಲಾಗಿತ್ತು.

ಜಾಥಾಗೆ ಟಿವಿಎಸ್ ಯುರೋ ಸಂಸ್ಥೆಯ ಕಾರ್ಯನಿರ್ವಾಹಕ ಉಪಾಧ್ಯಕ್ಷ ಮಾಧವನ್, ಟಿವಿಎಸ್ ಹಿರೋ ಸಂಸ್ಥೆ ವಿಭಾಗದ ವ್ಯವಸ್ಥಾಪಕ ಕೆ.ವಿ. ಉನ್ನಿಕೃಷ್ಣನ್ ಮತ್ತು ಜೆಕೆ ಗ್ರ್ಯಾಂಡ್ ಅರೇನಾ ಸಿಇಒ ಜಿ. ಕೃಷ್ಣಪ್ಪ ಚಾಲನೆ ನೀಡಿದರು.

ನಾಯಂಡಹಳ್ಳಿಯ ನಂದಿ ಲಿಂಕ್ ಆಟದ ಮೈದಾನದಿಂದ ಕೆಂಗೇರಿಯವರೆಗೂ 10 ಕಿ.ಮೀ ಬೈಕ್ ಜಾಥಾ ನಡೆಯಿತು. 500ಕ್ಕೂ ಹೆಚ್ಚು ಜನರು ಜಾಥಾದಲ್ಲಿ ಪಾಲ್ಗೊಂಡಿದ್ದರು. ಪುನೀತ್ ರಾಜ್‌ಕುಮಾರ್ ಅವರ ಚಿತ್ರಗಳ ಗಾಯನ, ಇಂಟರ್ ಬೈಕ್ ಕ್ಲಬ್‌ಗಳ ಸ್ಪರ್ಧೆ, ಅಬ್‌ಸ್ಟಿಕಲ್ ರೇಸ್, ಫಿಟ್ನೆಸ್, ಫ್ಯಾಷನ್ ಷೊ ಮತ್ತು ಮೋಟರ್ ಬೈಕ್ ಬಿಡಿ ಭಾಗಗಳ ಪ್ರದರ್ಶನವನ್ನು ಜಾಥಾ ಅಂಗವಾಗಿ ಏರ್ಪಡಿಸಲಾಗಿತ್ತು.


ಪುನೀತ್ ಗೌರವಾರ್ಥವಾಗಿ ಆಯೋಜಿಸಿದ್ದ ಬೈಕ್ ಜಾಥಾದಲ್ಲಿ ಭಾಗವಹಿಸಿದ್ದ ನಾಗರಿಕರು

ಪಾಲಿಕೆ ನೌಕರರ ಧರಣಿ: ಇಂದು ಕರಾಳ ದಿನಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಅಧಿಕಾರಿಗಳು ಹಾಗೂ ನೌಕರರಿಗೆ ಆರೋಗ್ಯ ಕಾರ್ಡ್ ನೀಡಬೇಕು ಮತ್ತು ಅನ್ಯ ಇಲಾಖೆಗಳ ಅಧಿಕಾರಿಗಳನ್ನು ಪಾಲಿಕೆಗೆ ನಿಯೋಜಿಸುವ ಪ್ರಕ್ರಿಯೆ ರದ್ದುಗೊಳಿಸಬೇಕು ಎಂದು ಒತ್ತಾಯಿಸಿ ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಸೋಮವಾರ ಕರಾಳ ದಿನ ಆಚರಿಸಲಿದೆ. ನ.2ರಂದು ಪ್ರತಿಭಟನೆ ನಡೆಸಲಿದೆ.

‘ಬಿಬಿಎಂಪಿ ಪೌರಕಾರ್ಮಿಕರು ಮತ್ತು ಆರೋಗ್ಯ ಗ್ಯಾಂಗ್‌ಮೆನ್‌ಗಳ ಸಂಘದ ಬೆಂಬಲದೊಂದಿಗೆ ಎಲ್ಲ ಕಾರ್ಯಗಳನ್ನು ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಲಾಗುವುದು. ಕರಾಳ ದಿನಾಚರಣೆಯಲ್ಲಿ ಅಧಿಕಾರಿಗಳು ಮತ್ತು ನೌಕರರು ಕಪ್ಪುಪಟ್ಟಿ ಧರಿಸಿ ಮುಷ್ಕರ ನಡೆಸುತ್ತೇವೆ’ ಎಂದು ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಅವರು ತಿಳಿಸಿದರು.

‘ಪಾಲಿಕೆಯಲ್ಲಿ ಉತ್ತಮ ಸೇವೆ ಸಲ್ಲಿಸಿರುವ ಅಧಿಕಾರಿಗಳಿಗೆ ಕೆಂಪೇಗೌಡ ಪ್ರಶಸ್ತಿ ನೀಡಬೇಕು. ಪಾಲಿಕೆಯಲ್ಲಿ 5,219 ಹುದ್ದೆಗಳ ಮಂಜೂರಾತಿಗೆ 4 ವರ್ಷಗಳಿಂದ ವಿಳಂಬ ಮಾಡಲಾಗುತ್ತಿದೆ. 707 ಹುದ್ದೆಗಳನ್ನು ನೇರ ನೇಮಕಾತಿಗಾಗಿ ಈಗಾಗಲೇ ಸರ್ಕಾರ ಅನುಮೋದನೆ ನೀಡಿದೆ. ಆದರೂ, ಈವರೆಗೆ ನೇಮಕಾತಿ ಪ್ರಕ್ರಿಯೆ ನಡೆದಿಲ್ಲ. ಹೀಗೆ 18 ಬೇಡಿಕೆಗಳನ್ನು ಸಲ್ಲಿಸಲಾಗಿದೆ’ ಎಂದು ಹೇಳಿದರು.

‘ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಂತೆ ಗ್ರೂಪ್ ‘ಎ’ ಮುಂಬಡ್ತಿಯನ್ನು ಸರ್ಕಾರವು ನಗರಾಭಿವೃದ್ಧಿ ಇಲಾಖೆಗೆ ವಹಿಸಿದೆ. ಇದರಿಂದ ಹಲವು ಅಧಿಕಾರಿಗಳು ವಂಚಿತರಾಗಲಿದ್ದಾರೆ. ಎಂಜಿನಿಯರ್‌ಗಳಿಗೆ ಘನತ್ಯಾಜ್ಯ ವಿಲೇವಾರಿ ಕೆಲಸದಿಂದ ವಿಮುಕ್ತಿಗೊಳಿಸಿ ಕಸ ವಿಲೇವಾರಿ ವ್ಯವಸ್ಥೆಗೆ ಪ್ರತ್ಯೇಕ ಪರಿಸರ ಎಂಜಿನಿಯರ್ ಮತ್ತು ಆರೋಗ್ಯ ಪರಿವೀಕ್ಷಕರನ್ನು ನೇಮಿಸಬೇಕು’ ಎಂದು ಆಗ್ರಹಿಸಿದರು.

‘ಎರವಲು ಸೇವೆ ಮೇರೆಗೆ ಬೇರೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳನ್ನು ಮಾತೃ ಇಲಾಖೆಗೆ ಕಳುಹಿಸಬೇಕು. ಕಾನೂನುಬಾಹಿರವಾಗಿ ನೇಮಿಸಿರುವ ಮಾರ್ಷಲ್‌ಗಳನ್ನು ಹಿಂಪಡೆಯಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ಆಧಾರದ ಮೇಲೆ ಕೆಲಸ ಮಾಡುತ್ತಿರುವ ನೌಕರರನ್ನು ಸಕ್ರಮಗೊಳಿಸಬೇಕು’ ಎಂದು ಅಮೃತ್‌ರಾಜ್ ವಿವರಿಸಿದರು.

‘ಸಂಶೋಧನೆ, ಮಾರ್ಗದರ್ಶನಕ್ಕೆ ಅನುಕೂಲ’

ಬೆಂಗಳೂರು: ‘ಸಂಶೋಧಕ ಡಾ.ಲ.ನ.ಸ್ವಾಮಿ ಅವರು ರಚಿಸಿರುವ ಮೈಸೂರು ಸಂಸ್ಥಾನದ ರಾಜಕಾರ್ಯಧುರಂಧರ ಪ್ರಧಾನ ವೆಂಕಾಮಾತ್ಯ ಕೃತಿಯು ಸಂಶೋಧನೆಗೆ ನೆರವಾಗಲಿದೆ. ಇದರೊಂದಿಗೆ ಮಾರ್ಗದರ್ಶನವನ್ನೂ ನೀಡಲಿದೆ’ ಎಂದು ಸಂಶೋಧಕ ಡಾ.ಪಿ.ವಿ.ನಾರಾಯಣ ಹೇಳಿದರು.

‘ದಿ ಮಿಥಿಕ್ ಸೊಸೈಟಿ’ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

‘ಸ್ವಾಮಿ ಅವರು ಶ್ರಮಪಟ್ಟಿದ್ದಾರೆ. ಇತಿಹಾಸ ಹಾಗೂ ಸಾಹಿತ್ಯ ವಲಯದಲ್ಲಿ ಸಾಕಷ್ಟು ಪ್ರಸಿದ್ಧಿ ಪಡೆದಿರುವ ವೆಂಕಾಮಾತ್ಯ ಅವರನ್ನು ಸಮಗ್ರವಾಗಿ ಕಟ್ಟಿಕೊಡುವ ಕೃತಿಗಳು ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಬಂದಿರಲಿಲ್ಲ. ಸ್ವಾಮಿ ಅವರ ಕೃತಿ ಸಮಗ್ರವಾಗಿದೆ’ ಎಂದರು.

ಯೋಗಿ ನಾರೇಯಣ ಇಂಡಾಲಜಿ ಕೇಂದ್ರದ ನಿರ್ದೇಶಕ ಡಾ.ಬಾಬು ಕೃಷ್ಣಮೂರ್ತಿ ಮಾತನಾಡಿ, ‘ಇದುವರೆಗೂ ಲಭ್ಯವಿದ್ದ ಕೃತಿಗಳಲ್ಲಿ ವೆಂಕಾಮಾತ್ಯ ಅವರ ಬಗ್ಗೆ ಕಡಿಮೆ ಮಾಹಿತಿಯಿತ್ತು. ಆದರೆ, ಸ್ವಾಮಿ ಅವರು ಸಮಗ್ರವಾದ ಕೃತಿ ಹೊರತಂದಿದ್ದಾರೆ’ ಎಂದರು. ಲೇಖಕ ಡಾ.ಲ.ನ.ಸ್ವಾಮಿ ಮಾತನಾಡಿ, 2007ರಲ್ಲಿ ಹಸ್ತ ಪ್ರತಿ ಲಭಿಸಿತ್ತು. ಅದನ್ನು ಆಧರಿಸಿ ಪುಟ್ಟ ಕೃತಿ ಹೊರತರಲಾಗಿತ್ತು. ಈ ಕೃತಿಯಲ್ಲಿ ಸಮಗ್ರ ಮಾಹಿತಿ ನೀಡಲಾಗಿದೆ ಎಂದರು.

ದಿ ಮಿಥಿಕ್ ಸೊಸೈಟಿ ಆಡಳಿತ ಮಂಡಳಿ ಸದಸ್ಯ ಎಂ.ಆರ್.ಪ್ರಸನ್ನ ಕುಮಾರ್, ಮಹಾರಾಣಿ ಕ್ಲಸ್ಟರ್ ವಿವಿಯ ರಿಜಿಸ್ಟ್ರಾರ್ ಡಾ.ವಿ.ಅನುರಾಧಾ ಹಾಜರಿದ್ದರು.

ಪುಸ್ತಕ ಪರಿಚಯ


ಕೃತಿ: ಮೈಸೂರು ಸಂಸ್ಥಾನದ ರಾಜಕಾರ್ಯಧುರಂಧರ ಪ್ರಧಾನ ವೆಂಕಾಮಾತ್ಯ
ಪುಟ: 360
ಮೊತ್ತ: ₹ 499
ಪ್ರಕಾಶನ: ಸುಹಾಸ್ ಗ್ರಾಫಿಕ್ಸ್ ರಾಜಾಜಿನಗರ, ಬೆಂಗಳೂರು

ನಗರದಲ್ಲಿ ಇಂದು

ಪೊಲೀಸ್ ಸೇವಾ ಕವಾಯತು: ಅತಿಥಿಗಳು: ಪ್ರವೀಣ್‌ಸೂದ್, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ಕೆಎಸ್‌ಆರ್‌ಪಿ 3ನೇ ಪಡೆಯ ಕವಾಯತು ಮೈದಾನ, ಕೋರಮಂಗಲ, ಬೆಳಿಗ್ಗೆ 7.45

ರಾಷ್ಟ್ರೀಯ ಏಕತಾ ದಿವಸ: ಪ್ರತಿಜ್ಞಾ ವಚನಾ ಬೋಧನೆ: ಬಸವರಾಜ ಬೊಮ್ಮಾಯಿ, ಸ್ಥಳ: ಕೊಠಡಿ ಸಂಖ್ಯೆ 334, 3ನೇ ಮಹಡಿ, ಸಮ್ಮೇಳನ ಸಭಾಂಗಣ, ವಿಧಾನಸೌಧ, ಬೆಳಿಗ್ಗೆ 10.30

ರಾಷ್ಟ್ರೀಯ ಇಎಂಆರ್‌ಎಸ್ ಸಾಂಸ್ಕೃತಿಕ ಉತ್ಸವ: ಉಪಸ್ಥಿತಿ: ಶ್ರೀ ಶ್ರೀ ರವಿಶಂಕರ್ ಗುರೂಜಿ, ಅತಿಥಿಗಳು: ರೇಣುಕ ಸಿಂಗ್ ಸುರಟ್, ಬಿ .ಶ್ರೀರಾಮುಲು, ಕೋಟ ಶ್ರೀನಿವಾಸ ಪೂಜಾರಿ, ಆಯೋಜನೆ ಮತ್ತು ಸ್ಥಳ: ದಿ ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರ, ಬೆಳಿಗ್ಗೆ 10.30


ರವಿಶಂಕರ ಗುರೂಜಿ


‘ಜಾಗೃತಿ ಅರಿವು ಸಪ್ತಾಹ’: ಪ್ರತಿಜ್ಞಾ ವಚನ ಬೋಧನೆ: ಬಸವರಾಜ ಬೊಮ್ಮಾಯಿ, ಆಯೋಜನೆ: ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಸ್ಥಳ: ಕೊಠಡಿ ಸಂಖ್ಯೆ 334, 3ನೇ ಮಹಡಿ, ಸಮ್ಮೇಳನ ಸಭಾಂಗಣ, ವಿಧಾನಸೌಧ, ಬೆಳಿಗ್ಗೆ 11

ಮಾಧ್ಯಮ ಮಿತ್ರರೊಡನೆ ದಲಿತ ಉದ್ದಿಮೆದಾರರ ಸಮಾಲೋಚನಾ ಕಾರ್ಯಕ್ರಮ: ಉದ್ಘಾಟನೆ: ರವೀಂದ್ರ ಭಟ್ಟ, ಅತಿಥಿಗಳು: ಸುದರ್ಶನ್ ಚನ್ನಂಗಿಹಳ್ಳಿ, ಹುಣಸವಾಡಿ ರಾಜನ್, ಎಸ್.ಭಾಗ್ಯಶ್ರೀ, ಶಿವಾನಂದ ತಗಡೂರು, ರಮಾಕಾಂತ್ ಆರ್ಯನ್, ಇಂದೂಧರ ಹೊನ್ನಾಪುರ, ಎಲ್. ಎಂ.ನಾಗರಾಜು, ಸಿ. ಪ್ರಕಾಶ್, ಆಯೋಜನೆ: ಕರ್ನಾಟಕ ದಲಿತ ಉದ್ದಿಮೆದಾರರ ಸಂಘ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಆವರಣ, ಅರಮನೆ ರಸ್ತೆ, ಬೆಳಿಗ್ಗೆ 11

ಸರ್ದಾರ್ ವಲ್ಲಭಬಾಯಿ ಪಟೇಲ್ ಅವರ ಜನ್ಮದಿನದ ಅಂಗವಾಗಿ ಉಪನ್ಯಾಸ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ: ಅತಿಥಿಗಳು: ರವಿ ಸುಬ್ರಮಣ್ಯ, ಪಾ.ರಾ.ಕೃಷ್ಣಮೂರ್ತಿ, ಎಂ.ನರಸಿಂಹಮೂರ್ತಿ, ಗೋಪಾಲಕೃಷ್ಣ, ಆಯೋಜನೆ: ಕಲಾರಂಗಲೋಕ, ವಿಭಾವ ಕ್ರಿಯೇಷನ್ಸ್, ಸ್ಥಳ: ಸ್ವಾಮಿ ವಿವೇಕಾನಂದ ಉದ್ಯಾನ, ಗಿರಿನಗರ, ಸಂಜೆ 6

‘ಮಣಿಬೆನ್’ ನಾಟಕ ಪ್ರದರ್ಶನ: ರಚನೆ: ಕೆ.ಎಸ್. ರಂಗೇಗೌಡ, ನಿರ್ದೇಶನ: ಜೋಸೆಫ್ ಜಾನ್, ಸಂಗೀತ: ಪ್ರಸನ್ನ ಕುಮಾರ್ ಎಂ.ಎಸ್., ರಂಗವಿನ್ಯಾಸ: ಗಗನ್ ಪ್ರಸಾದ್, ಬೆಳಕು: ಮಂಜುನಾರಾಯಣ್, ಸಚಿನ್ ರಂಗನಾಥ್, ಪ್ರಸಾದನ: ಜಯರಾಜ್ ಹೊಸ್ಕೂರು, ಆಯೋಜನೆ: ಸುಸ್ಥಿರ ಪ್ರತಿಷ್ಠಾನ, ಸ್ಥಳ: ಕಲಾಗ್ರಾಮ ಸಮುಚ್ಚಯ, ಮಲ್ಲತ್ತಹಳ್ಳಿ, ಸಂಜೆ 7

ಸರ್ಕಾರಿ ಶಾಲೆಗಳ ದತ್ತು ಸ್ವೀಕಾರ ಕಾರ್ಯಕ್ರಮ: ಉದ್ಘಾಟನೆ: ಬಿ.ಸಿ. ನಾಗೇಶ್, ಅತಿಥಿಗಳು: ಎಂ.ಆರ್. ದೊರೆಸ್ವಾಮಿ, ಎಂ. ಕೃಷ್ಣಪ್ಪ, ಅಧ್ಯಕ್ಷತೆ: ರಾಜಗೋಪಾಲ್ ನಾಯ್ಡು, ಉಪಸ್ಥಿತಿ: ಆರ್. ಲೀಲಾ ಶಂಕರ್‌ರಾವ್, ಟಿ. ನೀರಜಾಕ್ಷುಲು, ನಾಯ್ಡು, ಆಯೋಜನೆ: ಕೆ.ಎಸ್. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ವಸಂತಪುರ, ಮಧ್ಯಾಹ್ನ 2


ಎಂ.ಆರ್ ದೊರಸ್ವಾಮಿ

‘ಆನ್‌ಟು ಎ ರಾಕೆಟ್ ಶಿಪ್’ ಕೃತಿ ಬಿಡುಗಡೆ

‘ಪರಿಹಾರ ರೂಪಿಸುವ ಪ್ರಾಧಿಕಾರ ರಚನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಸ್ಯೆಗಳಿಗೆ ಪರಿಹಾರ ರೂಪಿಸುವ ಪ್ರಾಧಿಕಾರ ರಚಿಸಲು ಸರ್ಕಾರ ಸಿದ್ಧವಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಇಸ್ರೊ ಮಾಜಿ ವಿಜ್ಞಾನಿ ಬಿ.ಎನ್. ಸುರೇಶ್ ಅವರ ಆತ್ಮಕಥೆ ‘ಆನ್‌ಟು ಎ ರಾಕೆಟ್ ಶಿಪ್’ ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, ‘ರಾಜ್ಯದಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ, ಇಸ್ರೊ, ಸಿಎಫ್‌ಟಿಆರ್‌ಐ ಮುಂತಾದ ಮಹತ್ವದ ಸಂಸ್ಥೆಗಳಿವೆ. ಈ ಸಂಸ್ಥೆಗಳ ಮೂಲಕ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಮತ್ತು ವೈಜ್ಞಾನಿಕ ಜ್ಞಾನದ ಬಳಕೆಯನ್ನು ಉತ್ತೇಜಿಸುವ ಸಂಸ್ಥೆಯ ಅಗತ್ಯವಿದೆ’ ಎಂದರು.

‘ಶೀಘ್ರದಲ್ಲಿಯೇ ಇಸ್ರೊ ಸೇರಿ ಇತರ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ, ನಿವೃತ್ತರಾಗಿರುವವರನ್ನು ಒಳಗೊಂಡ ಸಂಸ್ಥೆ ರಚಿಸಲಾಗುವುದು’ ಎಂದರು.



ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸುನೀಲ್ ಸುರೇಶ್ (ಎಡದಿಂದ ನಾಲಕ್ಕನೆಯವರು) ಅವರ ‘ಆನ್‌ಟು ಎ ರಾಕೆಟ್ ಶಿಪ್’ ಪುಸ್ತಕ ಲೋಕಾರ್ಪಣೆ ಮಾಡಿದರು. (ಎಡದಿಂದ) ಇಸ್ರೊ ಮಾಜಿ ಅಧ್ಯಕ್ಷ ಕೆ. ರಾಧಾಕೃಷ್ಣನ್, ಅಧ್ಯಕ್ಷ ಎಸ್. ಸೋಮನಾಥ್, ಇಸ್ರೊ ಮಾಜಿ ಅಧ್ಯಕ್ಷ ಡಾ.ಕೆ ಶಿವನ್ ಇದ್ದರು —ಪ್ರಜಾವಾಣಿ ಚಿತ್ರ

‘ಬಿ.ಎನ್. ಸುರೇಶ್ ಅವರ ಜೀವನದ ಪಯಣವನ್ನು ತಿಳಿಸುವ ಕೃತಿ ಪ್ರತಿಯೊಬ್ಬ ಕನ್ನಡಿಗನಿಗೂ ಹೆಮ್ಮೆ ತರುವಂತಿದೆ. ಸಾಧಿಸುವ ಸ್ಫೂರ್ತಿಯುಳ್ಳ, ಅತ್ಯಂತ ವಿನಯಶೀಲ ವ್ಯಕ್ತಿ ಸುರೇಶ್. ವಿನಯಶೀಲರಾಗಿ ಉಳಿಯುವುದು ಬಹಳ ಕಷ್ಟ. ಅದೇ ಒಂದು ಸಾಧನೆ. ಯಶಸ್ಸು ಸಾಧನೆಯೆಡೆಗಿನ ಪಯಣ. ಕರ್ನಾಟಕ ಮತ್ತು ದೇಶದ ಹೆಮ್ಮೆಯ ಪುತ್ರ ಸುರೇಶ್. ಎಲ್ಲರೂ ಸುರೇಶ್ ಅವರ ಆತ್ಮಕಥೆಯನ್ನು ಓದಬೇಕು’ ಎಂದು ಮುಖ್ಯಮಂತ್ರಿ ತಿಳಿಸಿದರು.

ವಿದ್ಯಾರ್ಥಿ ಸಾವು: ಕಾರು ಚಾಲಕ, ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಎಫ್‌ಐಆರ್

ರಸ್ತೆಗುಂಡಿಯಿಂದ ಮತ್ತೊಂದು ಅಪಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ಸಂಚಾರ ಠಾಣೆ ವ್ಯಾಪ್ತಿಯ ಅಟ್ಟೂರು ಮುಖ್ಯರಸ್ತೆಯಲ್ಲಿ ಕಾರು ಹಾಗೂ ಬೈಕ್ ನಡುವೆ ಶನಿವಾರ ರಾತ್ರಿ ಅಪಘಾತ ಸಂಭವಿಸಿದ್ದು, ಬೈಕ್ ಹಿಂಬದಿ ಸವಾರ ಹರ್ಷದ್ (22) ಎಂಬುವರು ಮೃತಪಟ್ಟಿದ್ದಾರೆ.

'ಹದಗೆಟ್ಟ ರಸ್ತೆಯಲ್ಲಿರುವ ಗುಂಡಿಗಳಿಂದ ಅಪಘಾತ ಸಂಭವಿಸಿದೆ' ಎಂಬುದಾಗಿ ಸ್ಥಳೀಯರು ಆರೋಪಿಸಿದ್ದು, ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

'ಮೃತ ಹರ್ಷದ್, ಕೇರಳದವರು. ಜಾಲಹಳ್ಳಿಯಲ್ಲಿ ನೆಲೆಸಿದ್ದ ಅವರು, ಕಾಲೇಜೊಂದರಲ್ಲಿ ವ್ಯಾಸಂಗ ಮಾಡುತ್ತಿದ್ದರು. ಅರೆಕಾಲಿಕ ಕೆಲಸಕ್ಕೂ ಹೋಗಿ ಬರುತ್ತಿದ್ದರು. ಸ್ನೇಹಿತ ರಾಹುಲ್ (23) ಜೊತೆ ಬೈಕ್‌ನಲ್ಲಿ ತೆರಳುತ್ತಿದ್ದಾಗ ಈ ಅವಘಡ ಸಂಭವಿಸಿದೆ. ಅಪಘಾತದ ಬಳಿಕ ಕಾರು ಸ್ಥಳದಲ್ಲೇ ಬಿಟ್ಟು ಚಾಲಕ ಪರಾರಿಯಾಗಿದ್ದು, ಆತನ ವಿರುದ್ಧವೂ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ಕಾರು– ಬೈಕ್ ಮುಖಾಮುಖಿ ಡಿಕ್ಕಿ: 'ರಾಹುಲ್ ಹಾಗೂ ಹರ್ಷದ್, ರಾತ್ರಿ 11 ಗಂಟೆ ಸುಮಾರಿಗೆ ಪಲ್ಸರ್ ಬೈಕ್‌ನಲ್ಲಿ (ಕೆಎ 04 ಇಎಫ್ 2074) ಅಟ್ಟೂರಿನಿಂದ ಮುಖ್ಯರಸ್ತೆ ಮೂಲಕ ಜಾಲಹಳ್ಳಿ ಕಡೆಗೆ ಹೊರಟಿದ್ದರು. ಇದೇ ಸಂದರ್ಭದಲ್ಲೇ ರಾಯಲ್ ಕಾನ್ ಕಾರ್ಡ್ ಸ್ಕೂಲ್ (ವಿವೇಕಾನಂದ ಸ್ಕೂಲ್) ಎದುರು ಆರೋಪಿತ ಚಾಲಕ, ತನ್ನ ವೋಕ್ಸ್ ವ್ಯಾಗನ್ ಕಾರನ್ನು (ಕೆಎ 50 ಎಂಎ 2520) ಅತೀ ವೇಗವಾಗಿ ಚಲಾಯಿಸಿದ್ದ. ಇದರಿಂದಾಗಿ ಕಾರು ಎದುರಿಗೆ ಬರುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದಿತ್ತು' ಎಂದು ಪೊಲೀಸರು ತಿಳಿಸಿದರು.


ಹರ್ಷದ್

'ಅಪಘಾತದಿಂದ ಬೈಕ್ ರಸ್ತೆಯಲ್ಲೇ ಉರುಳಿಬಿದ್ದಿತ್ತು. ತೀವ್ರ ಗಾಯಗೊಂಡಿದ್ದ ಹರ್ಷದ್ ಹಾಗೂ ರಾಹುಲ್, ಪ್ರಜ್ಞೆ ತಪ್ಪಿ ಬಿದ್ದಿದ್ದರು. ಅವರಿಬ್ಬರನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ದಿದ್ದರು. ತಪಾಸಣೆ ನಡೆಸಿದ್ದ ವೈದ್ಯರು, ಮಾರ್ಗ ಮಧ್ಯೆಯೇ ಹರ್ಷದ್ ಮೃತಪಟ್ಟಿರುವುದಾಗಿ ಹೇಳಿದರು. ರಾಹುಲ್ ಆರೋಗ್ಯ ಸಹ ಚಿಂತಾಜನಕವಾಗಿದ್ದು, ವೈದ್ಯರು ಚಿಕಿತ್ಸೆ ಮುಂದುವರಿಸಿದ್ದಾರೆ' ಎಂದು ಪೊಲೀಸರು ಹೇಳಿದರು.

'ಅಪಘಾತದಿಂದಾಗಿ ಕಾರು ಸಹ ರಸ್ತೆಬದಿಯಲ್ಲಿ ಉರುಳಿಬಿದ್ದಿತ್ತು. ಸ್ಥಳೀಯರು ಸ್ಥಳದಲ್ಲಿ ಸೇರುತ್ತಿದ್ದಂತೆ ಚಾಲಕ ಪರಾರಿಯಾಗಿದ್ದಾನೆ. ಎಂ. ಅಭಿಷೇಕ್ ಹೆಸರಿನಲ್ಲಿ ಕಾರು ನೋಂದಣಿ ಆಗಿದ್ದು, ಅದನ್ನು ಆಧರಿಸಿ ಚಾಲಕನನ್ನು ಪತ್ತೆ ಮಾಡಲಾಗುತ್ತಿದೆ' ಎಂದೂ ತಿಳಿಸಿದರು.



ಅಟ್ಟೂರು ಮುಖ್ಯರಸ್ತೆಯಲ್ಲಿ ಶನಿವಾರ ರಾತ್ರಿ ಸಂಭವಿಸಿದ್ದ ಅಪಘಾತದಲ್ಲಿ ಉರುಳಿ ಬಿದ್ದಿರುವ ಬೈಕ್ ಹಾಗೂ ಕಾರು (ಎಡಚಿತ್ರ) ಅಟ್ಟೂರು ಮುಖ್ಯರಸ್ತೆಯಲ್ಲಿ ಬಿದ್ದಿರುವ ಗುಂಡಿಯಲ್ಲಿ ನೀರು ನಿಂತಿರುವುದು

ರಸ್ತೆ ಗುಂಡಿಯಿಂದ ಅಪಘಾತವಾಗಿದ್ದ ಪ್ರಕರಣಗಳು

- **2022 ಅಕ್ಟೋಬರ್ 17:** ರಾಜಾಜಿನಗರದ ಲುಲು ಗ್ಲೋಬಲ್ ಮಾಲ್ ಎದುರು ರಸ್ತೆ ಗುಂಡಿ ತಪ್ಪಿಸುವಾಗ ದ್ವಿಚಕ್ರ ವಾಹನಕ್ಕೆ ಕೆಎಸ್ಆರ್‌ಟಿಸಿ ಬಸ್ ಡಿಕ್ಕಿ ಹೊಡೆದು, ಉಮಾದೇವಿ (42) ಅವರು ಮೃತಪಟ್ಟಿದ್ದರು
- **2022ರ ಮಾರ್ಚ್ 13:** ಎಂ.ಎಸ್. ಪಾಳ್ಯದ ಮುನೇಶ್ವರ ಬಡಾವಣೆಯಲ್ಲಿ ರಸ್ತೆ ಗುಂಡಿಯಿಂದಾಗಿ ಬೈಕ್ ಉರುಳಿಬಿದ್ದಿದ್ದು, ಸವಾರ ಅಶ್ವಿನ್ ಜುಗ್ಡೆ (27) ಮೃತಪಟ್ಟಿದ್ದರು
- **2022ರ ಜನವರಿ 29:** ಬ್ಯಾಡರಹಳ್ಳಿ ಮುಖ್ಯರಸ್ತೆಯ ಅಂಜನಾನಗರ ವೃತ್ತದಲ್ಲಿ ರಸ್ತೆ ಗುಂಡಿಯಿಂದಾಗಿ ಅಪಘಾತ ಸಂಭವಿಸಿ ಶಿಕ್ಷಕಿ ಶರ್ಮಿಳಾ (38) ಎಂಬುವರು ಮೃತಪಟ್ಟಿದ್ದರು
- **2021ರ ಸೆಪ್ಟೆಂಬರ್ 7:** ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ವ್ಯಾಪ್ತಿಯ ಮಂಗನಹಳ್ಳಿ ಮುಖ್ಯರಸ್ತೆಯಲ್ಲಿ ಗುಂಡಿಯಿಂದಾಗಿ ದ್ವಿಚಕ್ರ ವಾಹನ ಉರುಳಿ ಬಿದ್ದಿದ್ದು, ಮೈಕೊ ಲೇಔಟ್‌ನ ಬಿಸ್ಮಿಲ್ಲಾ ನಗರದ ಸವಾರ ಖುರ್ಷಿದ್ ಅಹ್ಮದ್ (65) ಎಂಬುವರು ಮೃತಪಟ್ಟಿದ್ದರು
- **2021ರ ನ. 27:** ಥಣಿಸಂದ್ರ ಮುಖ್ಯರಸ್ತೆಯಲ್ಲಿ ರಸ್ತೆ ಗುಂಡಿಯಲ್ಲಿ ಆಯತಪ್ಪಿ ಬಿದ್ದ ಸ್ಕೂಟರ್ ಸವಾರ ಅಜೀಂ ಅಹ್ಮದ್ (21) ಎಂಬುವರಿಗೆ ಗೂಡ್ಸ್ ವಾಹನವೊಂದು ಡಿಕ್ಕಿ ಹೊಡೆದಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಅಜೀಂ, ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದರು

ಮಳೆಯಿಂದ ರಸ್ತೆಗುಂಡಿಯಲ್ಲಿ ನಿಂತಿದ್ದ ನೀರು: 'ಶನಿವಾರ ರಾತ್ರಿ ಮಳೆ ಸುರಿಯುತ್ತಿತ್ತು. ಅಟ್ಟೂರು ಮುಖ್ಯರಸ್ತೆಯಲ್ಲಿ ಹೆಚ್ಚಿರುವ ಗುಂಡಿಗಳಲ್ಲಿ ನೀರು ನಿಂತುಕೊಂಡಿತ್ತು. ಇದನ್ನು ಗಮನಿಸದೇ ಚಾಲಕ, ಅತೀ ವೇಗವಾಗಿ ಕಾರು ಚಲಾಯಿಸಿದ್ದ. ಗುಂಡಿಗಳಲ್ಲಿ ಚಕ್ರ ಇಳಿಯುತ್ತಿದ್ದಂತೆ ನಿಯಂತ್ರಣ ತಪ್ಪಿದ್ದ ಕಾರು, ಬೈಕ್‌ಗೆ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿರುವ ಅನುಮಾನವಿದೆ' ಎಂದು ಮೃತ ಹರ್ಷದ್ ಸ್ನೇಹಿತ ದೂರು ನೀಡಿದ್ದಾರೆ. ಹೀಗಾಗಿ, ಕಾರು ಚಾಲಕ ಹಾಗೂ ಬಿಬಿಎಂಪಿ ಅಧಿಕಾರಿಗಳು ಇಬ್ಬರನ್ನೂ ಆರೋಪಿಗಳನ್ನಾಗಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಅಪಘಾತ ಸ್ಥಳದ ಸುತ್ತಮುತ್ತ ಗುಂಡಿಗಳು ಇರುವುದು ಪರಿಶೀಲನೆಯಿಂದ ಗೊತ್ತಾಗಿದೆ. ಆದರೆ, ಗುಂಡಿಯಿಂದಲೇ ಅಪಘಾತ ಸಂಭವಿಸಿದೆ ಎಂದು ಸದ್ಯಕ್ಕೆ ನಿರ್ಧರಿಸಲಾಗದು. ಕಾರು ಚಾಲಕ ಮದ್ಯದ ಅಮಲಿನಲ್ಲಿದ್ದ ಅನುಮಾನವೂ ಇದೆ. ಹೀಗಾಗಿ, ಅಪಘಾತ ಹೇಗಾಯಿತು ಎಂಬುದನ್ನು ನಿಖರವಾಗಿ ಹೇಳಲು ಸಾಧ್ಯವಿಲ್ಲ. ತನಿಖೆಯಿಂದಲೇ ನಿಜಾಂಶ ತಿಳಿಯಲಿದೆ' ಎಂದು ತಿಳಿಸಿದರು.

'ಲಿಂಗಾಯತರಿಗೆ ಹೆಚ್ಚು ಟಿಕೆಟ್'

ಬೆಂಗಳೂರು: ಮುಂಬರುವ ವಿಧಾನ ಸಭಾ ಚುನಾವಣೆಯ ಟಿಕೆಟ್ ಹಂಚಿಕೆಯಲ್ಲಿ ವೀರಶೈವ– ಲಿಂಗಾಯತ ಸಮುದಾಯವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಲಿಂಗಾಯತ ಮುಖಂಡರೊಂದಿಗೆ ಪಕ್ಷದ ಕಚೇರಿಯಲ್ಲಿ ಭಾನುವಾರ ಸಭೆ ನಡೆಸಿದ ಅವರು, 'ಉತ್ತರ ಕರ್ನಾಟಕಕ್ಕೆ ನಮ್ಮ ಪಕ್ಷದ ಸರ್ಕಾರದ ಅವಧಿಯಲ್ಲಿ ಹೆಚ್ಚಿನ ಯೋಜನೆಗಳನ್ನು ನೀಡಲಾಗಿದೆ. ಬಿಜೆಪಿ ಮತ್ತು ಕಾಂಗ್ರೆಸ್‌ನವರು ಜಾತಿವಾರು ಸಮಾವೇಶ ನಡೆಸುತ್ತಿದ್ದಾರೆ. ನಮ್ಮದು ಎಲ್ಲ ಸಮುದಾಯಗಳನ್ನೂ ಒಳಗೊಂಡ ಪಕ್ಷ. ಹೀಗಾಗಿ ನಾವು ಅಂತಹ ಸಮಾವೇಶ ನಡೆಸುವುದಿಲ್ಲ' ಎಂದರು.

'ಲಿಂಗಾಯತ ಸಮುದಾಯದ ಮುಖಂಡರು ಈಗ ಜೆಡಿಎಸ್‌ನತ್ತ ಆಸಕ್ತಿ ತೋರುತ್ತಿರುವುದು ಕಂಡು ಸಂತೋಷವಾಗಿದೆ. ಪಕ್ಷದ ವರಿಷ್ಠ ಎಚ್.ಡಿ. ದೇವೇಗೌಡ ಅವರಿಗೂ ಸಂತಸವಾಗಿದೆ. ಚುನಾವಣೆಯಲ್ಲಿ ಈ ಸಮುದಾಯಕ್ಕೆ ಸೂಕ್ತ ಪ್ರಾತಿನಿಧ್ಯ ನೀಡಲಾಗುವುದು' ಎಂದು ಹೇಳಿದರು.

ಎಚ್.ಡಿ. ದೇವೇಗೌಡ ಮಾತನಾಡಿ, 'ಅಧಿಕಾರದಲ್ಲಿ ಇದ್ದಾಗ ನಾನು ಮತ್ತು ಕುಮಾರಸ್ವಾಮಿ ಯಾವ ಸಮುದಾಯಗಳಿಗೆ ಅನುಕೂಲ ಮಾಡಿಕೊಟ್ಟಿದ್ದೇವೆ ಎಂಬುದನ್ನು ಜನರು ಅರ್ಥ ಮಾಡಿಕೊಳ್ಳಬೇಕು' ಎಂದರು.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ, ಶಾಸಕರಾದ ವೆಂಕಟರಾವ್ ನಾಡಗೌಡ, ಲಿಂಗೇಶ್, ಮುಖಂಡರಾದ ಶಿವಶಂಕರ್, ಬಿ.ಜಿ. ಪಾಟೀಲ, ಲೀಲಾದೇವಿ ಆರ್. ಪ್ರಸಾದ್, ಪಕ್ಷದ ವಿವಿಧ ಜಿಲ್ಲಾ ಘಟಕಗಳ ಅಧ್ಯಕ್ಷರು ಸಭೆಯಲ್ಲಿದ್ದರು.

'ಸಚಿವರಿಂದ ಹಣದ ದಂಧೆ'

'ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರನ್ನು ಹೊರತುಪಡಿಸಿ ಉಳಿದ ಎಲ್ಲ ಸಚಿವರೂ ಹಣ ಮಾಡುವ ದಂಧೆಯಲ್ಲಿ ತೊಡಗಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಪೊಲೀಸ್ ಇನ್‌ಸ್ಪೆಕ್ಟರ್ ನಂದೀಶ್ ಸಾವಿನ ಪ್ರಕರಣ ಕುರಿತು ಸುದ್ದಿಗಾರರಿಗೆ ಭಾನುವಾರ ಪ್ರತಿಕ್ರಿಯಿಸಿದ ಅವರು, '₹ 70 ಲಕ್ಷದಿಂದ ₹ 80 ಲಕ್ಷ ಕೊಟ್ಟು ಹುದ್ದೆ ಪಡೆದುಕೊಂಡು ಮೂರು ತಿಂಗಳೊಳಗೆ ಅಮಾನತು ಮಾಡಲಾಗಿದೆ. ಅದೇ ನೋವಿನಲ್ಲಿ ನಂದೀಶ್ ಮೃತಪಟ್ಟಿರಬಹುದು. ಆ ಹಣದಲ್ಲಿ ಸ್ಥಳೀಯ ಶಾಸಕರಿಗೆ ಎಷ್ಟು ತಲುಪಿದೆ? ಉಳಿದವರಿಗೆ ಎಷ್ಟು ಹೋಗಿದೆ? ಎಂಬುದರ ತನಿಖೆ ನಡೆಯಲಿ. ನಂದೀಶ್ ವರ್ಗಾವಣೆಗೆ ಲಂಚ ಕೊಟ್ಟಿರುವ ಕುರಿತು ಸಚಿವ ಎಂ.ಟಿ.ಬಿ. ನಾಗರಾಜ್ ನೀಡಿರುವ ಹೇಳಿಕೆಯ ವಿಡಿಯೊ ಜಗಜ್ಜಾಹೀರಾಗಿದೆ. ಸರ್ಕಾರಕ್ಕೆ ಮರ್ಯಾದೆ ಇದ್ದರೆ ಇನ್ನಾದರೂ ತನಿಖೆ ಮಾಡಿಸಲಿ' ಎಂದರು.

'ಕೋಲಾರ ಕ್ಷೇತ್ರದಲ್ಲಿ ಸ್ಪರ್ಧಿಸಬೇಕೆಂಬ ಆಹ್ವಾನ ಅಲ್ಲಿನ ಮುಖಂಡರಿಂದ ಬಂದಿದೆ. ಆದರೆ, ನಾನು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಲ್ಲೇ ಸ್ಪರ್ಧಿಸುತ್ತೇನೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬದಲಾವಣೆಗೆ ಶ್ರಮಿಸಿ: ಡಿ.ಕೆ. ಶಿವಕುಮಾರ್

ರಾಜರಾಜೇಶ್ವರಿ ನಗರ: ಇಂದಿರಾ ನಮನ, ಮಹಿಳಾ ಸಂಕಲ್ಪ ಸಮಾವೇಶ, ಸಾಧಕ ಮಹಿಳೆಯರ ಸನ್ಮಾನ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: 'ರಾಷ್ಟ್ರ ಹಾಗೂ ರಾಜ್ಯದಲ್ಲಿ ಬದಲಾವಣೆ ತರಲು ಹೆಣ್ಣು ಮಕ್ಕಳು ಹಾಗೂ ಯುವಕರು ಮುಂದಾಗಬೇಕು' ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದರು.

ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಘಟಕವು ಮಾಗಡಿ ರಸ್ತೆಯ ಒಕ್ಕಲಿಗರ ಸಂಘದ ವಿದ್ಯಾಸಂಸ್ಥೆ ಆವರಣದಲ್ಲಿ ಭಾನುವಾರ ಆಯೋಜಿಸಿದ್ದ 'ಇಂದಿರಾ ನಮನ, ಮಹಿಳಾ ಸಂಕಲ್ಪ ಸಮಾವೇಶ ಹಾಗೂ ಸಾಧಕ ಮಹಿಳೆಯರ ಸನ್ಮಾನ' ಸಮಾರಂಭದಲ್ಲಿ ಅವರು ಮಾತನಾಡಿದರು.

'ಸ್ವಾತಂತ್ರ್ಯ, ಶಿಕ್ಷಣ, ನೀರಾವರಿ, ವಸತಿ, ನಿವೇಶನ, ಉಳುವವನಿಗೆ ಭೂಮಿ ಹಾಗೂ ಸಮಾನತೆಯನ್ನು ಸಂವಿಧಾನದ ಮೂಲಕವೇ ನೀಡಿದ ಪಕ್ಷ ಕಾಂಗ್ರೆಸ್. ಆಹಾರ ಭದ್ರತೆ, ಸ್ತ್ರೀಶಕ್ತಿ ಸಂಘ, ಹಸಿರು ಕ್ರಾಂತಿ, ಬ್ಯಾಂಕ್‌ಗಳ ರಾಷ್ಟ್ರೀಕರಣ ಸೇರಿದಂತೆ ಅನೇಕ ಯೋಜನೆಗಳನ್ನು ಸಾಕಾರಗೊಳಿಸುವುದರ ಜತೆಗೆ ಪಾಕಿಸ್ತಾನದ ವಿರುದ್ಧ ಯುದ್ಧ ಮಾಡಿ, ಗೆದ್ದ ಮಹಿಳೆ ಎನ್ನುವ ಕೀರ್ತಿ ಇಂದಿರಾ ಗಾಂಧಿ ಅವರಿಗೆ ಸಲ್ಲುತ್ತದೆ' ಎಂದರು.

ಕಾಂಗ್ರೆಸ್ ನಾಯಕಿ ಎಚ್. ಕುಸುಮಾ ಮಾತನಾಡಿ, 'ಅಡುಗೆ ಮನೆಗೆ ಸೀಮಿತವಾಗಿದ್ದ ಹೆಣ್ಣು ಆಟೊರಿಕ್ಷಾದಿಂದ ಅಂತರಿಕ್ಷದವರೆಗೂ ಸಾಧನೆ ಮಾಡಿದ್ದಾರೆ. ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯರು ಪ್ರಗತಿ ಸಾಧಿಸಲು ಪ್ರೇರಣೆ ನೀಡಿದವರು ಇಂದಿರಾ ಗಾಂಧಿ' ಎಂದು ಸ್ಮರಿಸಿದರು.

'ಹೆಣ್ಣು ಮಕ್ಕಳು ಸಂಸಾರ ಕಟ್ಟುವುದರ ಜೊತೆಗೆ ರಾಷ್ಟ್ರವನ್ನು ಕಟ್ಟುವ ಕೆಲಸ ಮಾಡಬೇಕು. ಪುಟ್ಟ ಮಕ್ಕಳ ಮೇಲೆ ಅತ್ಯಾಚಾರ ಎಸಗಿ ಜೈಲಿಗೆ ಹೋಗಿ ಬಂದವರಿಗೆ ಅದ್ದೂರಿಯಾಗಿ ಸ್ವಾಗತ ನೀಡಲಾಗುತ್ತಿದೆ. ಅಂತಹವರನ್ನು ಧಿಕ್ಕರಿಸುವ ಕೆಲಸಕ್ಕೆ ಹೆಣ್ಣು ಮಕ್ಕಳು ಮುಂದಾಗಬೇಕಾಗಿದೆ' ಎಂದರು.



ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಘಟಕದ ವತಿಯಿಂದ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಮಹಿಳಾ ಸಾಧಕಿಯರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸನ್ಮಾನಿಸಿದರು. ಸಂಸದ ಡಿ.ಕೆ.ಸುರೇಶ್, ಕಾಂಗ್ರೆಸ್ ನಾಯಕಿ ಎಚ್‌ಕುಸುಮಾ, ರಾಜರಾಜೇಶ್ವರಿ ನಗರಸಭೆ ಮಾಜಿ ಅಧ್ಯಕ್ಷ ಹನುಮಂತರಾಯಪ್ಪ, ಬಮೂಲ್ ಮಾಜಿ ಅಧ್ಯಕ್ಷ ಆರ್‌. ಕೆ.ರಮೇಶ್, ಕೆಪಿಸಿಸಿ ಸದಸ್ಯರಾದ ಎಸ್‌.ಬೆಟ್ಟಸ್ವಾಮಿಗೌಡ, ಡಾ.ಜಾನಕಿ, ಜೈಕುಮಾರ್ ಇದ್ದರು

'ವರ್ಗಾವಣೆ ಹೆಸರಿನಲ್ಲಿ ಲೂಟಿ'

'ಬೆಂಗಳೂರಿನ್ಯಾದಂತ ರಸ್ತೆಗಳು ಹದಗೆಟ್ಟಿದ್ದು, ಗುಂಡಿಗಳು ಸೃಷ್ಟಿಯಾಗಿವೆ. ಶೇ 40 ಲಂಚದ ಕಾಮಗಾರಿಗೆ ಈ ಗುಂಡಿಗಳೇ ಸಾಕ್ಷಿ. ಉದ್ಯೋಗಗಳು ಬಿಜೆಪಿ ಕಚೇರಿಯಲ್ಲಿ ಮಾರಾಟಕ್ಕಿವೆ. ವರ್ಗಾವಣೆ ಹೆಸರಲ್ಲಿ ಲೂಟಿ ಮಾಡುತ್ತಿರುವ ಸರ್ಕಾರವನ್ನು ಮೊದಲು ಕಿತ್ತೊಗೆಯಬೇಕು' ಎಂದು ಸಂಸದ ಡಿ.ಕೆ.ಸುರೇಶ್ ಹೇಳಿದರು.

'ಕಾಮಗಾರಿಗಳ ನೆಪದಲ್ಲಿ ಕೋಟ್ಯಂತರ ರೂಪಾಯಿ ಲೂಟಿ ನಡೆಯುತ್ತಿದೆ. ದೌರ್ಜನ್ಯ, ದಬ್ಬಾಳಿಕೆ ಮಾಡಿ ಹೆದರಿಸಿ ಸುಳ್ಳು ಪ್ರಕರಣ ದಾಖಲಿಸಿ ಮಂತ್ರಿಯಾಗಿ ಮೆರೆಯುತ್ತಿರುವವರನ್ನು ಶಿಕ್ಷಿಸಿ, ಮನೆಗೆ ಕಳುಹಿಸಬೇಕು' ಎಂದು ಹೇಳಿದರು.

ಬಿಲ್ ಪಾವತಿಗೆ ಶೇ 40ರಷ್ಟು ಕಮಿಷನ್ ಬೇಡಿಕೆ– ಆರೋಪ

ದಯಾಮರಣಕ್ಕೆ ಗುತ್ತಿಗೆದಾರ ಮನವಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಕಮಿಷನ್‌ಗೆ ಬೇಡಿಕೆ ಇಟ್ಟಿರುವ ಚಿಕ್ಕಮಗಳೂರು ಜಿಲ್ಲೆಯ ಅಧಿಕಾರಿಗಳು ಎರಡು ವರ್ಷಗಳಿಂದ ಬಿಲ್ ಪಾವತಿಸದೆ ವಿಳಂಬ ಮಾಡುತ್ತಿದ್ದಾರೆ. ಇದರಿಂದ ಸಂಕಷ್ಟಕ್ಕೀಡಾಗಿದ್ದು ಹಣ ಪಾವತಿಗೆ ಸೂಚನೆ ನೀಡಬೇಕು, ಇಲ್ಲವಾದರೆ ದಯಾಮರಣಕ್ಕೆ ಅವಕಾಶ ನೀಡಬೇಕು' ಎಂದು ಇಲ್ಲಿನ ಶಾಂತಿನಗರದ ನಿವಾಸಿ, ಗುತ್ತಿಗೆದಾರ ಬಸವರಾಜ್ ಅಮರಗೋಳ ಅವರು ರಾಷ್ಟ್ರಪತಿ, ಪ್ರಧಾನಮಂತ್ರಿ, ರಾಜ್ಯಪಾಲ ಹಾಗೂ ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ.


ಬಸವರಾಜ್ ಅಮರಗೋಳ

'2020–21ನೇ ಸಾಲಿನಲ್ಲಿ ಸರ್ಕಾರದ ಆದೇಶದ ಪ್ರಕಾರ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿಗೆ ₹85 ಲಕ್ಷ ಹಾಗೂ ಮೂಡಿಗೆರೆ ತಾಲ್ಲೂಕಿಗೆ ₹27 ಲಕ್ಷದ ಮೌಲ್ಯದ ಕೋವಿಡ್ ಪರಿಕರಗಳನ್ನು ಪೂರೈಕೆ ಮಾಡಿದ್ದೆ. ಶೇ 20ರಷ್ಟು ಹಣ ಮಾತ್ರ ಪಾವತಿ ಮಾಡಿದ್ದಾರೆ. ಉಳಿದ ಹಣ ಪಾವತಿಸುವಂತೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ವಿನಂತಿಸಿದರೆ, ಕಮಿಷನ್‌ಗೆ ಪೀಡಿಸುತ್ತಿದ್ದಾರೆ. ಅಧಿಕಾರಿಗಳು ಹಾಗೂ ಶಾಸಕರ ಹೆಸರಲ್ಲಿ ಶೇ 40ರಷ್ಟು ಕಮಿಷನ್ ಕೇಳುತ್ತಿದ್ದಾರೆ' ಎಂದು ಬಸವರಾಜ್ ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

'ಹಣ ಪಾವತಿಸುವಂತೆ ಪ್ರಧಾನ ಮಂತ್ರಿ, ಮುಖ್ಯಮಂತ್ರಿ ಕಾರ್ಯಾಲಯ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಅವರಿಂದಲೂ ಅಧಿಕಾರಿಗಳಿಗೆ ನಿರ್ದೇಶನ ಬಂದಿದೆ. ಆದರೂ, ಹಣ ಪಾವತಿಸದೆ ಕಿರುಕುಳ ನೀಡುತ್ತಿದ್ದಾರೆ. ಸಾಲಗಾರರ ಕಾಟದಿಂದ ಬೇಸತ್ತು ಹೋಗಿದ್ದು, ಮಾನಸಿಕವಾಗಿ ಜರ್ಜರಿತನಾಗಿದ್ದೇನೆ. ಬೇರೆ ಮಾರ್ಗವಿಲ್ಲದೆ ದಯಾಮರಣಕ್ಕೆ ಅರ್ಜಿ ಸಲ್ಲಿಸಿದ್ದೇನೆ' ಎಂದು ಅವರು ಹೇಳಿದರು.


ಒಬಿಸಿ ವಿರಾಟ್ ಸಮಾವೇಶ

ಕಲಬುರಗಿ ಹೊರವಲಯದ ಕೆಸರಟಗಿ ಬಳಿಯ ಮೈದಾನದಲ್ಲಿ ಭಾನುವಾರ ನಡೆದ ಬಿಜೆಪಿ ಒಬಿಸಿ ವಿರಾಟ್ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಜನಸ್ತೋಮ

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಬ್ಯಾಗ್ ಕಳವು: ಆರೋಪಿ ಬಂಧನ

ಬೆಂಗಳೂರು: ಮೆಜೆಸ್ಟಿಕ್‌ನಲ್ಲಿ ಕೆಎಸ್ ಆರ್‌ಟಿಸಿ ಬಸ್ ಪ್ರಯಾಣಿಕರ ಬ್ಯಾಗ್ ಕಳ್ಳತನ ಮಾಡುತ್ತಿದ್ದ ಆರೋಪಿ ಸಿದ್ದಿಕ್ ಅಲಿಯಾಸ್ ಕುಣಿಗಲ್ (36) ಎಂಬುವರನ್ನು ಉಪ್ಪಾರಪೇಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಗಂಗೊಂಡನಹಳ್ಳಿಯ ಸಿದ್ದಿಕ್, ಅಪರಾಧ ಹಿನ್ನೆಲೆಯುಳ್ಳವ. ಈತನನ್ನು ಬಂಧಿಸಿ, ₹ 3.50 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ₹ 5 ಸಾವಿರ ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು. 'ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಹಾಗೂ ಇತರೆ ತಂಗುದಾಣ ಬಳಿ ಸುತ್ತಾಡುತ್ತಿದ್ದ ಆರೋಪಿ, ಬ್ಯಾಗ್ ಹಿಡಿದುಕೊಂಡು ಓಡಾಡುವ ಪ್ರಯಾಣಿಕರನ್ನು ಗುರುತಿಸುತ್ತಿದ್ದ. ಅವರನ್ನು ಹಿಂಬಾಲಿಸಿ ಬ್ಯಾಗ್ ಕದ್ದೊಯ್ಯುತ್ತಿದ್ದ. ದೇವಸ್ಥಾನಗಳಲ್ಲೂ ಹುಂಡಿ ಕಳ್ಳತನ ಮಾಡಿದ ಪ್ರಕರಣದಲ್ಲೂ ಈತ ಭಾಗಿಯಾಗಿದ್ದ' ಎಂದು ತಿಳಿಸಿದರು.

ನಾಗರಾಜ, ಚಿತ್ತಯ್ಯಗೆ ವಿದ್ಯಾಶಂಕರ ಪ್ರಶಸ್ತಿ

ಬೆಂಗಳೂರು: ಡಾ.ಎಸ್.ವಿದ್ಯಾಶಂಕರ ಸಾಂಸ್ಕೃತಿಕ ಪ್ರತಿಷ್ಠಾನ ನೀಡುವ ವಿದ್ಯಾಶಂಕರ ಪ್ರಶಸ್ತಿಯು ಸಂಶೋಧಕ ಡಾ.ಎಂ.ಜಿ.ನಾಗರಾಜ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಸಹ ಪ್ರಾಧ್ಯಾಪಕ ಡಾ.ಡಿ.ಕೆ.ಚಿತ್ತಯ್ಯ ಪೂಜಾರ್ ಅವರಿಗೆ ಲಭಿಸಿದೆ.

ನಾಗರಾಜ ಅವರಿಗೆ ₹ 25 ಸಾವಿರ ನಗದು ಮತ್ತು ಪ್ರಶಸ್ತಿ, ಚಿತ್ತಯ್ಯ ಅವರಿಗೆ ₹ 10 ಸಾವಿರ ನಗದು ಹಾಗೂ ಪ್ರಶಸ್ತಿ ನೀಡಲಾಗುವುದು. ಇದು 2022ನೇ ಪ್ರಶಸ್ತಿಯಾಗಿದ್ದು, ನ.22ರ ಸಂಜೆ 6ಕ್ಕೆ ಬೆಂಗಳೂರಿನ ಜೆ.ಸಿ.ರಸ್ತೆಯ ನಯನ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಾಗುವುದು ಎಂದು ಪ್ರತಿಷ್ಠಾನದ ಪ್ರಕಟಣೆ ತಿಳಿಸಿದೆ.


ನಾಗರಾಜ


ಚಿತ್ತಯ್ಯ

ಏಕೀಕರಣಕ್ಕೆ ಸರ್ದಾರ್ ವಲ್ಲಭಭಾಯಿ ಪಟೇಲ್ ಕೊಡುಗೆ ಅಪಾರ: ವೇಮಗಲ್ ಸೋಮಶೇಖರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತದ ಏಕೀ ಕರಣಕ್ಕೆ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಕೊಡುಗೆ ಅಪಾರ. ಸ್ವಾತಂತ್ರ್ಯಕ್ಕಾಗಿಹೋರಾಡಿದ ಇಂತಹ ಮಹನೀಯರ ದಿನಾಚರಣೆಗಳು ನಡೆಯಬೇಕು' ಎಂದು ಗಾಂಧಿವಾದಿ ವೇಮಗಲ್ ಸೋಮಶೇಖರ್ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸ ಮತ್ತು ವಸ್ತು ಸಂಗ್ರಹಾಲಯ ಹಾಗೂ ವಿದ್ಯುನ್ಮಾನ ಮಾಧ್ಯಮ ವಿಭಾಗದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಸರ್ದಾರ್ ವಲ್ಲಭಭಾಯಿ ಪಟೇಲ್ ಜೀವನ ಹಾಗೂ ಅವರ ಕೊಡುಗೆಗಳನ್ನು ಸ್ಮರಿಸುವ 'ಸರ್ದಾರ್ ಪಟೇಲ್-ಏಕೀಕರಣದ ಶಿಲ್ಪಿ' ಕಾರ್ಯಕ್ರಮದಲ್ಲಿ ಮಾತನಾಡಿದರು.

'ದೇಶದ ರಾಜಕಾರಣದ ಇತಿಹಾಸದಲ್ಲಿ ಮಹಾತ್ಮ ಗಾಂಧಿ, ಸರ್ದಾರ್ ವಲ್ಲಭಭಾಯಿ ಪಟೇಲ್ ಅವರಿಗೆ ವಿಶೇಷ ಸ್ಥಾನಮಾನವಿದೆ' ಎಂದು ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ.ಜಯಕರ್.ಎಸ್.ಎಂ ಮಾತನಾಡಿ, 'ಪಟೇಲರ ವ್ಯಕ್ತಿತ್ವ ಇಂದಿನ ಯುವಕರಿಗೆ ಆದರ್ಶ' ಎಂದು ಹೇಳಿದರು.

ಇದೇ ವೇಳೆ ಸರ್ದಾರ್ ವಲ್ಲಭಭಾಯಿ ಪಟೇಲರ ಕುರಿತು ಛಾಯಾಚಿತ್ರ ಹಾಗೂ ಕಿರುಚಿತ್ರ ಪ್ರದರ್ಶನ ಮಾಡಲಾಯಿತು.

ಕುಲಸಚಿವ ಎನ್.ಮಹೇಶ್‌ಬಾಬು, ಇತಿಹಾಸ ವಿಭಾಗದ ಮುಖ್ಯಸ್ಥೆ ಡಾ. ವಿಜಯಲಕ್ಷ್ಮಿ, ಸಂಯೋಜಕರಾದ ಡಾ.ನಾಗರತ್ನಮ್ಮ, ಡಾ.ಶ್ರೀಪತಿ, ಉಪನ್ಯಾಸಕರಾದ ಡಾ.ಉಷಾದೇವಿ, ಡಾ.ಶೇಕ್ ಮಸ್ತಾನ್, ಡಾ.ಶಶಿಧರ್, ಡಾ.ರಾಜೇಶ್ವರಿ, ಡಾ.ವಾಹಿನಿ ಇದ್ದರು.


ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಶನಿವಾರ ಆಯೋಜಿಸಿದ್ದ ಸರ್ದಾರ್ ವಲ್ಲಭಭಾಯಿ ಪಟೇಲರ ಕುರಿತು ಛಾಯಾಚಿತ್ರ ಪ್ರದರ್ಶನವನ್ನು ವೇಮಗಲ್ ಸೋಮಶೇಖರ್, ಕುಲಪತಿ ಡಾ.ಎಸ್.ಎಂ. ಜಯಕರ್ ವೀಕ್ಷಿಸಿದರು

ಆಭರಣ ಕಳವು: ಯುವಕರ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಗೋವಿಂದರಾಜನಗರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಕೆ.ಆರ್.ಪುರದ ಇಮ್ರಾನ್ ಖಾನ್ ಅಲಿಯಾಸ್ ಕೀಡ್ (26) ಹಾಗೂ ಗುರಪ್ಪನಪಾಳ್ಯದ ಮದರಸಾಬ್ ಬಡಾವಣೆಯ ಸಲ್ಮಾನ್ ಖಾನ್ (28) ಬಂಧಿತರು. ಇವರಿಂದ ₹ 5 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ವಿಜಯನಗರ ಬಿನ್ನಿ ಲೇಔಟ್‌ನ 2ನೇ ಹಂತದ ನಿವಾಸಿಯೊಬ್ಬರು ಕುಟುಂಬ ಸಮೇತ ಸೆ. 18ರಂದು ಬೆಳಿಗ್ಗೆ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಹೋಗಿದ್ದರು. ಮನೆಗೆ ಬೀಗ ಹಾಕಿರುವುದನ್ನು ನೋಡಿದ್ದ ಆರೋಪಿಗಳು, ಕಳ್ಳತನಕ್ಕೆ ಸಂಚು ರೂಪಿಸಿದ್ದರು.'

'ಮನೆಯೊಳಗೆ ನುಗ್ಗಿದ್ದ ಆರೋಪಿಗಳು, ದೇವರ ಕೊಠಡಿಯಲ್ಲಿದ್ದ ನಗದು ಹಾಗೂ ಚಿನ್ನಾಭರಣ ಕದ್ದೊಯ್ದಿದ್ದರು. ಮನೆ ಮಾಲೀಕರು ರಾತ್ರಿ ವಾಪಸು ಬಂದಾಗ, ಕಳ್ಳತನ ಗಮನಕ್ಕೆ ಬಂದಿತ್ತು. ಠಾಣೆಗೆ ದೂರು ನೀಡಿದ್ದರು' ಎಂದು ಪೊಲೀಸರು ತಿಳಿಸಿದರು.

'ಅಪರಾಧ ಹಿನ್ನೆಲೆಯುಳ್ಳ ಆರೋಪಿಗಳು, ಬೀಗ ಹಾಕಿದ್ದ ಮನೆಗಳನ್ನು ಗುರುತಿಸಿ ಕಳ್ಳತನ ಮಾಡುತ್ತಿದ್ದರು. ಗೋವಿಂದರಾಜನಗರ ಹಾಗೂ ಚಾಮರಾಜಪೇಟೆ ಠಾಣೆ ವ್ಯಾಪ್ತಿಯಲ್ಲಿ ಕೃತ್ಯ ಎಸಗಿದ್ದರು. ಕೆಲ ಸುಳಿವು ಸಂಗ್ರಹಿಸಿ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಹೇಳಿದರು.

ಚಿತ್ರಾವಳಿ


ನಗರದಲ್ಲಿ ನಡೆದ 'ಎಚ್‌ಎಸ್‌ಆರ್ ಸೈಕಲ್ ಡೇ'ಯಲ್ಲಿ ಪೀಣ್ಯ, ವೈಟ್‌ಫೀಲ್ಡ್, ಬಸವನಗುಡಿ, ವಿಜಯನಗರ, ಎಲೆಕ್ಟ್ರಾನಿಕ್ ಸಿಟಿಯ ಸೈಕ್ಲಿಸ್ಟ್‌ಗಳು ಪಾಲ್ಗೊಂಡು ಸಂಭ್ರಮಿಸಿದರು.


ರಾಷ್ಟ್ರೀಯ ಏಕತಾ ದಿನದ ಅಂಗವಾಗಿ ರಾಜ್ಯ ಪೊಲೀಸ್ ಇಲಾಖೆಯಿಂದ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಏಕತಾ ಓಟ'ದಲ್ಲಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ದಾಯಾದಿ ಶ್ರೀಯಿಂದ ಹನಿಟ್ರ್ಯಾಪ್; ಆರೋಪಿಗಳು 14ದಿನ ನ್ಯಾಯಾಂಗ ವಶಕ್ಕೆ

ಬಂಡೆಮಠದ ಶ್ರೀ ಆತ್ಮಹತ್ಯೆ: ಮೂವರ ಸೆರೆ

ಪ್ರಜಾವಾಣಿ ವಾರ್ತೆ

ರಾಮನಗರ: ಮಾಗಡಿ ತಾಲ್ಲೂಕಿನ ಕಂಚುಗಲ್ ಬಂಡೆಮಠದ ಬಸವಲಿಂಗ ಸ್ವಾಮೀಜಿ ಆತ್ಮಹತ್ಯೆ ಪ್ರಕರಣದಲ್ಲಿ ಪೊಲೀಸರು ಭಾನುವಾರ ಕಣ್ಣೂರು ಮಕ್ಕಳ ದೇವರಮಠದ ಮೃತ್ಯುಂಜಯ ಸ್ವಾಮೀಜಿ (45) ಸೇರಿದಂತೆ ಮೂವರನ್ನು ಬಂಧಿಸಿದ್ದಾರೆ.

ದೊಡ್ಡಬಳ್ಳಾಪುರದ ಎಂಜಿನಿಯರಿಂಗ್ ವಿದ್ಯಾರ್ಥಿನಿ ನೀಲಾಂಬಿಕೆ ಅಲಿಯಾಸ್ ಚಂದು (21), ತುಮಕೂರಿನ ವಕೀಲ ಮಹದೇವಯ್ಯ (65) ಅವರನ್ನೂ ಬಂಧಿಸಲಾಗಿದೆ. ಈ ಮೂವರೂ ಆರೋಪಿಗಳನ್ನು ಮಾಗಡಿಯ ಜೆಎಂಎಫ್‌ಸಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.


ಮೃತ್ಯುಂಜಯ ಸ್ವಾಮೀಜಿ


ನೀಲಾಂಬಿಕೆ


ಮಹದೇವಯ್ಯ

ಆರೋಪಿ ಮೃತ್ಯುಂಜಯ ಸ್ವಾಮೀಜಿ ಹಾಗೂ ಸಾವಿಗೀಡಾದ ಬಸವಲಿಂಗ ಸ್ವಾಮೀಜಿ ಒಂದೇ ಗ್ರಾಮ ದವರಾಗಿದ್ದು, ದಾಯಾದಿಗಳು.ಬಸವಲಿಂಗ ಸ್ವಾಮೀಜಿ ಅ. 24ರಂದು ತಮ್ಮ ಕೊಠಡಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿ ಕೊಂಡಿದ್ದರು.

ಸ್ಥಳದಲ್ಲಿ ದೊರೆತ ಡೆತ್ ನೋಟ್ ಸ್ವಾಮೀಜಿ ಹನಿ ಟ್ರ್ಯಾಪ್‌ಗೆ ಒಳಗಾದ ಸುಳಿವು ನೀಡಿತ್ತು. ಅದನ್ನು ಆಧರಿಸಿ ತನಿಖೆ ಕೈಗೊಂಡ ಪೊಲೀಸರು ಆರೋಪಿಗಳನ್ನು ಪತ್ತೆ ಹಚ್ಚಿದ್ದಾರೆ.

ವರ್ಷದ ಹಿಂದೆ ಯುವತಿ ಪರಿಚಯ: ಬಸವಲಿಂಗ ಸ್ವಾಮೀಜಿ ಹಾಗೂ ಆರೋಪಿ ಯುವತಿಗೆ ವರ್ಷದ ಹಿಂದೆ ಪರಿಚಯ ಆಗಿತ್ತು.

ಅಂದಿನಿಂದ ಸಂಪರ್ಕದಲ್ಲಿದ್ದ ಇಬ್ಬರೂ ಖಾಸಗಿ ಕ್ಷಣಗಳನ್ನೂ ವಿಡಿಯೊ ಚಾಟ್‌ನಲ್ಲಿ ಹಂಚಿಕೊಂಡಿದ್ದರು.

ಈ ವಿಡಿಯೊಗಳನ್ನು ಯುವತಿ ಏಪ್ರಿಲ್‌ನಲ್ಲಿ ಮೃತ್ಯುಂಜಯ ಸ್ವಾಮೀಜಿಗೆ ತಲುಪಿಸಿದ್ದಳು. ಸ್ವಾಮೀಜಿ ಅದನ್ನು ವಕೀಲ ಮಹದೇವಯ್ಯರಿಗೆ ನೀಡಿ ಎಡಿಟ್ ಮಾಡಿಸಿ ಸಿ.ಡಿ. ಮಾಡಿಸಿದ್ದರು. ಅವನ್ನು ಬಳಸಿ ಬಸವಲಿಂಗ ಸ್ವಾಮೀಜಿ ಯನ್ನು ಬ್ಲ್ಯಾಕ್‌ಮೇಲ್ ಮಾಡಲಾಗು ತಿತ್ತು. ಇದೆಲ್ಲವನ್ನೂ ಸ್ವಾಮೀಜಿ ಡೆತ್ ನೋಟ್‌ನಲ್ಲಿ ನಮೂದಿಸಿದ್ದಾರೆ.

ಆರೋಪಿಗಳು ಸಂಪರ್ಕಕ್ಕೆ ಬಂದದ್ದು ಹೇಗೆ?: ಪ್ರಕರಣದ ಎರಡನೇ ಆರೋಪಿ ನೀಲಾಂಬಿಕೆ ತುಮಕೂರಿನ ಅಜ್ಜಿ ಮನೆಗೆ ಹೋಗುತ್ತಿದ್ದರು. ಈ ವೇಳೆ ಸಿದ್ದಗಂಗ ಮಠಕ್ಕೂ ಹೋಗಿ ಬರುತ್ತಿದ್ದರು.

ಅಲ್ಲಿ ಬಸವಲಿಂಗ ಮತ್ತು ಮೃತ್ಯುಂಜಯ ಸ್ವಾಮೀಜಿಯ ಸಂಪರ್ಕ ಬೆಳೆದಿತ್ತು. ಮಹದೇವಯ್ಯ ಸಹ ಈ ಹಿಂದೆ ಸಿದ್ದಗಂಗ ಮಠದಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದ್ದು, ಅವರಿಗೆ ಈ ವಿಡಿಯೊ ಕೊಟ್ಟು ಸಿ.ಡಿ. ಮಾಡಿಸಿ ಮುಖಂಡರಿಗೆ ತಲುಪಿಸಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

₹ 1.42 ಕೋಟಿ ಮೌಲ್ಯದ ಡ್ರಗ್ ಜಪ್ತಿ: ಆಫ್ರಿಕಾ ಪ್ರಜೆ ಸೇರಿ 12 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧ ಕಾರ್ಯಾಚರಣೆ ಮುಂದುವರಿಸಿರುವ ನಗರದ ಪೊಲೀಸರು, ವಿಶೇಷ ಕಾರ್ಯಾಚರಣೆ ನಡೆಸಿ ₹ 1.42 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

'ಕಬ್ಬನ್‌ಪಾರ್ಕ್ ಉಪವಿಭಾಗ ಹಾಗೂ ಶಂಕರಪುರ ಠಾಣೆ ಪೊಲೀಸರು ಪ್ರತ್ಯೇಕ ಕಾರ್ಯಾಚರಣೆ ನಡೆಸಿ ಡ್ರಗ್ಸ್ ಜಾಲ ಭೇದಿಸಿದ್ದಾರೆ. ಆಫ್ರಿಕಾ ಪ್ರಜೆಗಳು ಸೇರಿದಂತೆ 12 ಆರೋಪಿಗಳನ್ನು ಬಂಧಿಸಿದ್ದಾರೆ. ಇವರಿಂದ ಎಂಡಿಎಂಎ ಹಾಗೂ ಗಾಂಜಾ ಜಪ್ತಿ ಮಾಡಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಕೇರಳ, ಮುಂಬೈನಲ್ಲಿ ಕಾರ್ಯಾಚರಣೆ: 'ಬಂಧಿತ ಆಫ್ರಿಕಾ ಪ್ರಜೆಗಳು, ಇತರೆ ಆರೋಪಿಗಳ ಮೂಲಕ ಡ್ರಗ್ಸ್ ಮಾರಾಟ ಮಾಡಿಸುತ್ತಿದ್ದರು. ಜಾಲದ ಬಗ್ಗೆ ಮಾಹಿತಿ ಸಿಗುತ್ತಿದ್ದಂತೆ, ಬೆಂಗಳೂರು, ಕೇರಳ ಹಾಗೂ ಮುಂಬೈನಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಅಧಿಕಾರಿ ತಿಳಿಸಿದರು.

'ಜಾನ್ ಪೌಲ್, ಜೋಸೆಫ್ ಬೆಂಜಮಿನ್, ಇಸ್ಮಾಯಿಲ್, ಮೊಹಮ್ಮದ್ ಇಲಿಯಾಸ್, ಮೊಹ ಮ್ಮದ್ ಹರೂನ್, ಅಬು ಹಾಗೂ ಇತರೆ ಆರೋಪಿಗಳು ತಮ್ಮದೇ ವ್ಯವಸ್ಥಿತ ತಂಡದ ಮೂಲಕ ಡ್ರಗ್ಸ್ ಮಾರುತ್ತಿದ್ದರು. ಎಲ್ಲರನ್ನೂ ಇದೀಗ ಬಂಧಿಸಲಾಗಿದೆ. ಕೆಲವರನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಹೇಳಿದರು.

₹ 33 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ: 'ಶಂಕರಪುರ ಠಾಣೆ ವ್ಯಾಪ್ತಿಯಲ್ಲಿ ಇಬ್ಬರು ಆಫ್ರಿಕಾ ಪ್ರಜೆಗಳನ್ನು ಪೊಲೀಸರು ಬಂಧಿಸಿದ್ದು, ಅವರಿಂದ ₹ 33 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ' ಎಂದು ತಿಳಿಸಿದರು.



ಮನೆಯಲ್ಲಿ ಕನ್ನಡದ ಪರಿಸರವಿದ್ದರೂ, ತಂತ್ರಜ್ಞಾನ ಜಗತ್ತಿನ ಪರಿಣಾಮವಾಗಿ ಉಂಟಾಗುವ ಕಲಿಕಾ ದೋಷಗಳನ್ನು ನಿವಾರಿಸಲು, ಕನ್ನಡವನ್ನು ವ್ಯವಸ್ಥಿತ ವಿಧಾನದಲ್ಲಿ ಕಲಿಸಬೇಕು. ಆ ಕಲಿಕಾ ವಿಧಾನಗಳು ಇಲ್ಲಿವೆ.

ಭಾಷೆ ಕಲಿಕೆಯ ಐದು ಹಂತಗಳು

ಅರವಿಂದ ಚೊಕ್ಕಾಡಿ

ಯಾವುದೆ ಭಾಷೆಯನ್ನು ಸಮರ್ಪಕವಾಗಿ ಕಲಿಯುವುದು ಹೇಗೆ?- ಹೀಗೊಂದು ಪ್ರಶ್ನೆ ಕೇಳಿಕೊಂಡರೆ ಐದು ಹಂತಗಳಲ್ಲಿ ಭಾಷೆಯನ್ನು ಕಲಿಯಬೇಕು ಎನ್ನುವುದೇ ಉತ್ತರ. ಅವುಗಳೆಂದರೆ, ಆಲಿಸುವಿಕೆ, ಪುನರುಕ್ತಿ, ಅರ್ಥ ಗ್ರಹಣ, ಅಕ್ಷರ ಗುರುತಿಸುವಿಕೆ, ಬರವಣಿಗೆ.

ಆದರೆ ಈ ಐದೂ ಹಂತಗಳಲ್ಲಿ ಯಾವುದಾದರೂ ಭಾಷೆಯ ಕಲಿಕೆ ನಡೆಯುತ್ತಿದೆಯೆ? ಎಂದರೆ ಬಹುಮಟ್ಟಿಗೆ 'ಇಲ್ಲ'. ಮಾತೃಭಾಷೆಯ ನಾಲ್ಕು ಹಂತಗಳು ಪರಿಸರದಿಂದಲೇ ಆಗಿರುತ್ತವೆ. ಅಂದರೆ ಕನ್ನಡದ ಪದಗಳನ್ನು ಮಗು ಮನೆಯಲ್ಲಿ ಕೇಳುತ್ತದೆ. ಕೇಳಿದ್ದನ್ನು ಉಚ್ಚರಿಸುತ್ತದೆ. ಉಚ್ಚರಿಸಿದ್ದರಲ್ಲಿ ಕೆಲವು ಪದಗಳಾದರೂ ಅರ್ಥವಾಗುತ್ತವೆ. ಹಲವು ಫಲಕಗಳಲ್ಲಿ, ಪುಸ್ತಕಗಳಲ್ಲಿ ಕನ್ನಡ ಅಕ್ಷರಗಳನ್ನು ನೋಡಿರುತ್ತದೆ. ಆಗ ಶಾಲೆಯಲ್ಲಿ ನೇರವಾಗಿ ಬರವಣಿಗೆಯಿಂದಲೇ ಕನ್ನಡ ಕಲಿಕೆ ನಡೆಸಬಹುದು. ಆದರೆ ಇಂಗ್ಲಿಷ್, ಹಿಂದಿ ಪದಗಳನ್ನು ಮನೆಯಲ್ಲಿ ಕೇಳಿರುವುದಿಲ್ಲ. ಶಬ್ದಗಳ ಅರ್ಥ ಗೊತ್ತಾಗಿರುವುದಿಲ್ಲ. ಅಕ್ಷರವನ್ನು ಗುರುತಿಸುವ ಸಾಮರ್ಥ್ಯ ಬಂದಿರುವುದಿಲ್ಲ. ಆದರೂ ಕನ್ನಡವನ್ನು ಕಲಿಸಿದ ಹಾಗೆಯೇ ಇಂಗ್ಲಿಷ್, ಹಿಂದಿ ಭಾಷೆಗಳನ್ನು ಕಲಿಸುವ ಪದ್ಧತಿ ಶಾಲೆಗಳಲ್ಲಿದೆ. ಅಂದರೆ ನಾಲ್ಕೂ ಹಂತಗಳ ಕಲಿಕೆ ಶಾಲೆಯಲ್ಲಿ ನಡೆದಿರುವುದಿಲ್ಲ.

ನಿಜವಾಗಿ ಮನೆಯ ಪರಿಸರ ಕನ್ನಡವೇ ಆಗಿದ್ದರೂ, ಮನೆಯಲ್ಲೇ ನಾಲ್ಕು ಹಂತಗಳ ಕಲಿಕೆ ನಡೆದಿದ್ದರೂ, ತಂತ್ರಜ್ಞಾನ ಜಗತ್ತಿನ ಪರಿಣಾಮವಾಗಿ ಉಂಟಾಗುವ ಕಲಿಕಾ ದೋಷಗಳನ್ನು ನಿವಾರಿಸಲು ಕನ್ನಡವನ್ನೂ ವ್ಯವಸ್ಥಿತ ವಿಧಾನದಲ್ಲಿ ಕಲಿಸಬೇಕಾಗಿದೆ. ಮನೆಯ ಪರಿಸರ ಕನ್ನಡದ್ದಲ್ಲದೆ ಇರುವಾಗಲಂತೂ ಇದು ತೀರಾ ಅವಶ್ಯಕವಾಗಿದೆ. ಭಾಷೆಯನ್ನು ವ್ಯವಸ್ಥಿತವಾಗಿ ಕಲಿಸುವ ಐದು ಹಂತಗಳ ವಿವರ ಇಲ್ಲಿದೆ

ಆಲಿಸುವಿಕೆ: ಆಲಿಸುವಿಕೆಯಲ್ಲಿ ಎರಡು ಕಾರ್ಯಗಳಾಗಬೇಕು. ಪದಗಳನ್ನು ಗ್ರಹಿಸಬೇಕು. ಒಂದು ಪದವನ್ನು ಉಚ್ಚರಿಸುವುದು ಹೇಗೆ ಮತ್ತು ಆ ಪದವನ್ನು ಬಳಸುವ ಸಂದರ್ಭ ಯಾವುದು ಎಂಬುದನ್ನು ಗ್ರಹಿಸಬೇಕು. ಎರಡನೆಯದಾಗಿ, ಪದಗಳ ಸಮುಚ್ಚಯದಿಂದ ವಾಕ್ಯಗಳಾಗಿ ರೂಪುಗೊಂಡಾಗ ಹೇಗಿರುತ್ತದೆ ಎಂದು ಗ್ರಹಿಸಬೇಕು.

ಪುನರುಕ್ತಿ: ಪದಗಳ ಪುನರುಕ್ತಿ ಎನ್ನುವುದು ತೀರಾ ಎಳೆಯ ಹಂತದಲ್ಲಿ ಬರುತ್ತದೆ. ಆದರೆ ಸ್ವಲ್ಪ ಬೆಳೆದ ಮಕ್ಕಳಿಗೂ ಉಚ್ಚಾರ ಸಮರ್ಪಕವಾಗಬೇಕಾದರೆ ಕೆಲವೊಮ್ಮೆ ಪದಗಳ ಪುನರುಕ್ತಿಯ ಅಗತ್ಯ ವಿರುತ್ತದೆ. ಆದರೆ ಬೆಳೆದ ಮಕ್ಕಳಿಗೂ ವಾಕ್ಯಗಳನ್ನೂ ಇದೇ ರೀತಿ ಕಲಿಸುವ ಅಗತ್ಯವಿರುತ್ತದೆ. ಸರಾಗವಾಗಿ ಓದುವಂತಾಗಲು ವಾಕ್ಯಗಳ ಪುನರುಕ್ತಿ ಅಗತ್ಯವಿದೆ.

ಅರ್ಥ ಗ್ರಹಣ: ಬಹಳಷ್ಟು ಸಾರಿ ಪುನರುಕ್ತಿಗೊಳಿ ಸಿದ ಪದಗಳು ಅರ್ಥವಾಗುವುದಿಲ್ಲ. ಉದಾಹರಣೆ: ಬಹಳ ಮಂದಿಗೆ, ಓಜೆ, ಅಳ್ಳಕ, ದ್ರವ್ಯಾಲಯ.. ಇಂತಹ ಅನೇಕ ಪದಗಳು ಅರ್ಥವಾಗುವುದಿಲ್ಲ. ಇಂತಹ ಪದಗಳಿಗೆ ಶಬ್ದಕೋಶದ ಮೂಲಕ ಅರ್ಥ ತಿಳಿದುಕೊಂಡರೆ ಸಾಕಾಗುವುದಿಲ್ಲ. ಆ ಪದಗಳನ್ನು ಬರೆಯುವಾಗ ಅಥವಾ ಮಾತನಾಡುವಾಗ ವಾಕ್ಯಗಳಲ್ಲಿ ಬಳಸಬೇಕು. ಆಗ ಅವು ನೆನಪಿನಲ್ಲಿ ಉಳಿಯುತ್ತವೆ. ಅರ್ಥವಾಗದಿರುವ ಪ್ರತಿ ಪದವನ್ನೂ ಬಳಸುವ ಮೂಲಕ ಅರ್ಥ ಮಾಡಿಕೊಳ್ಳಬೇಕು. ಪದಗಳು ಅರ್ಥವಾಗದೆ ವಾಕ್ಯಗಳು ಪೂರ್ಣವಾಗಿ ಅರ್ಥವಾಗುವುದಿಲ್ಲ. ವಾಕ್ಯಗಳನ್ನು ಕೇಳುವಾಗ ಅಥವಾ ಓದಿಕೊಳ್ಳುವಾಗ ಯಾವ ಹಿನ್ನೆಲೆಯಲ್ಲಿ ಅದನ್ನು ಬಳಸಲಾಗಿದೆ ಎಂದು ಅರ್ಥ ಮಾಡಿಕೊಳ್ಳಬೇಕು. ಆಗ ವಾಕ್ಯ ಪೂರ್ಣ ಅರ್ಥ ಆದಂತಾಗುತ್ತದೆ.

ಗುರುತಿಸುವಿಕೆ: ಗುರುತಿಸುವಿಕೆಯು ಪದಗಳಿಗೆ ಸಂಬಂಧಿಸಿದ್ದು. ಇದರಲ್ಲಿ ಅಕ್ಷರಗಳನ್ನು ಗುರುತಿಸುವುದೇ ಪ್ರಧಾನವಾಗಿದೆ. ಬೆಳೆದ ಮಕ್ಕಳಿಗೆ ಅಕ್ಷರದ ಗುರುತಿಸುವಿಕೆ ಸಾಮಾನ್ಯವಾಗಿ ಇರುತ್ತದೆ. ಆದ್ದರಿಂದ ಬೆಳೆದ ಮಕ್ಕಳು ಅದನ್ನು ಪ್ರತ್ಯೇಕವಾಗಿ ಕಲಿಯುವಂತಾದ್ದೇನೂ ಇರುವುದಿಲ್ಲ.

ಆದರೆ ವಾಕ್ಯಗಳನ್ನು ಗುರುತಿಸುವಾಗ, ಅದನ್ನು ಹೇಗೆ ಓದಿಕೊಳ್ಳಬೇಕು ಎಂಬುದು ಮುಖ್ಯ. ವಾಕ್ಯಗಳ ನಡುವೆ ಚಿಹ್ನೆಗಳನ್ನು ಬಳಸಲಾಗಿರುತ್ತದೆ. ಆ ಚಿಹ್ನೆಗಳು ವಾಕ್ಯವನ್ನು ಹೇಗೆ ಮತ್ತು ಯಾವ ಭಾವದಿಂದ ಓದಿಕೊಳ್ಳಬೇಕು ಎಂದು ತಿಳಿಸುತ್ತವೆ. ಆ ವಿಧಾನದಲ್ಲೆ ವಾಕ್ಯವನ್ನು ಓದಿಕೊಂಡಾಗ ಮಾತ್ರ ಸರಿಯಾಗಿ ಅರ್ಥವಾಗುತ್ತದೆ.

ಬರೆವಣಿಗೆ: ಭಾಷೆ ಕಲಿಕೆಯಲ್ಲಿ ಬರೆವಣಿಗೆಯು ಕೊನೆಯ ಹಂತದ್ದು. ಇದುವರೆಗಿನ ಹಂತಗಳಲ್ಲಿ ಅರ್ಥ ಮಾಡಿಕೊಂಡದ್ದನ್ನು ತನ್ನದೇ ಭಾಷಾ ಸಾಮರ್ಥ್ಯದಲ್ಲಿ ನಿರೂಪಿಸುವ ಹಂತವೇ ಬರೆವಣಿಗೆ. ಅರ್ಥ ಮಾಡಿಕೊಂಡದ್ದನ್ನು ನಿರೂಪಿಸಬೇಕಾದರೆ ಭಾಷಾ ಸಾಮರ್ಥ್ಯ ಇರಬೇಕು. ಅಂದರೆ ವಿದ್ಯಾರ್ಥಿಗಳು ಅರ್ಥ ಮಾಡಿಕೊಂಡದ್ದನ್ನು ಸ್ವಂತ ವಾಕ್ಯದಲ್ಲಿ ಬರೆದು ಹೇಳಲು ಗೊತ್ತಿರಬೇಕು.

ಮಾತೃಭಾಷೆ ಯಾವುದೇ ಭಾಷೆಯ ಕಲಿಕೆಗೆ ಆಧಾರವಾಗಿರುತ್ತದೆ. ಮಾತೃಭಾಷೆಯಲ್ಲಿ ಕಲ್ಪನೆಗಳನ್ನು ಹೆಚ್ಚಿಸಿ ಕೊಳ್ಳಬೇಕು. ಆಗ ಚಿಂತನೆಗಳು ಹೆಚ್ಚುತ್ತವೆ. ಸಂಕೀರ್ಣವಾದ ಅನುಭವಗಳನ್ನು ಹೇಳಲು ಸಾಧ್ಯವಾಗುತ್ತದೆ. ಈ ಸಾಮರ್ಥ್ಯ ಹೆಚ್ಚಾದಂತೆಲ್ಲ ಕಲಿಕೆಯ ಸೂಕ್ಷ್ಮತೆ ವಿಸ್ತರಿಸಿ, ಇತರೇ ಕಲಿಕೆಗಳ ದಕ್ಷತೆಯು ಹೆಚ್ಚಾಗುತ್ತದೆ.



ಸೃಜನಶೀಲ ಚಟುವಟಿಕೆಗಳು

ಕನ್ನಡ ಕಲಿಕೆಯನ್ನು ಹೆಚ್ಚು ಪರಿಣಾಮಕಾರಿಯಾಗಿಸಲು ಸೃಜನಶೀಲ ಚಟುವಟಿಕೆಗಳನ್ನು ಮಾಡಬಹುದು ಅವು ಹೀಗಿವೆ:

- ಪಠ್ಯ ವಿಷಯಕ್ಕೆ ಸಂಬಂಧಿಸಿದ ಚಟುವಟಿಕೆಯನ್ನು ನಿರ್ವಹಿಸುವುದು. ಉದಾಹರಣೆಗೆ ಕುಮಾರವ್ಯಾಸನ ಒಂದು ಪದ್ಯ ಇದ್ದರೆ ಕುಮಾರವ್ಯಾಸ ಭಾರತದ ಒಂದು ಭಾಗವನ್ನು ಓದುವ ಅಭ್ಯಾಸ ಇರಿಸಿಕೊಳ್ಳಬಹುದು.
- ಪದ್ಯವನ್ನು ಪ್ರಬಂಧವಾಗಿ, ಪ್ರಬಂಧವನ್ನು ಪದ್ಯವಾಗಿ, ಕವಿತೆಯನ್ನು ಕಥೆಯಾಗಿ, ಪ್ರಬಂಧವನ್ನು ಕತೆಯಾಗಿ ಮಾರ್ಪಡಿಸಿ ಬರೆಯುವ ಚಟುವಟಿಕೆಗಳನ್ನು ಕೈಗೊಳ್ಳಬಹುದು.
- ಪಠ್ಯ ವಿಷಯಕ್ಕೆ ಸಂಬಂಧಿಸಿದಂತೆ ಸ್ಥಳ ಸಂದರ್ಶನ, ಸಂವಾದಗಳನ್ನು ಮಾಡಬಹುದು.
- ಪರಿಕಲ್ಪನೆಗಳನ್ನು ವಿಸ್ತರಿಸಿ ವಿವರಿಸಿ ಬರೆಯಬಹುದು. ಉದಾಹರಣೆಗೆ, 'ಜಗಲಿ ಹಾರದವನು ಗಗನ ಹಾರಿಯಾನೇ' ಎನ್ನುವಂತಹ ಮಾತುಗಳನ್ನು ವಿಸ್ತರಿಸಿ ಬರೆಯುವ ಪ್ರಶ್ನೆಗಳಿರುತ್ತವೆ. ಈ ಪ್ರಶ್ನೆಗಳಲ್ಲದೆಯೂ ಪಾಠದಲ್ಲಿ ಬರುವ ಹಲವು ಇಂತಹ ಪರಿಕಲ್ಪನೆಗಳನ್ನು ಸೃಜನಶೀಲವಾಗಿ ವಿಸ್ತರಿಸಿ ಕಲಿಯಬಹುದು.

ಬರವಣಿಗೆ ಕೌಶಲ

- ಕಡಿಮೆ ಪದಗಳಲ್ಲಿ ಹೆಚ್ಚು ಅರ್ಥವನ್ನು ಒಳಗೊಳ್ಳುವ ಹಾಗೆ ಬರೆಯುವ ಭಾಷಾ ಕೌಶಲವಿರಬೇಕು.
- ವಿಷಯಗಳನ್ನು ಪ್ಯಾರಾಗಳಾಗಿ ವಿಂಗಡಿಸಿ ಬರೆಯಲು ಗೊತ್ತಿರಬೇಕು. ಒಂದು ಪ್ರಬಂಧವನ್ನು ಒಂದು 'ಸ್ಟೇರ್ ಕೇಸ್'(ಮಹಡಿ ಮೆಟ್ಟಿಲು) ಎಂದು ಭಾವಿಸಿಕೊಂಡರೆ ಅದಕ್ಕೆ ಹತ್ತಲು ಇರುವ ಪ್ರತಿ ಮೆಟ್ಟಿಲನ್ನೂ ಒಂದು ಪ್ಯಾರಾ ಎಂದುಕೊಳ್ಳಬಹುದು. ಎಲ್ಲ ಪ್ಯಾರಾಗಳು ಒಟ್ಟಾಗಿ ಒಂದು ಅರ್ಥವನ್ನು ಉಂಟು ಮಾಡುತ್ತವೆ. ಆದ್ದರಿಂದ ಪ್ಯಾರಾಗಳ ನಡುವೆ ಸಂಬಂಧವಿದೆ. ಆದರೆ ಒಂದು ವಿಷಯದಿಂದ ಮತ್ತೊಂದು ವಿಷಯಕ್ಕೆ ಬದಲಾವಣೆ ಮಾಡಿಕೊಳ್ಳುವಾಗ ಪ್ಯಾರಾ ಬದಲಿಸಬೇಕಾಗುತ್ತದೆ. ಒಂದು ವಿಷಯವನ್ನು ಹಲವು ಘಟಕಗಳಾಗಿ ಮಾಡಿಕೊಂಡು ಪ್ರತಿ ಘಟಕಕ್ಕೂ ಒಂದೊಂದು ಪ್ಯಾರಾ ಬರೆಯುತ್ತಾ ಹೋದರೆ ಬರೆದೂ ಬರೆದೂ ಪ್ಯಾರಾ ಮಾಡುವ ಕೌಶಲವು ಸಿದ್ಧಿಸುತ್ತದೆ.
- ಚಿಹ್ನೆಗಳನ್ನು ಸಮರ್ಪಕವಾಗಿ ಬಳಸಲು ತಿಳಿದಿರಬೇಕು.
- ಆಯಾ ಸನ್ನಿವೇಶದ ಅರ್ಥವನ್ನು ಹೆಚ್ಚು ಪರಿಣಾಮಕಾರಿ ಯಾಗಿ ಹೇಳಬಲ್ಲ ಅತೀ ಚಿಕ್ಕ ಕಥೆ/ ಸನ್ನಿವೇಶ/ ಗಾದೆ/ ಘಟನೆಗಳನ್ನು ಬಳಸಲು ತಿಳಿದಿರಬೇಕು.
- ಅಕ್ಷರಗಳು ಸ್ಫುಟವಾಗಿರಬೇಕು.
- ಓದಿದ ನಂತರ ಓದಿದಾಗ ಅರ್ಥವಾದ ವಿಷಯಗಳ ಸಾರಾಂಶವನ್ನು ಟಿಪ್ಪಣಿಯಾಗಿ ಬರೆದಿಡಲು ತಿಳಿದಿರಬೇಕು.



ವೀವರ್ ಆ್ಯಂಟ್

ಕೀಟ–ನೋಟ

ನೂರ್ ಸಮದ್ ಅಬ್ಬಲಗೆರೆ

ಇರುವೆಗಳಲ್ಲಿ ಸಾವಿರಾರು ಪ್ರಬೇಧಗಳಿವೆ. ಒಂದೊಂದು ಪ್ರಬೇಧದಲ್ಲೂ ಅದರದ್ದೇ ಆದ ವಿಭಿನ್ನ ವಿಸ್ಮಯ ಅಡಗಿದೆ. ಇವುಗಳಲ್ಲಿ ಮರದ ಮೇಲೆ ಎಲೆಗಳನ್ನೇ ಬಳಸಿಕೊಂಡು ಗೂಡು ಹೆಣೆಯುವ ನೇಕಾರ ಇರುವೆಗಳು ಒಂದು ವಿಶಿಷ್ಟ ಪ್ರಭೇದವಾಗಿದೆ. ಇವುಗಳನ್ನು ಕೆಂಜಗವೆಂದೂ ಕರೆಯುತ್ತಾರೆ.

ಇರುವೆಗಳು ಸಾಮಾಜಿಕ ಸಮೂಹ ಜೀವಿಗಳು. ಈ ನೇಕಾರ ಇರುವೆಗಳು ಮರದ ಮೇಲೆಯೇ ವಾಸಮಾಡುತ್ತ ತಾವು ಗೂಡು(Nest) ಕಟ್ಟುವ ಕಾಯಕಕ್ಕೇ ಹೆಸರುವಾಸಿಯಾಗಿವೆ. ಹಾಗಾದರೆ, ಈ ಇವುಗಳಿಗೆ ನೇಕಾರರು ಎಂದು ಹೆಸರು ಬರಲು ಕಾರಣವೇನೆಂದು ಅರಿಯೋಣ.

ಈ ಕೆಂಜಗಗಳು ಹೊರಗಿನಿಂದ ಎಲೆಯ ಎರಡೂ ಬದಿಯ ಅಂಚನ್ನು ಹತ್ತಿರಕ್ಕೆ ತಳ್ಳುತ್ತವೆ. ಒಳಗೆ ಪ್ರೌಢ ಕೆಂಜಗವು ತನ್ನ ಮರಿಯನ್ನು ಬಾಯಿಯಲ್ಲಿ ಸೂಜಿಯಂತೆ ಕಚ್ಚಿ ಹಿಡಿದಾಗ ಮರಿಯು ತನ್ನ ಬಾಯಿಯಿಂದ ಎಂಜಿಲನ್ನು ರೇಷ್ಮೆ ದಾರದೆಳೆಯಂತೆ ಹೊರ ಸೂಸುತ್ತದೆ. ಇದರ ಸಹಾಯದಿಂದ ಎಲೆಯ ಎಡ ಮತ್ತು ಬಲಭಾಗದ ಎರಡೂ ಅಂಚಿಗೆ ಅಂಟಿಸುತ್ತಾ ಕೆಂಜಗಗಳು ಗೂಡು ನಿರ್ಮಾಣ ಮಾಡುತ್ತವೆ. ಗೂಡಿನೊಳಗೆ ಮೊಟ್ಟೆಗಳನ್ನಿಟ್ಟು ಸಂತಾನ ಮುಂದುವರೆಸುತ್ತವೆ. ಕಾಲುಗಳಿಲ್ಲದ ಮರಿಯನ್ನು ಸೂಜಿದಾರದಂತೆ ಬಳಸಿ ಎಲೆಗಳನ್ನು ನೇಯ್ಗೆ ಮಾಡುವುದರಿಂದಲೇ ಇವುಗಳಿಗೆ ನೇಕಾರ ಇರುವೆ (Weaver Ant) ಎಂದು ಕರೆಯುತ್ತಾರೆ.

ದೊಡ್ಡ ಎಲೆಗಳಿದ್ದಾಗ ಹಲವಾರು ಕೆಲಸಗಾರ ಇರುವೆಗಳು ಒಂದಕ್ಕೊಂದು ಕೊಂಡಿಯಂತೆ ಸಾಲಾಗಿ ನಿಂತು ಎಲೆಗಳನ್ನು ಒಂದಕ್ಕೊಂದು ಹತ್ತಿರ ತಳ್ಳುತ್ತವೆ. 'ಒಗ್ಗಟ್ಟಿನಲ್ಲಿ ಬಲವಿದೆ' ಎಂಬುದನ್ನು ಸಾಬೀತುಪಡಿಸುತ್ತವೆ. ಈ ನೇಕಾರ ಇರುವೆಗಳು ತಾವು ವಾಸಿಸುವ ಮರದ ಮೇಲೆ ಬರುವ ಇತರೆ ಕೀಟಗಳನ್ನು ತಿಂದು ಬದುಕುತ್ತವೆ. ಹಾಗಾಗಿ ಇವುಗಳನ್ನು ಹಲವಾರು ಕಡೆ ಜೈವಿಕ ನಿಯಂತ್ರಣದಲ್ಲಿ ಬಳಸಿದ ನಿದರ್ಶನಗಳಿವೆ.

ರಸ ಹೀರುವ ಕೀಟಗಳಾದ ಶಲ್ಕಕೀಟ, ಸಸ್ಯಹೇನು, ಜಿಗಿಹುಳುಗಳ ಜೊತೆ ಇರುವೆ/ಕೆಂಜಗಗಳು ಸಹಜೀವನ ನಡೆಸುತ್ತಾ ಅವು ವಿಸರ್ಜಿಸುವ ಸಿಹಿ ಪದಾರ್ಥವನ್ನು ಸವಿಯುತ್ತವೆ. ಇವುಗಳು ಕಚ್ಚುವಾಗ ಫಾರ್ಮಿಕ್ ಆಮ್ಲ(Formic acid) ಚರ್ಮದೊಳಗೆ ಬಿಡುತ್ತವೆ. ಇನ್ನಷ್ಟು ತೀಕ್ಷ್ಣವಾದ ಉರಿಯೂತದ ಯಾತನೆ ಕಾಣಿಸಿಕೊಳ್ಳುತ್ತದೆ.

ಸಾಮಾನ್ಯವಾಗಿ, ಇರುವೆಗಳು ತಮ್ಮ ದೇಹದಿಂದ ಹೊರ ಸೂಸುವ ರಾಸಾಯನಿಕಗಳನ್ನು (Pheromone) ಬಳಸಿಕೊಂಡು ಸಂದರ್ಭಾನುಸಾರ ಹಲವು ಪ್ರಕಿಯೆಗಳನ್ನು ನಡೆಸುತ್ತವೆ. ಆಹಾರ ಹುಡುಕಲು ಸಾಲಾಗಿ ಸಾಗಲು ಟ್ರಯಲ್ ಮಾರ್ಕಿಂಗ್ ಫೆರೊಮೋನ್ (Trail marking Pheromone), ಶತ್ರುಗಳ ಆಕ್ರಮಣಕ್ಕೆ ಎಚ್ಚೆತ್ತುಕೊಳ್ಳುವ ರಾಸಾಯನಿಕವನ್ನು (Alaram Pheromone) ಇನ್ನಿತರೆ ಚಟುವಟಿಕೆಗಳಲ್ಲಿ ಬಹಳ ಸೂಕ್ತವಾಗಿ ಬಳಸಿಕೊಳ್ಳುತ್ತವೆ.

ಈ ಇರುವೆಗಳ ದೇಹ ಹೆಚ್ಚು ಪ್ರೊಟೀನ್‌ನಿಂದ ಕೂಡಿದ್ದು, ಹಲವು ದೇಶಗಳಲ್ಲಿ ಇವುಗಳನ್ನು ಹುರಿದುಕೊಂಡು ತಿನ್ನುತ್ತಾರೆ. ನಮ್ಮ ದೇಶದಲ್ಲಿ ಜಾರ್ಖಂಡ್‌ನ ಕೋಡಾ, ಮಹಾರಾಷ್ಟ್ರದ ಮೈದಾ ಸೇರಿದಂತೆ ಒಡಿಶಾ, ಕಾಸರಗೋಡು, ಭುವನೇಶ್ವರ ಮತ್ತಿರ ಕಡೆಗಳಲ್ಲಿರುವ ಬುಡಕಟ್ಟು ಜನಾಂಗದವರು ಇವುಗಳನ್ನು ಕೆಂಪು ಚಟ್ನಿಯ ರೂಪದಲ್ಲಿ ಸೇವಿಸುತ್ತಾರೆ.

ಇದನ್ನು ಹೊರತುಪಡಿಸಿ ಇನ್ನೊಂದು ಬಗೆಯ ಅರ್ಜೆಂಟೈನ್ ಇರುವೆ(Argentine Ant) ನೆಲದಡಿಯಲ್ಲಿ 5ರಿಂದ 6 ಸಾವಿರ ಕಿ.ಮೀ ಗಾತ್ರದ ಗೂಡು ನಿರ್ಮಿಸುವುದು ಅಚ್ಚರಿ ಮೂಡಿಸುತ್ತದಲ್ಲವೇ?

(ಲೇಖಕರು: ಕೃಷಿ ಅಧಿಕಾರಿ, ಬೆಂಗಳೂರು)

ನವೋದಯ ಪ್ರವೇಶ ಪರೀಕ್ಷೆ | ಸರಣಿ 7

ಅಂಕಗಣಿತ

ತಾಳೆ ನೋಡುವ ಸರಳ ವಿಧಾನ

ಹಿಂದಿನ ಸಂಚಿಕೆಯಲ್ಲಿ ಜವಾಹರ ನವೋದಯ ವಿದ್ಯಾಲಯದ 6ನೇ ತರಗತಿಯ ಪ್ರವೇಶ ಪರೀಕ್ಷೆಯ ಅಂಕಗಣಿತ ವಿಭಾಗದ ಪ್ರಶ್ನೆ ಪತ್ರಿಕೆಯ ಬಗ್ಗೆ ಹಾಗೂ ಆ ಪ್ರಶ್ನೆಗಳಿಗೆ ಸುಲಭವಾಗಿ ಉತ್ತರಿಸುವುದು ಹೇಗೆ ಎಂಬುದರ ಬಗ್ಗೆ ತಿಳಿಸಲಾಗಿತ್ತು. ಈ ಸಂಚಿಕೆಯಲ್ಲಿ ಅಂಕಗಣಿತದ ಉತ್ತರಗಳನ್ನು ತಾಳೆ ನೋಡುವ(ಪರಿಶೀಲಿಸುವ) ಸುಲಭ ವಿಧಾನದ ಬಗ್ಗೆ ತಿಳಿಯೋಣ.

ವೆಂಕಟಸುಬ್ಬರಾವ್ ವಿ.

ನವೋದಯ ಪರೀಕ್ಷೆಯಲ್ಲಿ ಗಣಿತದ ಸಮಸ್ಯೆಗಳನ್ನು ಬಿಡಿಸಿದ ನಂತರ ಬರುವ ಉತ್ತರವನ್ನು ಪರಿಶೀಲಿಸಲು ಅಥವಾ ತಾಳೆನೋಡಲು ಹಲವು ವಿಧಾನಗಳಿವೆ. ಈಗ ನಾವು ತಿಳಿಯುತ್ತಿರುವ ವಿಧಾನವು ಅತ್ಯಂತ ಸರಳ ಹಾಗೂ ವೇಗವಾದ ವಿಧಾನಗಳಲ್ಲೊಂದಾಗಿದೆ. ಈ ವಿಧಾನವು ವೇದಗಣಿತದ ಒಂದು ಭಾಗವಾಗಿದೆ.

ಈ ವಿಧಾನವನ್ನು ಕೇವಲ ನವೋದಯ ಪರೀಕ್ಷೆಗಷ್ಟೇ ಅಲ್ಲದೆ ಎಲ್ಲ ರೀತಿಯ ಅಂಕಗಣಿತವನ್ನೊಳಗೊಂಡ ಪರೀಕ್ಷೆಗಳಲ್ಲೂ ತಾಳೆನೋಡಲು ಬಹಳ ಉಪಯುಕ್ತ. ಇದು ಅಂಕಗಣಿತಕ್ಕಷ್ಟೇ ಸೀಮಿತವಾಗದೆ ಕೆಲವು ಬೀಜಗಣಿತದ ಲೆಕ್ಕಾಚಾರವನ್ನು ತಾಳೆನೋಡಲೂ ಉಪಯೋಗವಾಗುತ್ತದೆ !

ಹಲವಾರು ಬಾರಿ ಈ ವಿಧಾನದ ಸಹಾಯದಿಂದ, ಬಹು ಆಯ್ಕೆ ಮಾರಿಯ ಪ್ರಶ್ನೆಗಳಲ್ಲಿ, ಸಮಸ್ಯೆಗಳನ್ನು ಪೂರ್ಣವಾಗಿ ಬಿಡಿಸದೆಯೇ, ಸರಿ ಉತ್ತರಗಳನ್ನು ಆಯ್ಕೆಮಾಡಬಹುದು !

ಒಂದಂಕಿಯನ್ನಾಗಿ ಪರಿವರ್ತಿಸಿ: ಈ ವಿಧಾನದಲ್ಲಿ, ಕೊಟ್ಟಿರುವ ಸಂಖ್ಯೆಗಳನ್ನು ಒಂದಂಕಿಯನ್ನಾಗಿ ಪರಿವರ್ತಿಸಬೇಕು. ಅದು ಹೇಗೆ ಎಂದು ಈ ಉದಾಹರಣೆ ಮೂಲಕ ತಿಳಿಯೋಣ;

12 ನ್ನು ಒಂದಂಕಿಯನ್ನಾಗಿ ಪರಿವರ್ತಿಸಲು ಹೀಗೆ ಮಾಡಿ; 12ರಲ್ಲಿರುವ 1 ಮತ್ತು 2ರ ಮೊತ್ತವನ್ನು ಕಂಡುಹಿಡಿಯಿರಿ.

12ರ ಒಂದಂಕಿ 1 + 2 = 3

14 ರ ಒಂದಂಕಿ 1 + 4 = 5

543 ರ ಒಂದಂಕಿ 5 + 4 + 3 = 12

ಉತ್ತರವು ಎರಡಂಕಿಯಾದರೆ ಮತ್ತೆ ಒಂದಂಕಿಯನ್ನಾಗಿ ಪರಿವರ್ತಿಸಿ. ಇಲ್ಲಿ ಉತ್ತರ ಎರಡು ಅಂಕಿ, ಅಂದರೆ 12. 1 + 2 = 3 ಆದ್ದರಿಂದ 543ರ ಒಂದಂಕಿಯು 3 ಆಗುತ್ತದೆ.

ಈಗ, ಈ ಒಂದಂಕಿಗಳ ಸಹಾಯದಿಂದ ಸುಲಭವಾಗಿ ತಾಳೆ ನೋಡುವುದು ಹೇಗೆ ಎಂದು ತಿಳಿಯೋಣ.



ಈ ಕೆಳಗಿನ ಸಂಖ್ಯೆಗಳ ಗುಣಲಬ್ಧವನ್ನು ಕಂಡುಹಿಡಿದು, ಉತ್ತರವು ಸರಿಯಾಗಿದೆಯೇ ಇಲ್ಲವೇ ಎಂದು ತಾಳೆ ನೋಡೋಣ.

543 x 217– ಈ ಸಂಖ್ಯೆಗಳ ಗುಣಲಬ್ಧ ಎಷ್ಟು ?

ಉತ್ತರ: 117831 ಅಲ್ಲವೇ?

ಈಗ ಈ ಉತ್ತರ ಸರಿಯೋ? ತಪ್ಪೋ ಎಂದು ಈ ಕೆಳಗಿನ ಸರಳ ಹಂತಗಳೊಂದಿಗೆ ಪತ್ತೆ ಮಾಡೋಣ.

ಹಂತ 1: ಪ್ರಶ್ನೆಯಲ್ಲಿನ ಸಂಖ್ಯೆಗಳನ್ನು ಒಂದಂಕಿಯನ್ನಾಗಿ ಪರಿವರ್ತಿಸಿ

ಇಲ್ಲಿ, 543ರ ಒಂದಂಕಿ = 5 + 4 + 3 = 12, ಉತ್ತರ ಎರಡು ಅಂಕಿ ಇದೆ. ಅದನ್ನು ಒಂದಂಕಿಯಾಗಿಸಿದರೆ 1 + 2 = 3 ಆಗುತ್ತದೆ.

217 ರ ಒಂದಂಕಿ = 2 + 1 + 7 = 10 ಉತ್ತರದ ಎರಡು ಅಂಕಿಗಳನ್ನು ಒಂದಂಕಿಯಾಗಿಸಿದರೆ 1 + 0 = 1 ಆಗುತ್ತದೆ

ಹಂತ 2: ಮುಖ್ಯ ಸಂಖ್ಯೆಗಳಿಂದ ಬಂದ ಒಂದಂಕಿಯ ಉತ್ತರಗಳನ್ನು ಗುಣಿಸಿ.

3 x 1 = 3.

ಹಂತ 3: ಈಗ ಉತ್ತರವನ್ನು ಒಂದಂಕಿಯನ್ನಾಗಿ ಪರಿವರ್ತಿಸಿ.

ಇಲ್ಲಿ ಉತ್ತರವು (ಗುಣಲಬ್ಧ) = 117831, ಇದರ ಒಂದಂಕಿ ಎಂದರೆ 1 + 1 + 7 + 8 + 3 + 1 = 21. ಈ ಉತ್ತರವನ್ನು ಒಂದಕಿಯಾಗಿಸಿ. ಅಂದರೆ 2 + 1 = 3. ಇಲ್ಲಿ ಒಂದಂಕಿ 3 ಆಗಿದೆ.

ಉತ್ತರದ ಒಂದಂಕಿ ಮತ್ತು ಪ್ರಶ್ನೆಯ ಒಂದಂಕಿಯ ಗುಣಲಬ್ಧ ಒಂದೇ ಆಗಿದ್ದರೆ ನಿಮ್ಮ ಉತ್ತರ ಸರಿ. ಇಲ್ಲಿ ಉತ್ತರದ ಒಂದಂಕಿ ಮತ್ತು ಪ್ರಶ್ನೆಯ ಒಂದಂಕಿಯ ಗುಣಲಬ್ಧ 3 ಆಗಿದೆ. ಆದ್ದರಿಂದ ನಿಮ್ಮ ಉತ್ತರ ಸರಿ !

ಈಗ ನಾವು ಒಂದಂಕಿಗಳ ಸಹಾಯದಿಂದ ಬಹು ಆಯ್ಕೆ ಪ್ರಶ್ನೆಗಳಿಗೆ ವೇಗವಾಗಿ ಉತ್ತರವನ್ನು ಹೇಗೆ ಕಂಡುಹಿಡಿಯಬಹುದು ಎಂದು ಈ ಕೆಳಗಿನ ಉದಾಹರಣೆಯಿಂದ ತಿಳಿಯೋಣ.

ಪ್ರಶ್ನೆ : 4531 ಮತ್ತು 632 ರ ಗುಣಲಬ್ಧವು ಎಷ್ಟು? ಆಯ್ಕೆಗಳು ಹೀಗಿವೆ;

A) 2863592 B) 2863092

C) 2863692 D) 2964082

ಇಲ್ಲಿ ಸರಿ ಉತ್ತರವನ್ನು ವೇಗವಾಗಿ ಕಂಡುಹಿಡಿಯಲು ನೀವು ಸಮಸ್ಯೆಯನ್ನು ಬಿಡಿಸಲೇಬೇಕೆಂದೇನಿಲ್ಲ. ನಿಮಗೆ ಒಂದಂಕಿಯ ವಿಧಾನವು ಗೊತ್ತಿರುವುದರಿಂದ ಅದೇ ವಿಧಾನ ಬಳಸಿ ಕಂಡು ಹಿಡಿಯಬಹುದು. ಅದಕ್ಕೆ ಹೀಗೆ ಮಾಡಿ.

- ಮೊದಲು ಪ್ರಶ್ನೆಯ ಸಂಖ್ಯೆಗಳನ್ನು ಒಂದಂಕಿಯನ್ನಾಗಿ ಪರಿವರ್ತಿಸಿ.

4531 ರ ಒಂದಂಕಿಯು (4 + 5 + 3 + 1 = 13. 13ರ ಒಂದಂಕಿ 1 + 3 = 4) 4

632 ರ ಒಂದಂಕಿಯು(6 + 3 + 2 = 11. 11ರ ಒಂದಂಕಿ 1 + 1 = 2) = 2

ನಂತರ ಎರಡು ಸಂಖ್ಯೆಯ ಒಂದಂಕಿಗಳನ್ನು ಗುಣಿಸಿ : 4 x 2 = 8

ಈಗ ನಾಲ್ಕು ಆಯ್ಕೆಯ ಸಂಖ್ಯೆಗಳನ್ನು ಒಂದಂಕಿಯನ್ನಾಗಿ ಪರಿವರ್ತಿಸಿ. ಉತ್ತರ ಹೀಗಿದೆ

A) 2863592 ರ ಒಂದಂಕಿಯು 8

B) 2863092 ರ ಒಂದಂಕಿಯು 3

C) 2863692 ರ ಒಂದಂಕಿಯು 9

D) 2964082 ರ ಒಂದಂಕಿಯು 4

ಗಮನಿಸಿ, ಪ್ರಶ್ನೆಯ ಒಂದಂಕಿಗಳ ಗುಣಲಬ್ಧವೂ 8 ಮತ್ತು ಆಯ್ಕೆ (A) ಯ ಒಂದಂಕಿಯೂ 8 ಆದ್ದರಿಂದ ಸರಿ ಉತ್ತರ (A) . ಎಷ್ಟು ಸರಳವಲ್ಲವೇ?

ಹೆಚ್ಚಿನ ಮಾಹಿತಿಗೆ ಈ ವಿಡಿಯೊನೋಡಿ https://www.youtube.com/watch?v=-XTFJJoFRZg

(ಮುಂದುವರಿಯುವುದು . . .)

(ನಿರ್ದೇಶಕರು, ಸ್ಮಾರ್ಟ್ ಸೆರೆಬ್ರಮ್ ಪ್ರೈ. ಲಿಮಿಟೆಡ್)

'ಪಿಜಿಸಿಇಟಿ'ಗೆ ಸಿದ್ಧತೆ ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

1. ನಾನು ಬಿಬಿಎ ಕೋರ್ಸ್ ಪೂರ್ಣಗೊಳಿಸಿದ್ದೇನೆ. ಎಂಬಿಎ (ಫೈನಾನ್ಸ್) ಮಾಡಬೇಕು ಎಂದು ಕೊಂಡಿದ್ದೇನೆ. 'ಪಿಜಿಸಿಇಟಿ'ಗೆ ಹೇಗೆ ಸಿದ್ಧತೆ ನಡೆಸಬೇಕು? ಮೈಸೂರಿನಲ್ಲಿ ಎಂಬಿಎ ಕಲಿಯಲು ಯಾವ ಕಾಲೇಜು ಉತ್ತಮ ಆಯ್ಕೆ?

ಹೆಸರು, ಊರು ತಿಳಿಸಿಲ್ಲ.

ಪಿಜಿಸಿಇಟಿ(ಪೋಸ್ಟ್ ಗ್ರ್ಯಾಜ್ಯುಯೇಟ್ ಕಾಮನ್ ಎಂಟ್ರೆನ್ಸ್ ಟೆಸ್ಟ್) ಪರೀಕ್ಷೆಯ ಮಾದರಿ, ವಿಷಯಸೂಚಿ ಇತ್ಯಾದಿಗಳನ್ನು ಅರ್ಥಮಾಡಿಕೊಂಡು, ನಿಮ್ಮ ಸಾಮರ್ಥ್ಯ ಮತ್ತು ಕುಂದುಕೊರತೆಗಳನ್ನು ಗಮನ ದಲ್ಲಿಟ್ಟುಕೊಂಡು ಸಿದ್ಧತೆ ನಡೆಸಬೇಕು. ಕ್ಯಾಟ್, ಜಿಮ್ಯಾಟ್ ಮುಂತಾದ ಪರೀಕ್ಷೆಗಳಿಗೆ ಹೋಲಿಸಿದರೆ ಪಿಜಿಸಿಇಟಿ ಸುಲಭವೆನ್ನಬಹುದು. ಹಾಗಾಗಿ, ಈ ಪರೀಕ್ಷೆಯಲ್ಲಿ ಉನ್ನತ ಅಂಕಗಳನ್ನು ಪಡೆದು ಉತ್ತಮ ಕಾಲೇಜಿನಲ್ಲಿ ಎಂಬಿಎ ಮಾಡಬಹುದು. ಈ ಪರೀಕ್ಷೆಯಲ್ಲಿ ಇಂಗ್ಲಿಷ್ ಭಾಷಾ ತಜ್ಞತೆ, ಸಾಮಾನ್ಯ ಜ್ಞಾನ, ಪರಿಮಾಣಾತ್ಮಕ ತಾರ್ಕಿಕತೆ, ಸಾಮಾನ್ಯ ಬುದ್ದಿವಂತಿಕೆ ಮತ್ತು ತಾರ್ಕಿಕತೆ ವಿಭಾಗಗಳಿಂದ 100 ಪ್ರಶ್ನೆಗಳಿರುತ್ತವೆ. ಮೈಸೂರಿನಲ್ಲಿ ಅನೇಕ ಉತ್ತಮ ಎಂಬಿಎ ಕಾಲೇಜುಗಳಿವೆ. ಹೆಚ್ಚಿನ ವಿವರಗಳಿಗಾಗಿ, ಗಮನಿಸಿ: https://www.shiksha.com/mba/karnataka-pgcet-exam-preparation

2. ನಾನು ಈಗ ದ್ವಿತೀಯ ಪಿಯು (ವಾಣಿಜ್ಯ) ಓದುತ್ತಿದ್ದೇನೆ. ಮುಂದೆ 'ಸಿಎ' ಹೊರತುಪಡಿಸಿ, ಬೇರೆ ಯಾವ ಕೋರ್ಸ್‌ಗಳನ್ನು ಮಾಡಬಹುದು? ಯಾವ ಕೋರ್ಸ್ ಮೂಲಕ ಹೆಚ್ಚು ಹಣ ಗಳಿಸಬಹುದು?

ಹೆಸರು, ಊರು ತಿಳಿಸಿಲ್ಲ.

ಇತ್ತೀಚೆಗೆ ಬಿಕಾಂ ಕೋರ್ಸ್‌ಗೆ ಹೆಚ್ಚಿನ ಬೇಡಿಕೆಯಿದೆ. ಹಾಗೆಯೇ ಬಿಕಾಂ ಕೋರ್ಸ್‌ನಲ್ಲಿ ಹತ್ತಕ್ಕೂ ಹೆಚ್ಚು ವರ್ಗೀಕರಣವಿದೆ (ಸ್ಟ್ರೀಮ್ಸ್). ಉದಾಹರಣೆಗೆ, ಜನರಲ್, ಬ್ಯಾಂಕಿಂಗ್, ಇನ್ವೆಸ್ಟ್‌ಮೆಂಟ್, ಅಕೌಂಟಿಂಗ್, ಟ್ಯಾಕ್ಸೇಷನ್, ಟೂರಿಸಮ್, ಎಕನಾಮಿಕ್ಸ್ ಇತ್ಯಾದಿ.

ಪಿಯುಸಿ (ವಾಣಿಜ್ಯ) ನಂತರ ಮಾಡಬಹುದಾದ ಇನ್ನಿತರ ಕೋರ್ಸ್‌ಗಳೆಂದರೆಬಿಬಿಎ, ಬಿಸಿಎ, ಬಿಎಸ್‌ಡಬ್ಲ್ಯು, ಎಸಿಎಸ್, ಐಸಿಡಬ್ಲ್ಯು, ಸಿಎಂಎ, 5 ವರ್ಷದ ಇಂಟಿಗ್ರೇಟೆಡ್ ಎಲ್‌ಎಲ್‌ಬಿ ಇತ್ಯಾದಿ. ಹಾಗಾಗಿ, ನಿಮ್ಮ ಆಸಕ್ತಿ, ಸ್ವಾಭಾವಿಕ ಪ್ರತಿಭೆ ಮತ್ತು ವೃತ್ತಿ ಯೋಜನೆಯ ಅನುಸಾರ ಕೋರ್ಸ್ ಆಯ್ಕೆ ಮಾಡಿಕೊಳ್ಳುವುದು ಸೂಕ್ತ.

ಆದರೆ, ನೀವು ಕೇಳಿರುವ ಹಾಗೆ ಯಾವ ಕೋರ್ಸ್ ಮುಖಾಂತರ ಹೆಚ್ಚು ಹಣ ಗಳಿಸಬಹುದು ಎಂದು ಹೇಳಲಾಗುವುದಿಲ್ಲ. ಏಕೆಂದರೆ, ಯಾವುದೇ ವೃತ್ತಿಯಲ್ಲಿ ನಿಮ್ಮ ಕಾರ್ಯಕ್ಷಮತೆ ನಿರೀಕ್ಷಿತ ಮಟ್ಟಕ್ಕಿದ್ದರೆ ಮಾತ್ರ ಸಂಪಾದನೆಯಲ್ಲಿ ಪ್ರಗತಿಯನ್ನು ಕಾಣಬಹುದು. ಹೆಚ್ಚಿನ ಮಾಹಿತಿಗಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=jmijSoqBDVw

ಇನ್ನಷ್ಟು ಪ್ರಶ್ನೋತ್ತರಗಳಿಗಾಗಿ https://www.prajavani.net/education-career ಜಾಲತಾಣಕ್ಕೆ ಭೇಟಿ ನೀಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಆದಿತ್ಯ ಬಿರ್ಲಾ ಕ್ಯಾಪಿಟಲ್ ಕೋವಿಡ್ ಸ್ಕಾಲರ್‌ಷಿಪ್ ಪ್ರೋಗ್ರಾಮ್

ಕೋವಿಡ್–19ನಿಂದಾಗಿ ಪೋಷಕರನ್ನು ಕಳೆದುಕೊಂಡ ಪದವಿಪೂರ್ವ ಹಂತದವರೆಗೆ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ, ತಮ್ಮ ಶಿಕ್ಷಣ ಮುಂದುವರಿಸಲು ಬೆಂಬಲ ನೀಡುವುದಕ್ಕಾಗಿ ಆದಿತ್ಯ ಬಿರ್ಲಾ ಕ್ಯಾಪಿಟಲ್ ಫೌಂಡೇಶನ್ ಈ ಸ್ಕಾಲರ್‌ಷಿಪ್ ಪ್ರೋಗ್ರಾಂ ಆರಂಭಿಸಿದೆ.

ಅರ್ಹತೆ: ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ ತಮ್ಮ ಪೋಷಕರನ್ನು (ತಂದೆ ಅಥವಾ ತಾಯಿ ಅಥವಾ ಇಬ್ಬರೂ) ಕಳೆದುಕೊಂಡಿರುವ ಭಾರತೀಯ ವಿದ್ಯಾರ್ಥಿಗಳು ಈ ಸ್ಕಾಲರ್‌ಷಿಪ್‌ಗೆ ಅರ್ಜಿ ಸಲ್ಲಿಸಬಹುದು. ಅರ್ಜಿದಾರರು 1 ರಿಂದ 12 ನೇ ತರಗತಿ ಮತ್ತು ಪದವಿಪೂರ್ವ (ಸಾಮಾನ್ಯ ಮತ್ತು ವೃತ್ತಿಪರ) ಕೋರ್ಸ್‌ಗಳಿಗೆ ದಾಖಲಾಗಿ, ಓದು ಮುಂದುವರಿಸಿರಬೇಕು.

ಆರ್ಥಿಕ ನೆರವು: ₹60,000ವರೆಗೆ ನಿಗದಿಯಾದ ಒಂದು-ಬಾರಿಯ ವಿದ್ಯಾರ್ಥಿವೇತನ

ಅರ್ಜಿ ಸಲ್ಲಿಕೆಗೆ ಕೊನೆ ದಿನ: 10-11-2022

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ

ಮಾಹಿತಿಗೆ: www.b4s.in/praja/ABCC3

ಕೋಟಕ್ ಕನ್ಯಾ ಸ್ಕಾಲರ್‌ಷಿಪ್

ಕೋಟಕ್ ಮಹೀಂದ್ರಾ ಗ್ರೂಪ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ(ಸಿಎಸ್‌ಆರ್) ಯೋಜನೆಯಡಿಯಲ್ಲಿ, ಕೋಟಕ್ ಎಜುಕೇಶನ್ ಫೌಂಡೇಶನ್‌ನಿಂದ 12 ನೇ ತರಗತಿ ಉತ್ತೀರ್ಣರಾದ ವಿದ್ಯಾರ್ಥಿನಿಯರಿಗಾಗಿ ಈ ಸ್ಕಾಲರ್‌ಷಿಪ್ ಕಾರ್ಯಕ್ರಮವನ್ನು ರೂಪಿಸಿದೆ.

ಸಮಾಜದ ಹಿಂದುಳಿದ ವರ್ಗಗಳ ಪ್ರತಿಭಾನ್ವಿತ ವಿದ್ಯಾರ್ಥಿನಿಯರು ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ವೃತ್ತಿಪರ ಪದವಿ ಕೋರ್ಸ್ ಕಲಿಯಲು ನೆರವಾಗುವುದು ಈ ವಿದ್ಯಾರ್ಥಿವೇತನದ ಗುರಿಯಾಗಿದೆ. ಪ್ರತಿಷ್ಠಿತ ಸಂಸ್ಥೆಗಳಿಂದ (ಎನ್‌ಎಎಸಿ/ ಎನ್‌ಐಆರ್‌ಎಫ್ ಮಾನ್ಯತೆ ಪಡೆದ) ವೃತ್ತಿಪರ ಕೋರ್ಸ್‌ಗಳಲ್ಲಿ ಮೊದಲ ವರ್ಷದ ಪದವಿಗೆ ಪ್ರವೇಶ ಪಡೆದಿರುವ ಪ್ರತಿಭಾವಂತ ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಬಹುದು. ವೃತ್ತಿಪರ ಕೋರ್ಸ್‌ಗಳಲ್ಲಿ ಎಂಜಿನಿಯರಿಂಗ್, ಎಂಬಿಬಿಎಸ್, ಆರ್ಕಿಟೆಕ್ಚರ್, ಡಿಸೈನ್, ಇಂಟಿಗ್ರೇಟೆಡ್ ಎಲ್‌ಎಲ್‌ಬಿ ಇತ್ಯಾದಿ ವೃತ್ತಿಪರ ಪದವಿ ಕೋರ್ಸ್‌ಗಳು ಸೇರಿವೆ.

ಅರ್ಹತೆ: ಅರ್ಜಿದಾರರು 12ನೇ ತರಗತಿ ಬೋರ್ಡ್ ಪರೀಕ್ಷೆಗಳಲ್ಲಿ ಶೇ 75 ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿರಬೇಕು. ಕುಟುಂಬದ ವಾರ್ಷಿಕ ವರಮಾನ ₹ 3.20 ಲಕ್ಷ ಮೀರಬಾರದು.

ಆರ್ಥಿಕ ನೆರವು: ವಾರ್ಷಿಕ ರೂ.1.5 ಲಕ್ಷದವರೆಗೆ (ದಯವಿಟ್ಟು ಗಮನಿಸಿ: ಪ್ರತಿ ವರ್ಷ ವಿದ್ಯಾರ್ಥಿವೇತನದ ನವೀಕರಣವು ಕೋಟಕ್ ಶಿಕ್ಷಣ ಪ್ರತಿಷ್ಠಾನದ ಸ್ವಂತ ವಿವೇಚನೆಯಲ್ಲಿರುತ್ತದೆ)

ಅರ್ಜಿ ಸಲ್ಲಿಕೆಗೆ ಕೊನೆ ದಿನ: 30-11-2022

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: www.b4s.in/praja/KKGS12

ಕೃಪೆ: www.buddy.com

67 ಸಾಧಕರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಗರಿ

ಒಂದನೇ ಪುಟದಿಂದ...

ಚಿತ್ರನಟರಾದ ದತ್ತಣ್ಣ (ಎಚ್.ಜಿ.ದತ್ತಾತ್ರೇಯ), ಅವಿನಾಶ್, ಕಿರುತೆರೆ ಕಲಾವಿದ ಸಿಹಿಕಹಿ ಚಂದ್ರು, ಯಕ್ಷಗಾನ ಕಲಾವಿದರಾದ ಎಂ.ಪ್ರಭಾಕರ ಜೋಶಿ, ಸುಬ್ರಹ್ಮಣ್ಯ ಧಾರೇಶ್ವರ, ಕೋಲಾರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ಯುವಕರಲ್ಲಿ ಉದ್ಯಮಶೀಲತಾ ಮನೋಭಾವ ಬೆಳೆಸಲು ಶ್ರಮಿಸುತ್ತಿರುವ ಉದ್ಯಮಿ ಸಿ.ಜಿ.ಶ್ರೀನಿವಾಸನ್ ಅವರನ್ನೂ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಹತ್ತು ಸಂಘ–ಸಂಸ್ಥೆಗಳಿಗೆ ಪ್ರಶಸ್ತಿ: ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಹತ್ತು ಸಂಘ, ಸಂಸ್ಥೆಗಳಿಗೆ ಈ ಬಾರಿ 'ಅಮೃತ ಮಹೋತ್ಸವ ರಾಜ್ಯ ಪ್ರಶಸ್ತಿ' ನೀಡುವಂತೆ ಸಲಹಾ ಸಮಿತಿ ಶಿಫಾರಸು ಮಾಡಿತ್ತು. ಅದನ್ನು ಪುರಸ್ಕರಿಸಿದ್ದು, ಮೈಸೂರಿನ ರಾಮಕೃಷ್ಣ ಆಶ್ರಮ ಸೇರಿ ಹತ್ತು ಸಂಘ, ಸಂಸ್ಥೆಗಳಿಗೆ ಪ್ರಶಸ್ತಿ ಪ್ರಕಟಿಸಲಾಗಿದೆ.

ತೆರೆಮರೆ ಸಾಧಕರಿಗೆ ಮನ್ನಣೆ: 'ಕೇಂದ್ರ ಸರ್ಕಾರವು ಪದ್ಮ ಪ್ರಶಸ್ತಿಗೆ ಪುರಸ್ಕೃತರನ್ನು ಆಯ್ಕೆ ಮಾಡುವ ಮಾದರಿಯಲ್ಲೇ ಈ ಬಾರಿ ರಾಜ್ಯೋತ್ಸವ ಪ್ರಶಸ್ತಿಗೂ ಆಯ್ಕೆ ಮಾಡಲಾಗಿದೆ. ವಿವಿಧ ಕ್ಷೇತ್ರಗಳ ಸಾಧಕರು ಮತ್ತು ತೆರೆಮರೆಯ ಸಾಧಕರನ್ನು ಪರಿಗಣಿಸಲಾಗಿದೆ' ಎಂದು ಸಚಿವ ಸುನಿಲ್ ಕುಮಾರ್ ತಿಳಿಸಿದ್ದಾರೆ.

'ಈ ಬಾರಿ ಪ್ರಶಸ್ತಿಗೆ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ ಎಂದು ಪ್ರಕಟಿಸಲಾಗಿತ್ತು. ಆದರೂ, ಅರ್ಜಿಗಳು ಬಂದಿದ್ದವು. ಆಯ್ಕೆಯಾಗಿರುವ ಸಾಧಕರಲ್ಲಿ ಕೆಲವರು ತೀರಾ ಮುಗ್ಧರು. ಅವರ ಭಾವಚಿತ್ರವೂ ಇರಲಿಲ್ಲ. ಆಯ್ಕೆ ಮಾಡಿಕೊಂಡ ಕ್ಷೇತ್ರಗಳಲ್ಲಿ ತಮ್ಮಷ್ಟಕ್ಕೆ ಕೆಲಸ ಮಾಡುತ್ತಿದ್ದಾರೆ. ಇಂತಹ ಆಯ್ಕೆಗಳಿಂದ ಪ್ರಶಸ್ತಿಯ ಮೌಲ್ಯ ಹೆಚ್ಚಿದೆ' ಎಂದರು.

ಬೆಂಗಳೂರಿಗೆ ಸಿಂಹಪಾಲು

67 ಪ್ರಶಸ್ತಿ ಪುರಸ್ಕೃತರ ಪೈಕಿ 12 ಮಂದಿ ಬೆಂಗಳೂರಿನವರು. ಹತ್ತು ಸಂಘ–ಸಂಸ್ಥೆಗಳಲ್ಲಿ ನಾಲ್ಕು ಬೆಂಗಳೂರಿನಲ್ಲಿವೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ತಲಾ ನಾಲ್ವರಿಗೆ ಪ್ರಶಸ್ತಿ ಲಭಿಸಿದೆ. ಹೊರನಾಡು ಕನ್ನಡಿಗರು ಮತ್ತು ಅನಿವಾಸಿ ಕನ್ನಡಿಗರ ಪಟ್ಟಿಯಲ್ಲೂ ಕರಾವಳಿ ಜಿಲ್ಲೆಗಳವರು ಸೇರಿದ್ದಾರೆ.

ಸಂತಸ ತಂದಿದೆ

ಯಾವುದೇ ಪ್ರಶಸ್ತಿಯ ನಿರೀಕ್ಷೆ ಇರಲಿಲ್ಲ. ಕನ್ನಡ ಸಾಹಿತ್ಯ ಸೇವೆಗೆ ಗುರುತಿಸಿ ಗೌರವಿಸಿರುವುದು ಸಂತಸ ತಂದಿದೆ. ಶಿವರಾಮ ಕಾರಂತ ಸೇರಿ ಹಲವು ಪ್ರಶಸ್ತಿಗಳು ಬಂದಿವೆ. ಆದರೆ, ರಾಜ್ಯ ಸರ್ಕಾರ ಗುರುತಿಸಿ ಗೌರವಿಸುತ್ತಿರುವುದು ದೊಡ್ಡದು.

ಅ.ರಾ.ಮಿತ್ರ, ಸಾಹಿತಿ

ಕೃತಜ್ಞನಾಗಿದ್ದೇನೆ

ಪ್ರಶಸ್ತಿಗೆ ಅರ್ಹರಾದ ಅದೆಷ್ಟೊ ಜನ ನಾಡಿನಲ್ಲಿದಾರೆ. ಅವರೆಲ್ಲರ ಪ್ರತಿನಿಧಿಯಾಗಿ ಕೃತಜ್ಞಭಾವದಿಂದ ಪ್ರಶಸ್ತಿ ಸ್ವೀಕರಿಸುತ್ತೇನೆ. ನನ್ನನ್ನು ಬೆಳೆಸಿದ ನಿರ್ಮಾಪಕರು, ನಿರ್ದೇಶಕರು, ತಂತ್ರಜ್ಞರು ಸೇರಿದಂತೆ ಪ್ರತಿಯೊಬ್ಬರಿಗೂ ಕೃತಜ್ಞನಾಗಿದ್ದೇನೆ. ಇರುವಷ್ಟು ಕಾಲ ಕನ್ನಡದ ಸೇವೆ ಮಾಡಬೇಕು. ಮಾತು, ಕೃತಿಯ ಮೂಲಕ ನನ್ನ ಕೈಲಾದಷ್ಟು ಸೇವೆ ಮಾಡುತ್ತಿದ್ದೇನೆ.

ದತ್ತಣ್ಣ, ಚಿತ್ರನಟ

ಅನಿರೀಕ್ಷಿತ



ಪ್ರಶಸ್ತಿಗೆ ನನ್ನನ್ನು ಆಯ್ಕೆ ಮಾಡಿರುವುದು ಅನಿರೀಕ್ಷಿತ. ಸರ್ಕಾರದಿಂದ ಗುರುತಿಸಿರುವಾಗ ತುಂಬಾ ಸಂತೋಷವೆನಿಸಿದೆ. ನನ್ನನ್ನು ಚಿತ್ರರಂಗಕ್ಕೆ ಕರೆತಂದು ಗುರುತಿಸಿ, ಬೆಳೆಸಿದ ನಿರ್ಮಾಪಕರು, ನಿರ್ದೇಶಕರು ಸೇರಿದಂತೆ ಈ ಕ್ಷೇತ್ರದ ಪ್ರತಿಯೊಬ್ಬರಿಗೂ ಕೃತಜ್ಞನಾಗಿದ್ದೇನೆ.

ಅವಿನಾಶ್, ಚಿತ್ರನಟ

ಕನ್ನಡವು ಎಲ್ಲವನ್ನೂ ನೀಡಿದೆ

ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆಯಾಗಿರುವುದು ಸಂತೋಷ ತಂದಿದೆ; ಧನ್ಯತೆ ಬಂದಿದೆ. ನಾನೊಬ್ಬ ಹುಲುಮಾನವ. ಕನ್ನಡವನ್ನು ನಂಬಿದವನು. ಕನ್ನಡವು ಸ್ನೇಹ ಸೇರಿದಂತೆ ಎಲ್ಲವನ್ನೂ ನೀಡಿದೆ. ನನ್ನ ಇಡೀ ವ್ಯಕ್ತಿತ್ವವು ಕನ್ನಡತನದಿಂದ ತುಂಬಿಕೊಂಡಿದೆ

ಪ್ರೊ.ಎಂ.ಕೃಷ್ಣೇಗೌಡ, ಸಾಹಿತಿ

ಅಮೃತ ಮಹೋತ್ಸವ ರಾಜ್ಯ ಪ್ರಶಸ್ತಿ

ಸಂಸ್ಥೆ	ಜಿಲ್ಲೆ
ರಾಮಕೃಷ್ಣ ಆಶ್ರಮ	ಮೈಸೂರು
ಲಿಂಗಾಯತ ಪ್ರಗತಿಶೀಲ ಸಂಸ್ಥೆ	ಗದಗ
ಗಡಿ ತೋಟ	ಹಾವೇರಿ
ತಲಸೇಮಿಯಾ ಮತ್ತು ಹೀಮೋಫೀಲಿಯ ಸೊಸೈಟಿ	ಬಾಗಲಕೋಟೆ
ಅಮೃತ ಶಿಶು ನಿವಾಸ	ಬೆಂಗಳೂರು
ಸುಮನಾ ಫೌಂಡೇಷನ್	ಬೆಂಗಳೂರು
ಯುವ ವಾಹಿನಿ	ದಕ್ಷಿಣ ಕನ್ನಡ
ನೆಲೆ ಫೌಂಡೇಷನ್ (ಅನಾಥ ಮಕ್ಕಳ ಪುನರ್ವಸತಿ ಕೇಂದ್ರ)	ಬೆಂಗಳೂರು
ನಮ್ಮನೆ ಸುಮ್ಮನೆ– ನಿರಾಶ್ರಿತ ಆಶ್ರಮ (ಮಂಗಳಮುಖಿ ಸಂಸ್ಥೆ)	ಬೆಂಗಳೂರು
ಉಮಾಮಹೇಶ್ವರಿ ಹಿಂದುಳಿದ ವರ್ಗ ಅಭಿವೃದ್ಧಿ ಟ್ರಸ್ಟ್	ಮಂಡ್ಯ

ಭಗತ್ ಸಿಂಗ್ ನೇಣು ಪಾತ್ರದ ಅಭ್ಯಾಸ: ವಿದ್ಯಾರ್ಥಿ ಸಾವು

ಒಂದನೇ ಪುಟದಿಂದ...

'ಮಗ ಭಗತ್‌ಸಿಂಗ್ ಪಾತ್ರದ ಅಭ್ಯಾಸ ಮಾಡುತ್ತಿದ್ದ. ನೇಣಿಗೆ ಕೊರಳೊಡ್ಡುವ ಸನ್ನಿವೇಶದ ಅಭ್ಯಾಸಕ್ಕಾಗಿ ಫ್ಯಾನಿಗೆ ನೂಲಿನ ಹಗ್ಗ ಕಟ್ಟಿಕೊಂಡಿದ್ದ. ಸ್ಟೂಲ್ ಮೇಲೆ ನಿಂತು ಮುಖವನ್ನು ಟೋಪಿಯಿಂದ ಮುಚ್ಚಿಕೊಂಡಿದ್ದ. ಈ ಸಂದರ್ಭದಲ್ಲಿ ಹಗ್ಗ ಆಕಸ್ಮಿಕವಾಗಿ ಕೊರಳು ಬಿಗಿದಿದೆ' ಎಂದು ಪಾಲಕರು ದೂರಿನಲ್ಲಿ ತಿಳಿಸಿದ್ದಾರೆ.

ನಾಗರಾಜ ಶನಿವಾರ ರಾತ್ರಿ ಅಂಗಡಿಯಿಂದ ಮನೆಗೆ ಮರಳಿದಾಗ ನೇಣು ಬಿಗಿದ ಸ್ಥಿತಿಯಲ್ಲಿದ್ದ ಪುತ್ರನನ್ನು ತಕ್ಷಣ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಅದಾಗಲೇ ಸಂಜಯ್ ಮೃತಪಟ್ಟಿದ್ದಾಗಿ ವೈದ್ಯರು ದೃಢಪಡಿಸಿದರು.

ಪೌರ ಕಾರ್ಮಿಕ ಮಹಿಳೆ ಮುಡಿಗೆ ರಾಜ್ಯೋತ್ಸವ ಪ್ರಶಸ್ತಿ ಗರಿ

ಹೂವಿನಹಡಗಲಿ: ಪಟ್ಟಣದ ಬೀದಿಗಳನ್ನು ಗುಡಿಸಿ, ನೈರ್ಮಲ್ಯ ಕಾಪಾಡುವ ಕಾಯಕವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದ ಪೌರ ಕಾರ್ಮಿಕ ಮಹಿಳೆ ಎಂಟುಮನಿ ಮಲ್ಲಮ್ಮ ಈ ಸಾಲಿನ ರಾಜ್ಯೋತ್ಸವ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ.

ತನ್ನ ಕೆಲಸದಿಂದಲೇ ರಾಜ್ಯ ಪ್ರಶಸ್ತಿಗೆ ಆಯ್ಕೆಯಾಗಿರುವುದು ವಿಶೇಷ. ಇಲ್ಲಿನ ಪಟ್ಟಣ ಪಂಚಾಯಿತಿಯಲ್ಲಿ ಪೌರ ಕಾರ್ಮಿಕರಾಗಿದ್ದ ಇವರ ಪತಿ ಎ.ಪರಶುರಾಮಪ್ಪ ನಿಧನ ಬಳಿಕ ಮಲ್ಲಮ್ಮ 1986ರಲ್ಲಿ ಅನುಕಂಪ ಆಧಾರದಲ್ಲಿ ಕೆಲಸಕ್ಕೆ ಸೇರಿದ್ದಾರೆ.

ಸೇವೆಗೆ ಸೇರಿದಾಗಿನಿಂದ ಹೆಚ್ಚು ರಜೆಗಳನ್ನು ಪಡೆಯದೇ ಸ್ವಚ್ಛತಾ ಸಿಬ್ಬಂದಿಯಾಗಿ ಮಲ್ಲಮ್ಮ ಸೇವೆ ಸಲ್ಲಿಸಿದ್ದಾರೆ. ಹಬ್ಬ ಹರಿದಿನ, ಕುಟುಂಬದ ಕಾರ್ಯಕ್ರಮಗಳನ್ನೂ ಲೆಕ್ಕಿಸದೇ ನಿತ್ಯ ಬೀದಿ ಗುಡಿಸುವ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದ ಮಲ್ಲಮ್ಮ 2020ರ ಜ.31 ರಂದು ನಿವೃತ್ತಿ ಹೊಂದಿದ್ದಾರೆ.

34 ವರ್ಷಗಳಿಂದ ಪಟ್ಟಣ ನೈರ್ಮಲ್ಯ ಕಾಪಾಡುವ ಕೆಲಸದಲ್ಲಿ ಭಾಗಿಯಾದ ಈ ಮಹಿಳೆಯನ್ನು ಪ್ರಶಸ್ತಿಯೇ ಹುಡುಕಿಕೊಂಡು ಬಂದಿದೆ.



ಮಲ್ಲಮ್ಮ

'ನನಗೆ ರಾಜ್ಯೋತ್ಸವ ಪ್ರಶಸ್ತಿ ಬಂದಿದೆ ಎಂದು ಪುರಸಭೆ ಅಧಿಕಾರಿಗಳು ತಿಳಿಸಿದಾಗ ನಂಬಲಾಗಲಿಲ್ಲ. ಸೇವೆ ಗುರುತಿಸಿ ಪ್ರಶಸ್ತಿಗೆ ಆಯ್ಕೆ ಮಾಡಿರುವುದು ಸಂತೋಷ ತಂದಿದೆ. ನಾನು ಕೆಲಸಕ್ಕೆ ಸೇರಿದಾಗ ಮಕ್ಕಳೆಲ್ಲಾ ಚಿಕ್ಕವರಿದ್ರು. ಅತ್ತೆ ಬಳಿ ಮಕ್ಕಳನ್ನು ಬಿಟ್ಟು, ಬೆಳಗಿನ ಜಾವ ನಾಲ್ಕುವರೆಗೆ ಬೀದಿ ಗುಡಿಸಲು ಹೋಗುತ್ತಿದ್ದೆ. ನಮ್ಮಂತವರಿಗೆ ಪ್ರಶಸ್ತಿ ಬರುತ್ತದೆ ಎಂದು ನಿರೀಕ್ಷಿಸಿರಲಿಲ್ಲ' ಎಂದು ಮಲ್ಲಮ್ಮ ಹೇಳಿದರು.

'ಪೌರ ಕಾರ್ಮಿಕ ಮಹಿಳೆ ಮಲ್ಲಮ್ಮನಿಗೆ ರಾಜ್ಯೋತ್ಸವ ಪ್ರಶಸ್ತಿ ಬಂದಿರುವುದು ನಮಗೆ ಹೆಮ್ಮೆ ತಂದಿದೆ. ಅವರನ್ನು ಪುರಸಭೆಯಿಂದಲೂ ಅಭಿನಂದಿಸುತ್ತೇವೆ' ಎಂದು ಪುರಸಭೆ ಅಧ್ಯಕ್ಷ ಜ್ಯೋತಿ ಮಲ್ಲಣ್ಣ ತಿಳಿಸಿದರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರ ಪಟ್ಟಿ

ಕ್ಷೇತ್ರ ಸಂಕೀರ್ಣ	
ಸುಬ್ಬರಾಮ ಶೆಟ್ಟಿ (ಆರ್.ವಿ. ಶಿಕ್ಷಣ ಸಂಸ್ಥೆ)	ಬೆಂಗಳೂರು
ವಿದ್ವಾನ್ ಗೋಪಾಲಕೃಷ್ಣ ಶರ್ಮ	ಬೆಂಗಳೂರು
ಸೋಲಿಗರ ಮಾದಮ್ಮ	ಚಾಮರಾಜನಗರ
ಸೈನಿಕ	
ಸುಬೇದಾರ್ ಬಿ.ಕೆ. ಕುಮಾರಸ್ವಾಮಿ	ಬೆಂಗಳೂರು
ಪತ್ರಿಕೋದ್ಯಮ	
ಎಚ್.ಆರ್. ಶ್ರೀಶ	ಬೆಂಗಳೂರು
ಜಿ.ಎಂ. ಶಿರಹಟ್ಟಿ	ಗದಗ
ವಿಜ್ಞಾನ– ತಂತ್ರಜ್ಞಾನ	
ಕೆ. ಶಿವನ್	ಬೆಂಗಳೂರು
ಡಾ.ಡಿ.ಆರ್. ಬಳೂರಗಿ	ರಾಯಚೂರು
ಕೃಷಿ	
ಗಣೇಶ್ ತಿಮ್ಮಯ್ಯ	ಕೊಡಗು
ಚಂದ್ರಶೇಖರ್ ನಾರಣಾಪುರ	ಚಿಕ್ಕಮಗಳೂರು
ಪರಿಸರ	
ಸಾಲುಮರದ ನಿಂಗಣ್ಣ	ರಾಮನಗರ
ಪೌರಕಾರ್ಮಿಕ	
ಮಲ್ಲಮ್ಮ ಹೂವಿನಹಡಗಲಿ	ವಿಜಯನಗರ
ಆಡಳಿತ	
ಡಾ. ಎಲ್.ಎಚ್. ಮಂಜುನಾಥ್ (ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ)	ಶಿವಮೊಗ್ಗ
ಮದನ್ ಗೋಪಾಲ್	ಬೆಂಗಳೂರು
ಹೊರನಾಡು	
ದೇವಿದಾಸ ಶೆಟ್ಟಿ	ಮುಂಬೈ
ಅರವಿಂದ್ ಪಾಟೀಲ್	ಹೊರನಾಡು
ಕೃಷ್ಣಮೂರ್ತಿ ಮಂಜ	ತೆಲಂಗಾಣ
ಹೊರದೇಶ	
ರಾಜ್‌ಕುಮಾರ್	ಗಲ್ಫ್ ರಾಷ್ಟ್ರ
ವೈದ್ಯಕೀಯ	
ಡಾ.ಎಚ್.ಎಸ್. ಮೋಹನ್	ಶಿವಮೊಗ್ಗ
ಡಾ.ಬಸವಂತಪ್ಪ	ದಾವಣಗೆರೆ
ಸಮಾಜಸೇವೆ	
ರವಿ ಶೆಟ್ಟಿ	ದಕ್ಷಿಣ ಕನ್ನಡ
ಸಿ.ಕರಿಯಪ್ಪ	ಬೆಂಗಳೂರು(ಗ್ರಾ)
ಎಂ.ಎಸ್. ಕೋರಿಶೆಟ್ಟರ್	ಹಾವೇರಿ
ಡಿ. ಮಾದೇಗೌಡ	ಮೈಸೂರು
ಬಲಬೀರ್ ಸಿಂಗ್	ಬೀದರ್
ವಾಣಿಜ್ಯೋದ್ಯಮ	
ಬಿ.ವಿ. ನಾಯ್ಡು	ಬೆಂಗಳೂರು
ಜಯರಾಮ ಬನಾನ್	ಉಡುಪಿ
ಸಿ.ಜಿ. ಶ್ರೀನಿವಾಸನ್	ಕೋಲಾರ
ರಂಗಭೂಮಿ	
ತಿಪ್ಪಣ್ಣ ಹೆಳವರ್	ಯಾದಗಿರಿ
ಲಲಿತಾಬಾಯಿ ಚನ್ನದಾಸರ್	ವಿಜಯಪುರ
ಗುರುನಾಥ ಹೂಗಾರ್	ಕಲಬುರಗಿ
ಪ್ರಭಾಕರ ಜೋಶಿ (ಯಕ್ಷಗಾನ–ತಾಳಮದ್ದಳೆ)	ಉಡುಪಿ
ಶ್ರೀಶೈಲ ಹುದ್ದಾರ್	ಹಾವೇರಿ
ಸಂಗೀತ	
ನಾರಾಯಣ ಎಂ.	ದಕ್ಷಿಣ ಕನ್ನಡ
ಅನಂತಾಚಾರ್ಯ ಬಾಳಾಚಾರ್ಯ	ಧಾರವಾಡ
ಅಂಜಿನಪ್ಪ ಸತ್ಪಾಡಿ (ಮುಖವೀಣೆ)	ಚಿಕ್ಕಬಳ್ಳಾಪುರ
ಅನಂತ ಕುಲಕರ್ಣಿ	ಬಾಗಲಕೋಟೆ
ಜಾನಪದ	
ಸಹಮದೇವಪ್ಪ ಈರಪ್ಪ ನಡಿಗೇರ್	ಉತ್ತರ ಕನ್ನಡ
ಗುಡ್ಡ ಪಾಣಾರ (ದೈವ ನರ್ತಕ)	ಉಡುಪಿ
ಕಮಲಮ್ಮ ಸೂಲಗಿತ್ತಿ	ರಾಯಚೂರು
ಸಾವಿತ್ರಿ ಪೂಜಾರ್	ಧಾರವಾಡ
ರಾಚಯ್ಯ ಸಾಲಿಮಠ್	ಬಾಗಲಕೋಟೆ
ಮಹೇಶ್ವರಗೌಡ ಲಿಂಗದಹಳ್ಳಿ (ವೀರಗಾಸೆ)	ಹಾವೇರಿ
ಶಿಲ್ಪಕಲೆ	
ಪರಶುರಾಮ್ ಪವಾರ್ (ರಥಶಿಲ್ಪಿ)	ಬಾಗಲಕೋಟೆ
ಹನುಮಂತಪ್ಪ ಬಾಳಪ್ಪ ಹುಕ್ಕೇರಿ	ಬೆಳಗಾವಿ
ಚಿತ್ರಕಲೆ	
ಸಣ್ಣರಂಗಪ್ಪ ಚಿತ್ರಕಾರ್ (ಕಿನ್ನಾಳ ಕಲೆ)	ಕೊಪ್ಪಳ
ಚಲನಚಿತ್ರ	
ದತ್ತಣ್ಣ	ಚಿತ್ರದುರ್ಗ
ಅವಿನಾಶ್	ಬೆಂಗಳೂರು
ಕಿರುತೆರೆ	
ಸಿಹಿಕಹಿ ಚಂದ್ರು	ಬೆಂಗಳೂರು
ಯಕ್ಷಗಾನ	
ಎಂ.ಎ. ನಾಯಕ್	ಉಡುಪಿ
ಸುಬ್ರಹ್ಮಣ್ಯ ಧಾರೇಶ್ವರ	ಉತ್ತರ ಕನ್ನಡ
ಸರಪಾಡಿ ಅಶೋಕ್ ಶೆಟ್ಟಿ	ದಕ್ಷಿಣ ಕನ್ನಡ
ಬಯಲಾಟ	
ಅಡವಯ್ಯ ಚ. ಹಿರೇಮಠ್ (ದೊಡ್ಡಾಟ)	ಧಾರವಾಡ
ಶಂಕರಪ್ಪ ಮಲ್ಲಪ್ಪ ಹೊರಪೇಟೆ	ಕೊಪ್ಪಳ
ಎಚ್. ಪಾಂಡುರಂಗಪ್ಪ	ಬಳ್ಳಾರಿ
ಸಾಹಿತ್ಯ	
ಶಂಕರ ಚಚಡಿ	ಬೆಳಗಾವಿ
ಪ್ರೊ. ಕೃಷ್ಣೇಗೌಡ	ಮೈಸೂರು
ಅಶೋಕ್‌ಬಾಬು ನೀಲಗಾರ್	ಬೆಳಗಾವಿ
ಪ್ರೊ. ಅ.ರಾ. ಮಿತ್ರ	ಹಾಸನ
ರಾಮಕೃಷ್ಣ ಮರಾಠೆ	ಕಲಬುರಗಿ
ಶಿಕ್ಷಣ	
ಕೋಡಿ ರಂಗಪ್ಪ	ತುಮಕೂರು
ಡಾ.ಎಂ.ಜಿ. ನಾಗರಾಜ್ (ಸಂಶೋಧಕ)	ಬೆಂಗಳೂರು
ಕ್ರೀಡೆ	
ದತ್ತಾತ್ರೇಯ ಗೋವಿಂದ ಕುಲಕರ್ಣಿ	ಧಾರವಾಡ
ರಾಘವೇಂದ್ರ ಅಣ್ವೇಕರ್	ಬೆಳಗಾವಿ
ನ್ಯಾಯಾಂಗ	
ವೆಂಕಟಾಚಲಪತಿ	ಬೆಂಗಳೂರು
ನಂಜುಂಡರೆಡ್ಡಿ	ಬೆಂಗಳೂರು
ನೃತ್ಯ	
ಕಮಲಾಕ್ಷಾಚಾರ್ಯ	ದಕ್ಷಿಣ ಕನ್ನಡ

ಬೆಳಗಾವಿಯ ಈಜುಪಟು ರಾಘವೇಂದ್ರ ಅಣ್ವೇಕರ್‌ಗೆ ರಾಜ್ಯೋತ್ಸವ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಸಹ್ಯಾದ್ರಿ ನಗರದ ನಿವಾಸಿ, ಅಂಗವಿಕಲ ಈಜುಪಟು ರಾಘವೇಂದ್ರ ರತ್ನಾಕರ ಅಣ್ವೇಕರ್(35) ಕ್ರೀಡಾ ಕ್ಷೇತ್ರದ ಸಾಧನೆಗಾಗಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಅವರು ಮೂಲತಃ ಧಾರವಾಡ ಜಿಲ್ಲೆಯ ಹುಬ್ಬಳ್ಳಿಯವರು. ಎಂ.ಎ-(ರಾಜ್ಯಶಾಸ್ತ್ರ) ಸ್ನಾತಕೋತ್ತರ ಪದವಿ ಗಳಿಸಿದ್ದಾರೆ. 2014ರಿಂದ ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಗುಮಾಸ್ತರಾಗಿ ಕೆಲಸ ಮಾಡುತ್ತಿದ್ದಾರೆ. 14ನೇ ವಯಸ್ಸಿನಿಂದ ಈಜು ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿರುವ ಅವರು, ಹಾಂಕಾಂಗ್, ಮಲೇಷ್ಯಾ, ಡೆನ್ಮಾರ್ಕ್ ಮತ್ತಿತರ ದೇಶಗಳಲ್ಲಿ ನಡೆದ ಅಂತರರಾಷ್ಟ್ರೀಯ ಈಜು ಟೂರ್ನಿಗಳಲ್ಲಿ 28, ರಾಷ್ಟ್ರಮಟ್ಟದ ಟೂರ್ನಿಗಳಲ್ಲಿ 100 ಪದಕಗಳನ್ನು ಗಳಿಸಿದ್ದಾರೆ.



2010ರಲ್ಲಿ ಚೀನಾದಲ್ಲಿ ನಡೆದ ಏಷ್ಯನ್ ಗೇಮ್ಸ್‌ನ 200 ಮೀ. ವೈಯಕ್ತಿಕ ಮೆಡ್ಲೆ ವಿಭಾಗದಲ್ಲಿ ಕಂಚಿನ ಪದಕ ಗಳಿಸಿದ್ದಾರೆ. 2014ರಲ್ಲಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರಿಂದ ರಾಷ್ಟ್ರಪ್ರಶಸ್ತಿ ಪಡೆದುಕೊಂಡಿದ್ದಾರೆ.

'ಅಂಗವೈಕಲ್ಯದ ಮಧ್ಯೆಯೂ ಕ್ರೀಡಾ ಕ್ಷೇತ್ರದಲ್ಲಿ ಮಾಡಿದ ಸಾಧನೆ ಗುರುತಿಸಿ, ಸರ್ಕಾರ ಪ್ರಶಸ್ತಿ ನೀಡುತ್ತಿರುವುದು ಸಂತಸ ತಂದಿದೆ. ಸತತ ಪರಿಶ್ರಮಕ್ಕೆ ಫಲ ದೊರೆತಿದೆ' ಎಂದು ರಾಘವೇಂದ್ರ ಅಣ್ವೇಕರ್ 'ಪ್ರಜಾವಾಣಿ'ಗೆ ತಿಳಿಸಿದರು.




ಸುಭಾಷಿತ

ನಿಮ್ಮನ್ನು ನೀವು ಜಯಿಸಿ. ಆಗ ಇಡೀ ಜಗತ್ತೇ ನಿಮ್ಮದಾಗುತ್ತದೆ.

–ಸ್ವಾಮಿ ವಿವೇಕಾನಂದ

ನಾಡಿನ ಜೀವನಾಡಿಯ ಪೊರೆಯಬೇಕಿದೆ ನೆಲ-ಜಲದ ಕೊಳಕಿಗೆ ಕ್ಷಮೆಯಿಲ್ಲ

ನದಿಗಳೆಂದರೆ ನಾಡಿನ ಜೀವನಾಡಿ. ಅನಾದಿ ಕಾಲದಿಂದ ಜೀವಸಂಕುಲವನ್ನೂ ನಾಗರಿಕತೆಯನ್ನೂ ಪೋಷಿಸಿಕೊಂಡು ಬಂದ ಜಲಮೂಲಗಳನ್ನು ನಮ್ಮ ರಕ್ತನಾಳಗಳಂತೆ ಶುದ್ಧವಾಗಿರಿಸಬೇಕು. ಈ ಮಾತನ್ನು ನಾವು ವೇದಕಾಲದಿಂದಲೂ ಕೇಳುತ್ತ ಬಂದಿದ್ದೇವೆ; ಜಲಶುದ್ಧಿಯ ಬಗ್ಗೆ ಕಾನೂನು ಕಟ್ಟಳೆಗಳನ್ನು ರೂಪಿಸಿಕೊಂಡಿದ್ದೇವೆ. ನದಿಕೆರೆಗಳ ತಪಾಸಣೆಗೆ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಸ್ಥಾಪಿಸಿ, ಜಿಲ್ಲೆ ಜಿಲ್ಲೆಗಳಲ್ಲೂ ಅಧಿಕಾರಿಗಳ ಪಡೆಯನ್ನೇ ಕಾವಲಿಗಿಟ್ಟಿದ್ದೇವೆ. ಏಷ್ಟಿದ್ದರೆ, ಕರ್ನಾಟಕದ ಜಲಮೂಲಗಳ ಕೊಳಕು ಸ್ಥಿತಿಯ ಬಗ್ಗೆ ಕಳೆದ ಎಂಟು ವರ್ಷಗಳಿಂದ ಪದೇಪದೇ ಎಚ್ಚರಿಕೆಯ ಗಂಟೆಗಳು ಮೊಳಗುತ್ತಿವೆ. ಸುಪ್ರೀಂ ಕೋರ್ಟ್, ಹಸಿರು ನ್ಯಾಯಮಂಡಳಿ ಮತ್ತು ಕೇಂದ್ರ ಜಲಶಕ್ತಿ ಸಚಿವಾಲಯ ಎಲ್ಲವೂ ನಮ್ಮ ನಾಡಿನ ಜಲಮಾಲಿನ್ಯದ ಬಗ್ಗೆ ಕೆಂಪು ನಿಶಾನೆಯನ್ನು ತೋರಿಸುತ್ತಲೇ ಬಂದಿವೆ. ಕೊಳಕು ನೀರನ್ನು ಕುಡಿದು ಜನರು ಆಸ್ಪತ್ರೆ ಸೇರುತ್ತಿದ್ದಾರೆ; ಸಾಯುತ್ತಿದ್ದಾರೆ. ನೆಲ-ಜಲದ ಮಾಲಿನ್ಯಗಳ ಬಗ್ಗೆ ಮಾಧ್ಯಮಗಳು ಕಾಲಕಾಲಕ್ಕೆ ವರದಿಯನ್ನು ನೀಡುತ್ತಲೇ ಬಂದಿವೆ. ಈ ಯಾವುವೂ ಯಾರನ್ನೂ ಎಚ್ಚರಿಸಿದಂತೆ ಕಾಣುತ್ತಿಲ್ಲ. ಪುರಸಭೆ, ನಗರಸಭೆಗಳು, ಉದ್ಯಮ ಘಟಕಗಳು ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿ ಎಲ್ಲವೂ ಕೈಕಟ್ಟಿ ಕುಳಿತಂತಿವೆ. ಇವುಗಳ ನಿಷ್ಕ್ರಿಯತೆಯ ಪರಿಣಾಮ ಏನೆಂದರೆ ಇಡೀ ರಾಜ್ಯವೇ ನಾಚಿಕೆಯಿಂದ ತಲೆ ತಗ್ಗಿಸುವ ಮಟ್ಟಕ್ಕೆ ₹ 2,900 ಕೋಟಿಯಷ್ಟು ಬೃಹತ್ ಮೊತ್ತವನ್ನು ದಂಡ ರೂಪದಲ್ಲಿ ಸಲ್ಲಿಸುವಂತೆ ಹಸಿರು ನ್ಯಾಯಮಂಡಳಿ ಆದೇಶ ನೀಡಿದೆ. ಅದು ಸಾಲದೆಂಬಂತೆ, ಕಳೆದ ವಾರ ನಡೆದ ರಾಷ್ಟ್ರೀಯ ಜಲಶಕ್ತಿ ಸಚಿವರ ಸಭೆಯಲ್ಲಿ ನಮ್ಮ ರಾಜ್ಯದ ನದಿಮಾಲಿನ್ಯ ಸ್ಥಿತಿ ತೀವ್ರ ಟೀಕೆಗೊಳಗಾಗಿದೆ.



ನಾಡಿನ ನಾವು ಒಬ್ಬೊಬ್ಬರೂ ನದಿ, ಕೆರೆ, ದಿಬ್ಬ, ಕೊಳ್ಳಗಳ ದುಸ್ಥಿತಿಗೆ ಕಾರಣರಾಗುತ್ತಿದ್ದೇವೆ ಎಂಬುದನ್ನು ಅರಿತು ಎಚ್ಚೆತ್ತುಕೊಳ್ಳಬೇಕಿದೆ

ನಾಡಿನ ಪ್ರಮುಖ 17 ನದಿಗಳ ಪಾತ್ರದಲ್ಲಿ 38 ನಗರ-ಪಟ್ಟಣಗಳಿದ್ದು ಅವೆಲ್ಲ ನಿತ್ಯವೂ ಚರಂಡಿಗಳ ಮೂಲಕ ಬಹುಪಾಲು ಕೊಳಚೆ ನೀರನ್ನು ನದಿಗೆ ಹರಿಬಿಡುತ್ತಿವೆ. ರಾಜ್ಯದಲ್ಲಿ ದಿನವೂ ಹನ್ನೊಂದು ಸಾವಿರ ಟನ್ ಘನತ್ಯಾಜ್ಯ ಉತ್ಪಾದನೆಯಾಗುತ್ತಿದ್ದು ಅವುಗಳ ಮೇಲೆ ಮಳೆ ಸುರಿದಾಗಲೆಲ್ಲ ಇನ್ನಷ್ಟು ಕೊಳಕು ದ್ರವ್ಯಗಳು ಕೆರೆಕೊಳ್ಳಗಳಿಗೆ, ಅಂತರ್ಜಲಕ್ಕೆ ಸೋರಿ ಅಂತಿಮವಾಗಿ ನದಿಗಳಿಗೇ ಸೇರುತ್ತವೆ. ಜಲಮಾಲಿನ್ಯಕ್ಕೆ ಕಾರಣವಾಗುವ ಮೂರೂವರೆ ಸಾವಿರ ಕೈಗಾರಿಕೋದ್ಯಮಗಳು ತಮ್ಮ ತ್ಯಾಜ್ಯವನ್ನು ಸಂಸ್ಕರಿಸುವುದರಲ್ಲಿ ವಿಫಲವಾಗುತ್ತಿವೆ. ರಾಜ್ಯದಲ್ಲಿ ಪ್ರತಿದಿನವೂ 445 ಕೋಟಿ ಲೀಟರ್ ದ್ರವತ್ಯಾಜ್ಯ ಉತ್ಪಾದನೆಯಾಗುತ್ತಿದ್ದು ಅದರಲ್ಲಿ ಅರ್ಧದಷ್ಟು ತ್ಯಾಜ್ಯದ ಸಂಸ್ಕರಣೆಗೆ ಯಂತ್ರಾಗಾರಗಳೇ ಇಲ್ಲ. ಸ್ಥಾಪಿತವಾದ ಅದೆಷ್ಟೋ ತ್ಯಾಜ್ಯ ಸಂಸ್ಕರಣಾ ಘಟಕಗಳು ಕೆಟ್ಟು ನಿಂತಿವೆ. ಪ್ರಧಾನ ಮಂತ್ರಿಯವರು ನೀರಿನ ಮಹತ್ವದ ಬಗ್ಗೆ ಅದೆಷ್ಟೋ ಮಾತಿನ ಹೊಳೆ ಹರಿಸಿದರೂ ನೀರಿಗೆ ಕೊಳೆ ಸೇರುವುದು ನಿಂತಿಲ್ಲ. ಮಂಗಳವಾರದಿಂದ (ನ. 1) ರಾಷ್ಟ್ರ ಮಟ್ಟದಲ್ಲಿ ಐದು ದಿನಗಳ ಕಾಲ 'ಭಾರತ ಜಲಸಪ್ತಾಹ' ನಡೆಯಲಿದೆ. ನೀರಿಗೆ ಸಂಬಂಧಿಸಿದ ಎಲ್ಲ ಉದ್ಯಮ ಪ್ರತಿನಿಧಿಗಳೂ ಎಲ್ಲ ರಾಜ್ಯಗಳ ನಿಯೋಗದಲ್ಲಿ ತಮ್ಮ ಹಿರಿಮೆಯ ಪ್ರದರ್ಶನ ಮಾಡಲಿವೆ. ಭರವಸೆಗಳೂ ಬರಲಿವೆ. ನಾವಂತೂ ನವೆಂಬರ್ ತಿಂಗಳಿಡೀ ನಾಡಹಬ್ಬವನ್ನು ಆಚರಿಸಲಿದ್ದೇವೆ. 'ಕನ್ನಡವೆಂದರೆ ಬರಿನುಡಿಯಲ್ಲ... ಜಲವೆಂದರೆ ಕೇವಲ ನೀರಲ್ಲ...' ಎಂದು ನಮ್ಮ ಸಂಗೀತ, ಸಾಹಿತ್ಯ, ಕಲಾಪರಂಪರೆಯ ಜೊತೆಗೆ ಇಡೀ ಪರಿಸರವನ್ನು ಕೊಂಡಾಡುತ್ತ ಬಾವುಟ ಹಾರಿಸಿ ಎಲ್ಲೆಡೆ ಎಳೆಯರ ಜೊತೆ ನಿಂತು ಹಾಡು ಹೇಳಲಿದ್ದೇವೆ. ಆ ಎಲ್ಲ ಹೆಗ್ಗಳಿಕೆಗಳ, ಆ ಮಕ್ಕಳ ಭವಿಷ್ಯಕ್ಕೆ ಮೂಲಸ್ರೋತವಾದ ನೀರನ್ನೇ ಶುದ್ಧವಾಗಿಟ್ಟುಕೊಳ್ಳಲಾಗದ ಸ್ಥಿತಿಗೆ ಬಂದಿದ್ದೇವೆ. ಆ ಕುರಿತು ನಾವು ಯೋಚಿಸಬೇಕಿದೆ. ನೀರಿನ ಶುಚಿತ್ವವನ್ನು ನೋಡಲೆಂದೇ ಮಾಲಿನ್ಯ ತಪಾಸಣಾ ಅಧಿಕಾರಿಗಳು, ಉದ್ಯಮಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ಪದೇಪದೇ ವಿದೇಶಿ ಪ್ರವಾಸ ಕೈಗೊಳ್ಳುತ್ತಾರೆ. ಚರಂಡಿ ನೀರನ್ನೇ ಕುಡಿಯುವ ನೀರನ್ನಾಗಿ ಪರಿವರ್ತಿಸುವ ಅದೆಷ್ಟೋ ಉದಾಹರಣೆಗಳನ್ನು ಅವರು ಅಲ್ಲಿ ನೋಡಿ ಬರುತ್ತಾರಾದರೂ ನಮ್ಮಲ್ಲಿ ಮಾತ್ರ ಆಕಾಶದಿಂದ ಬಂದ ಶುದ್ಧನೀರೂ ನೆಲಕ್ಕೆ ಬಂದಾಗ ಕೊಳೆಯಾಗುತ್ತಿರುವುದೇಕೆ? ಅಧಿಕಾರವಲಯದ ವೈಫಲ್ಯಕ್ಕೆ ನಾವೂ ಪರೋಕ್ಷವಾಗಿ ಬಾಧ್ಯಸ್ಥರೇ ಆಗಿದ್ದೇವೆ. ನಮ್ಮ ನಾಡಿನ ಒಂದೊಂದು ಅಂಗುಲವೂ ಒಂದಲ್ಲ ಒಂದು ನದಿಯ ಜಲಾನಯನ ಪ್ರದೇಶವೇ ಆಗಿರುವುದರಿಂದ, ನಾಡಿನ ಒಬ್ಬೊಬ್ಬರೂ ನದಿ, ಕೆರೆ, ದಿಬ್ಬ, ಕೊಳ್ಳಗಳ ದುಸ್ಥಿತಿಗೆ ಕಾರಣರಾಗುತ್ತಿದ್ದೇವೆ. ಪರಿಸರ ಶುಚಿತ್ವದ ಅಳತೆಗೋಲಿನ ಪ್ರಕಾರ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತ ದೇಶದ ಗೌರವ ಪಾತಾಳಕ್ಕಿಳಿದಿದೆ. ಒಟ್ಟು 180 ದೇಶಗಳ 2022ರ ಸಮೀಕ್ಷೆಯ ಪ್ರಕಾರ (ಎನ್‌ವಿರಾನ್‌ಮೆಂಟಲ್ ಪರ್ಫಾರ್ಮೆನ್ಸ್ ಇಂಡೆಕ್ಸ್-ಇಪಿಐ) ಭಾರತ ಕೊನೆಯ ಸ್ಥಾನದಲ್ಲಿದೆ. ದೇಶದ ರಕ್ಷಣೆಗೆಂದು ಖಂಡಾಂತರ ಕ್ಷಿಪಣಿಗಳನ್ನು ರೂಪಿಸಿ, ಮಂಗಳಲೋಕಕ್ಕೆ ಯಂತ್ರಗಳನ್ನು ಹಾರಿಬಿಟ್ಟು, ಆಕಾಶದೆತ್ತರದ ಪ್ರತಿಮೆಗಳನ್ನು ನಿಲ್ಲಿಸುತ್ತಿರುವಾಗ ನೆಲ ಮಟ್ಟದಲ್ಲಿ ಕೊಳೆಹಳ್ಳಗಳ ನಡುವಣ ತಿಪ್ಪೆದಿಬ್ಬಗಳ ಮೇಲೆ ಆ ಕೀರ್ತಿ ಪತಾಕೆಯನ್ನು ಊರಬೇಕೆ?

ದಿನದ ಟ್ವೀಟ್

ಇದ್ದಾಗ- ಇಲ್ಲದಿದ್ದಾಗ



ಸಿನಿಮಾ ತಾರೆಯರು ಪ್ರಾಯೋಜಕತ್ವ ವಹಿಸಬೇಕು ಎಂದು ಜನ ನಿರೀಕ್ಷಿಸುತ್ತಾರೆ, ಸಿನಿಮಾ ಹಿಟ್ ಆದಾಗ ಹಣ ಮಾಡುವ ಕಾರಣ ದೇಣಿಗೆ ನೀಡುವಂತೆಯೂ ಕೆಲವರು ಬೇಡಿಕೆ ಇಡುತ್ತಾರೆ. ದಾನ ಅಥವಾ ಪ್ರಾಯೋಜಕತ್ವ ಕಡ್ಡಾಯವಲ್ಲದಿದ್ದರೂ ಹೆಚ್ಚಿನ ತಾರೆಯರು ತಮ್ಮ ಮಿತಿಯಲ್ಲಿ ಇದನ್ನೆಲ್ಲ ಮಾಡುತ್ತಿದ್ದಾರೆ. ಆದರೆ ಸಿನಿಮಾ ಸೋತಾಗ ಈ ಮಂದಿ ಅಂತಹ ತಾರೆಯರ ಬೆನ್ನಿಗೆ ನಿಲ್ಲುವರೇ?

ವಿನ್ಯಾಸ್ ಶೆಟ್ಟಿ, ಎಂಜಿನಿಯರ್

ಕಿಡಿನುಡಿ



ಗುಂಡಿ ಬಿದ್ದ ರಸ್ತೆಗಳಲ್ಲಿ ನಾವು ಅನಿವಾರ್ಯವಾಗಿ 'ಲೋ ಗೇರ್'ನಲ್ಲಿ ವಾಹನ ಚಲಾಯಿಸುವುದರಿಂದ ಪ್ರತಿವರ್ಷ ಎಷ್ಟು ಲಕ್ಷ ಲೀಟರ್ ಇಂಧನ ವ್ಯರ್ಥವಾಗುತ್ತಿದೆ ಎಂಬುದನ್ನು ಯಾರಾದರೂ ಲೆಕ್ಕ ಹಾಕಿದ್ದಾರೆಯೇ?

ಆನಂದ್ ರಂಗನಾಥನ್, ಲೇಖಕ

50 ವರ್ಷಗಳ ಹಿಂದೆ

ಮಂಗಳವಾರ, 31-10-1972

● **ಪತ್ರಿಕೆಗಳ ಪುಟ ಮಿತಿ: ಕೇಂದ್ರ ಸರ್ಕಾರದ ಆಜ್ಞೆ- ಸುಪ್ರೀಂ ಕೋರ್ಟ್‌ನಿಂದ ರದ್ದು**

ನವದೆಹಲಿ, ಅಕ್ಟೋಬರ್ 30- ವೃತ್ತ ಪತ್ರಿಕೆಗಳ ಪುಟಸಂಖ್ಯೆಯ ಮೇಲೆ ಮಿತಿ ಹೇರುವ ಕೇಂದ್ರ ಸರ್ಕಾರದ 1972-73ನೇ ಸಾಲಿನ ನ್ಯೂಸ್ ಪ್ರಿಂಟ್ ಹತೋಟಿ ಆಜ್ಞೆಯನ್ನು ಸುಪ್ರೀಂ ಕೋರ್ಟ್ ಇಂದು ರದ್ದುಪಡಿಸಿತು.

ವೃತ್ತಪತ್ರಿಕೆಗಳ ಪುಟ ಸಂಖ್ಯೆಯನ್ನು ಹತ್ತು ಪುಟಗಳಿಗೆ ಮಿತಿಗೊಳಿಸುವ ಮುದ್ರಣ ಕಾಗದ ನಿಯಂತ್ರಣಾಜ್ಞೆಯನ್ನು ರದ್ದುಗೊಳಿಸಿದ ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠ, ಇಂಥ ಮಿತಿ ಹೇರುವುದರಿಂದ ಸಂವಿಧಾನದಲ್ಲಿ ಭರವಸೆ ನೀಡಲಾಗಿರುವ ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಉಲ್ಲಂಘನೆಯಾಗುವುದೆಂದು ಬಹುಮತದ ತೀರ್ಪಿನಲ್ಲಿ ತಿಳಿಸಿದೆ.

ಸುಪ್ರೀಂ ಕೋರ್ಟ್‌ನ ಬಹುಮತದ ಈ ತೀರ್ಪನ್ನು ಶ್ರೇಷ್ಠ ನ್ಯಾಯಮೂರ್ತಿ ಎಸ್. ಎಂ. ಸಿಕ್ರಿ ಮತ್ತು ನ್ಯಾಯಮೂರ್ತಿಗಳಾದ ಜಗನ್ಮೋಹನ ರೆಡ್ಡಿ, ಎ.ಎನ್. ರಾಯ್ ಅವರಿದ್ದ ಪೀಠ ಇಂದು ನೀಡಿತು.

● **ಅಭಿವೃದ್ಧಿ ತೆರಿಗೆ ಕಾನೂನು ಮಾರ್ಪಾಡಿಗೆ ಸರ್ಕಾರದ ತೀವ್ರ ಆಲೋಚನೆ: ಅರಸು**

ಹೊಸಪೇಟೆ, ಅಕ್ಟೋಬರ್ 30- 'ದೇಶದಲ್ಲಿ ಅನೇಕ ಬೃಹತ್ ಯೋಜನೆಗಳು ನಿರ್ಮಾಣವಾಗಿ ಅನೇಕ ವರ್ಷಗಳು ಕಳೆದಿದ್ದರೂ ಸರ್ಕಾರಕ್ಕೆ ಸರಿಯಾದ ಪ್ರತಿಫಲ ದೊರೆಯುತ್ತಿಲ್ಲ. ಆದರೆ ರೈತರ ಆದಾಯವು ಅನೇಕ ಪಟ್ಟು ಹೆಚ್ಚಿದೆ. ಜಮೀನಿನ ಬೆಲೆ ಒಂದೇ ಸಮನಾಗಿ ಏರುತ್ತಿದೆ' ಎಂದು ಮುಖ್ಯಮಂತ್ರಿ ದೇವರಾಜ ಅರಸು ತಿಳಿಸಿದರು.

ಈ ಲೋಪವನ್ನು ಹೋಗಲಾಡಿಸಿ, ಹೊಸ ಯೋಜನೆಗಳನ್ನು ಕೈಗೊಳ್ಳಲು ಸರ್ಕಾರಕ್ಕೆ ಸಾಧ್ಯವಾಗುವಂತೆ ಆದಾಯವನ್ನು ಪಡೆಯಲು ಅಭಿವೃದ್ಧಿ ತೆರಿಗೆ ಕಾನೂನನ್ನು ಮಾರ್ಪಾಡು ಮಾಡುವ ಬಗ್ಗೆ ರಾಜ್ಯ ಸರ್ಕಾರ ತೀವ್ರವಾಗಿ ಆಲೋಚಿಸುತ್ತಿದೆಯೆಂದು ಅವರು ಪ್ರಕಟಿಸಿದರು.

ಮುಖ್ಯಮಂತ್ರಿಗಳು ನಿನ್ನೆ ಹೊಸಪೇಟೆಯಲ್ಲಿ 76.5 ಲಕ್ಷ ರೂ. ವೆಚ್ಚದ ಒಳಚರಂಡಿ ಯೋಜನೆಯ ಶಂಕುಸ್ಥಾಪನೆಯನ್ನು ನೆರವೇರಿಸಿ ಮಾತನಾಡುತ್ತಿದ್ದರು.

ಸರ್ಕಾರವು ರಾಜ್ಯದಲ್ಲಿ ದೊರೆಯುವ ಎಲ್ಲ ಸಂಪನ್ಮೂಲಗಳನ್ನು ಉಪಯೋಗಿಸಿಕೊಳ್ಳುವ ಇಚ್ಛೆಯನ್ನು ಹೊಂದಿದ್ದು, ಅವುಗಳ ಉಪಯೋಗವನ್ನು ಹೊಂದುವವರ ಸಹಕಾರ ಈ ದಿಸೆಯಲ್ಲಿ ಅಗತ್ಯವೆಂದು ಮುಖ್ಯಮಂತ್ರಿಗಳು ಹೇಳಿ, ಸರ್ಕಾರದ ಹಣ ಹೂಡಿಕೆಗೆ ತಕ್ಕ ಪ್ರತಿಫಲ ದೊರೆಯದಿದ್ದರೆ ಹೊಸ ಯೋಜನೆಗಳಿಗೆ ಹಣವನ್ನೊದಗಿಸಲು ಕಷ್ಟವಾಗುವುದೆಂದು ತಿಳಿಸಿದರು.

● **ದಾರಿದ್ರ್ಯ ನಿವಾರಣೆ: ಆರ್ಥಿಕ ಸ್ವಾವಲಂಬನೆ ಸಾಧನೆಗೆ ಆದ್ಯತೆ**

ನವದೆಹಲಿ, ಅಕ್ಟೋಬರ್ 30- ಬಡತನ ನಿವಾರಣೆ ಮತ್ತು ಆರ್ಥಿಕ ಸ್ವಾವಲಂಬನೆ ಸಾಧಿಸುವುದೇ ಮೂಲಗುರಿಯಾಗಿ ಇರುವ ಐದನೇ ಯೋಜನೆ ಧೋರಣೆ ಕುರಿತ ದಾಖಲೆ ಪತ್ರವನ್ನು ಯೋಜನಾ ಆಯೋಗ ಇಂದು ಅಂತಿಮವಾಗಿ ಸಿದ್ಧಗೊಳಿಸಿತು.

ಸಮಗ್ರವಾಗಿ ಶೇ 5.5ರಷ್ಟು ಅಭಿವೃದ್ಧಿ ಸಾಧಿಸುವ ಗುರಿಯನ್ನು ಈ ಯೋಜನೆಯಲ್ಲಿ ರೂಪಿಸಲಾಗಿದೆ. 1974-79ನೆಯ ಈ ಯೋಜನೆ ಅವಧಿಯಲ್ಲಿ 1971-72ರ ಬೆಲೆಯಂತೆ 51,165 ಕೋಟಿ ರೂ. ವೆಚ್ಚದ ದಾಖಲೆ ಪತ್ರವನ್ನು ಪ್ರಧಾನಿ ಇಂದಿರಾ ಗಾಂಧಿ ಅವರ ಅಧ್ಯಕ್ಷತೆಯಲ್ಲಿ ಸೇರಿದ ಆಯೋಗದ ಸಭೆಯು ಅಂಗೀಕರಿಸಿತು.

ನ್ಯಾಯಾಂಗ, ಸುದ್ದಿ ನಿಯಂತ್ರಣ ಪ್ರಾಧಿಕಾರವು ದ್ವೇಷ ಭಾಷೆಗೆ ಕೊನೆ ಹಾಡುವ ಹಾದಿಯನ್ನಂತೂ ತೆರೆದಿವೆ

ದ್ವೇಷ ಬಿತ್ತುವ ಭಾಷೆಗೆ ಮದ್ದುಂಟೆ?



ವಿಶ್ಲೇಷಣೆ

ನಟರಾಜ್ ಹುಳಿಯಾರ್

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್ ಹಾಗೂ ಕೆ.ಎಂ. ಜೋಸೆಫ್ ಅವರ ಪೀಠದೆದುರು ವಕೀಲ ಕಪಿಲ್ ಸಿಬಲ್ ಅವರು ಕಳೆದ ವಾರ ದ್ವೇಷ ಭಾಷಣದ ತುಣುಕುಗಳನ್ನು ಓದುತ್ತಿದ್ದಾಗ, 'ಧರ್ಮದ ಹೆಸರಿನಲ್ಲಿ ನಾವು ಎಲ್ಲಿಗೆ ಬಂದು ನಿಂತಿದ್ದೇವೆ?' ಎಂಬ ವಿಷಾದದ ನಿಟ್ಟುಸಿರು ನ್ಯಾಯಮೂರ್ತಿ ಜೋಸೆಫ್ ಅವರ ಬಾಯಿಂದ ಹೊರಬಿತ್ತು. 'ದ್ವೇಷ ಭಾಷಣ ಮಾಡುವವರ ವಿರುದ್ಧ ಯಾರೂ ದೂರು ನೀಡದಿದ್ದರೂ ಪೊಲೀಸರೇ ಪ್ರಕರಣ ದಾಖಲಿಸಬೇಕು; ಇಲ್ಲದಿದ್ದರೆ ನ್ಯಾಯಾಂಗ ನಿಂದನೆಗೆ ಗುರಿಯಾಗಬೇಕಾಗುತ್ತದೆ' ಎಂದು ಸುಪ್ರೀಂ ಕೋರ್ಟ್ ಪೀಠವು ದೆಹಲಿ, ಉತ್ತರ ಪ್ರದೇಶ, ಉತ್ತರಾಖಂಡದ ಪೊಲೀಸರಿಗೆ ಆದೇಶ ನೀಡಿತು. 'ದ್ವೇಷ ಭಾಷಣಗಳ ಈ ಹಿಂದಿನ ಪ್ರಕರಣಗಳ ಕುರಿತಂತೆ ಕೈಗೊಂಡಿರುವ ಕ್ರಮಗಳ ವಿವರಗಳನ್ನು ಕೊಡಿ' ಎಂದು ಪೀಠ ಈ ಮೂರೂ ರಾಜ್ಯಗಳಿಗೆ ಹೇಳಿತು.

ಸುಪ್ರೀಂ ಕೋರ್ಟ್ ಆದೇಶ ಬಂದ ಐದಾರು ದಿನಗಳಲ್ಲೇ, ಉತ್ತರಪ್ರದೇಶದ ರಾಂಪುರದ ಸಮಾಜವಾದಿ ಪಕ್ಷದ ಶಾಸಕ ಅಜಂ ಖಾನ್ ಅವರು 2019ರಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿ ವಿರುದ್ಧ ಮಾಡಿದ್ದ ದ್ವೇಷ ಭಾಷಣಕ್ಕಾಗಿ ರಾಂಪುರ ಕೋರ್ಟು ಮೂರು ವರ್ಷ ಜೈಲು ಶಿಕ್ಷೆ ವಿಧಿಸಿತು. ಭಾರತೀಯ ದಂಡ ಸಂಹಿತೆಯ ಸೆಕ್ಷನ್ 153ಎ, 505 ಹಾಗೂ 1951ರ ಪ್ರಜಾಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 125ರ ಅಡಿ ಈ ಶಿಕ್ಷೆ ವಿಧಿಸಲಾಯಿತು. ಖಾನ್ ಶಾಸಕತ್ವ ರದ್ದಾಯಿತು. ಇಂಥ ಶಿಕ್ಷೆ ಇತರ ನಾಯಕರಿಗೂ ವಿಸ್ತರಿಸುವಂತಾದರೆ ಆಚಾರವಿಲ್ಲದ ನಾಲಗೆಗಳು ಹಿಂಜರಿಯಬಹುದೇನೋ.

ರಾಂಪುರದ ತೀರ್ಪು ಬಂದ ದಿನವೇ ನ್ಯೂಸ್ ಬ್ರಾಡ್‌ಕಾಸ್ಟಿಂಗ್ ಆ್ಯಂಡ್ ಡಿಜಿಟಲ್ ಸ್ಟ್ಯಾಂಡರ್ಡ್ಸ್ ಅಥಾರಿಟಿಯು (ಎನ್‌ಬಿಡಿಎಸ್‌ಎ) 'ನ್ಯೂಸ್ 18 ಇಂಡಿಯಾ' ಹಿಂದಿ ಸುದ್ದಿವಾಹಿನಿಗೆ ₹ 50,000 ದಂಡ ವಿಧಿಸಿತು. ಕರ್ನಾಟಕದ ಹಿಜಾಬ್ ಪ್ರಕರಣಕ್ಕೂ ಅಲ್ ಕೈದಾ ಸಂಘಟನೆಗೂ ನಂಟು ಕಲ್ಪಿಸುವಂತಹ ಚರ್ಚೆಯನ್ನು ಈ ವಾಹಿನಿ ಪ್ರಸಾರ ಮಾಡಿ, ಕೋಮು ಸಾಮರಸ್ಯಕ್ಕೆ ಧಕ್ಕೆಯುಂಟು ಮಾಡಿದೆ ಎಂಬ ದೂರು ಸಲ್ಲಿಕೆಯಾಗಿತ್ತು.

2020ರಲ್ಲಿ ಸುದ್ದಿವಾಹಿನಿಗಳ ದ್ವೇಷ ಭಾಷಣಗಳ ಬಗ್ಗೆ ಹರಿಹಾಯ್ದಿದ್ದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರು ನ್ಯೂಸ್ ಬ್ರಾಡ್‌ಕಾಸ್ಟರ್ಸ್ ಅಸೋಸಿಯೇಷನ್ ಅನ್ನು ಛೇಡಿಸುತ್ತಾ 'ನಿಮ್ಮದು ಹಲ್ಲಿಲ್ಲದ ಸಂಸ್ಥೆ' ಎಂದಿದ್ದರು. ನಂತರದಲ್ಲಿ ಅದೇ ಅಸೋಸಿಯೇಷನ್ ರೂಪಿಸಿದ ಎನ್‌ಬಿಡಿಎಸ್‌ಎಯು ಕೆಲವು ವಾಹಿನಿಗಳಿಗೆ ಛೀಮಾರಿ ಹಾಕಿ, ದಂಡ ವಿಧಿಸಿತ್ತು. ಇಂಥ ದೂರುಗಳನ್ನು ಸಾರ್ವಜನಿಕರು ಕೂಡ ನೀಡಬಹುದಾದ ಸಾಧ್ಯತೆಯನ್ನು ಎನ್‌ಬಿಡಿಎಸ್‌ಎ ಕ್ರಮಗಳು ತೆರೆದಿಟ್ಟಿವೆ. ಆದರೆ ಇಂಥ ಕೆಲವೇ ನಡೆಗಳು ದ್ವೇಷಭಾಷೆಯನ್ನೇ ಉಸಿರಾಡುತ್ತಿರುವ ವಿಕೃತರಿಗೆ ಕಡಿವಾಣ ಹಾಕಬಲ್ಲವೇ? ರಾಜಕೀಯ ಲಾಭಕ್ಕಾಗಿ ಕೋಮು ಧ್ರುವೀಕರಣ ಮಾಡಿ, ಕೋಮು ದ್ವೇಷಕ್ಕೆ ಕುಮ್ಮಕ್ಕು ಕೊಡುತ್ತಿರುವ ರಾಜ್ಯಗಳಿಗೆ ಸುಪ್ರೀಂ ಕೋರ್ಟ್ ಕೊಟ್ಟಿರುವ ನಿರ್ದೇಶನ ಕರ್ನಾಟಕಕ್ಕೂ ಅನ್ವಯವಾಗುವ ಕಾಲ ಹತ್ತಿರದಲ್ಲಿದೆಯೇ?

ಈಚಿನ ವರ್ಷಗಳಲ್ಲಿ ದೇಶದಲ್ಲಿ ದ್ವೇಷ ಭಾಷಣ ವಿಕಾರಿಗಳು ಹೆಚ್ಚುತ್ತಿರುವುದಕ್ಕೆ ಕಾರಣ ಮಾನಸಿಕ ಕಾಯಿಲೆ, ಬಿಟ್ಟಿ ಪ್ರಚಾರ, ಹಣಬಲ ಮತ್ತು ಕುರುಡು ದ್ವೇಷ. ಮುಸ್ಲಿಮರ ವಿರುದ್ಧ ದ್ವೇಷ ಭಾಷಣ ಹೆಚ್ಚುತ್ತಿರುವುದರ ಹಿಂದೆ ಮತೀಯ ಶಕ್ತಿಗಳ, ಸರ್ಕಾರಗಳ ಹಾಗೂ ರಾಜಕೀಯ ಪಕ್ಷಗಳ ಕುಮ್ಮಕ್ಕಿರುವುದು ಎಲ್ಲರಿಗೂ ಗೊತ್ತಿದೆ. ಇದನ್ನೆಲ್ಲ ಆನಂದಿಸುವ ಧೂರ್ತರ ಸಂಖ್ಯೆಯೂ ಹೆಚ್ಚುತ್ತಿದೆ. ಬೆರಳೆಣಿಕೆಯಷ್ಟು ದುರುಳರಿಂದ ಸಜ್ಜನರಿಗೂ ಹಬ್ಬುತ್ತಿರುವ ಈ ಮನೋರೋಗಕ್ಕೆ ಕೋರ್ಟುಗಳು ಮಾತ್ರವೇ ಚಿಕಿತ್ಸೆ ನೀಡಬಲ್ಲವೇ?

ಇವತ್ತು ದ್ವೇಷ ಭಾಷೆಯ ವಾಚಾಳಿ ಮನಸ್ಸು ಕುಟುಂಬ, ಶಾಲೆ, ದೇವರು, ಧರ್ಮ, ವಿಚಾರ ಯಾವುದರಿಂದಲೂ ಸದ್ಬುದ್ಧಿ ಪಡೆಯದಂಥ ಸ್ಥಿತಿ ತಲುಪಿದೆ. ರಾಜಕೀಯ- ಧರ್ಮಗಳ ನೈತಿಕವಲ್ಲದ ನಂಟು ಜನರ ಮನಸ್ಸನ್ನು ರಾಡಿಯೆಬ್ಬಿಸಿ, ಹಾದಿಬೀದಿಗಳಲ್ಲಿ ವಿನಾಕಾರಣ ಜನರು ಜಗಳಕ್ಕಿಳಿಯುವ ಸ್ಥಿತಿ ಸೃಷ್ಟಿಯಾಗಿದೆ. ರಾಜಕಾರಣಿಗಳು ಚುನಾವಣೆಗಾದರೂ ಜನರೆದುರು ಬರಬೇಕಾಗುವುದರಿಂದ, ಒಳಗೊಳಗೇ ದ್ವೇಷದ ಕಿಡಿ ಹೊತ್ತಿಸಿ, ಮೆಲ್ಲಗೆ ಹಿಂದೆ ಸರಿಯುತ್ತಾರೆ; ಬೆಂಕಿ ಹಬ್ಬಿಸಿ ಸಿಕ್ಕಿ ಬೀಳುವವರು ಅವರ ಹುಂಬ ಅನುಯಾಯಿಗಳು. 'ಸರ್ಕಾರದ ಬೆಂಬಲವಿದೆ' ಎಂದು ದುಡುಕುವ ಇಂಥವರ ಠೇಂಕಾರಕ್ಕೆ ಸುಪ್ರೀಂ ಕೋರ್ಟ್ ಪರಿಣಾಮಕಾರಿ ಮದ್ದನ್ನೇ ಅರೆಯಲೆತ್ನಿಸಿದೆ.

ಸ್ವಾತಂತ್ರ್ಯಪೂರ್ವದಲ್ಲಿ, ಭಾರತ ವಿಭಜನೆಯ ಕಾಲದಲ್ಲಿ, ಲಂಗುಲಗಾಮಿಲ್ಲದ ವಸಾಹತು ಆಡಳಿತದಲ್ಲಿ ಕೋಮು ದ್ವೇಷ ಭಾಷಣ ಮಾಡುತ್ತಿದ್ದವರಿಗೆ ಅಷ್ಟಿಷ್ಟು ಕಾರಣಗಳಿದ್ದವು. ಹಲವು ವರ್ಷ ಬ್ರಿಟಿಷ್ ಶತ್ರುವಿನ ವಿರುದ್ಧ ಸಿಟ್ಟಿನ, ಸಕಾರಣವಾದ ದ್ವೇಷದ ಭಾಷಣ ಮಾಡಿ ರೂಢಿಯಾಗಿದ್ದ ಅನೇಕ ನಾಯಕರು ವಿಭಜನೆಯ ಘಟ್ಟದಲ್ಲಿ ಹಿಂದೂ, ಮುಸ್ಲಿಂ ಎಂದು ಒಡೆದುಹೋದರು; ಬ್ರಿಟಿಷರ ವಿರುದ್ಧ ಕಾರುತ್ತಿದ್ದ ಬೆಂಕಿಯನ್ನೇ ಪರಸ್ಪರರ ವಿರುದ್ಧ ಕಾರಿಕೊಳ್ಳತೊಡಗಿದರು. ವಿಭಜನೆಯ ಪರವಾಗಿದ್ದ ಮುಸ್ಲಿಂ ನಾಯಕರು, ವಿಭಜನೆಗೆ ವಿರೋಧವಾಗಿದ್ದ ಹಿಂದೂ ನಾಯಕರ ವಿರುದ್ಧವಷ್ಟೇ ಅಲ್ಲ, ಮೌಲಾನಾ ಆಜಾದ್ ಥರದ ಹಿರಿಯ ಮುಸ್ಲಿಂ ನಾಯಕರ ವಿರುದ್ಧವೂ ಹೀನ ಭಾಷೆ ಬಳಸುತ್ತಿದ್ದರು. ಭಾರತ ವಿಭಜನೆಯ ಕಾಲದ ಹತ್ಯಾಕಾಂಡಗಳ ನಂತರದ ವರ್ಷಗಳಲ್ಲಿ ಈ ದ್ವೇಷಭಾಷೆ ಮರುಕಳಿಸುತ್ತಿದ್ದುದಕ್ಕೆ ಎರಡೂ ಸಮುದಾಯಗಳು ಹಿಂಸೆಯನ್ನು ಹತ್ತಿರದಿಂದ ನೋಡಿದ್ದು ಕೂಡ ಕಾರಣವಾಗಿತ್ತು.


ಆ ಘಟ್ಟದಲ್ಲಿ ದೇಶ ಕಟ್ಟುವ ಹೊಣೆ ಹೊತ್ತ ನೆಹರೂಯುಗದ ರಾಜಕಾರಣಿಗಳು, ಸಾಮಾಜಿಕ ನಾಯಕರು, ಧರ್ಮಗುರುಗಳು ಹಾಗೂ ಪೊಲೀಸರು ಆ ದ್ವೇಷವನ್ನು ತಹಬಂದಿಗೆ ತಂದರು. ಉದಾರವಾದಿ ಪ್ರಧಾನಿ ನೆಹರೂ ಅವರಿಂದ ಹಿಡಿದು ವಿರೋಧ ಪಕ್ಷಗಳ ನಾಯಕರವರೆಗೂ ಬಹುತೇಕರು ದೇಶದ ಏಕತೆಯನ್ನೇ ಗುರಿಯಾಗಿಟ್ಟುಕೊಂಡು ಮಾತಾಡುತ್ತಿದ್ದರು; ನಿತ್ಯದ ಜನಜೀವನದಲ್ಲಿ ದ್ವೇಷಭಾಷೆ ಹಬ್ಬದಂತೆ ನೋಡಿಕೊಳ್ಳುತ್ತಿದ್ದರು. ಸಾರ್ವಜನಿಕವಾಗಿಯಾದರೂ ಒಡಕಿನ ಭಾಷೆ ಬಳಸದೆ, ಮರ್ಯಾದೆಯಿಂದ ಮಾತಾಡಬೇಕೆಂಬ ಮೇಲ್ಪಂಕ್ತಿ ಹಾಕಿಕೊಟ್ಟರು. ಅಂದು ಕೂಡ ಕೋಮು ಸಂಘಟನೆಗಳು ಒಳಗೊಳಗೇ ದ್ವೇಷ ಭಾಷೆಯನ್ನು ಬಿತ್ತುತ್ತಿದ್ದರೂ, ಸಾರ್ವಜನಿಕವಾಗಿ ನಿರ್ಲಜ್ಜವಾಗಿ ಮಾತಾಡುವುದು ಕಷ್ಟವಿತ್ತು. ಸಾಮಾಜಿಕ ಕ್ರಾಂತಿಯ ಗುರಿ ಹೊತ್ತು ಉಗ್ರ ಭಾಷೆ ಬಳಸುತ್ತಿದ್ದ ನಾಯಕರು ಕೂಡ ದ್ವೇಷ ಭಾಷಣಕ್ಕೆ ತಿರುಗುತ್ತಿರಲಿಲ್ಲ. ಚುನಾವಣೆಯ ಕಾಲದಲ್ಲಿ ಉಬ್ಬಾಯಿಸಿ ಮಾತಾಡುತ್ತಿದ್ದ ರಾಜಕಾರಣಿಗಳ ನಾಲಗೆಯೂ ದಕ್ಷ ಚುನಾವಣಾ ಆಯೋಗದ ಹದ್ದುಬಸ್ತಿನಿಂದಾಗಿ ಹತೋಟಿಯಲ್ಲಿತ್ತು.

ಇವೆಲ್ಲದರ ಜೊತೆಗೆ, ದೇಶದ ಸಾಹಿತ್ಯ ವಲಯ ಹಾಗೂ ಸಾಂಸ್ಕೃತಿಕ ವಲಯವು ಎಲ್ಲ ಸಮುದಾಯಗಳನ್ನೂ ಬೆಸೆಯುವ ಭಾಷೆಯನ್ನೇ ಬಳಸುತ್ತಿದ್ದವು. ಶಾಲೆ, ಕಾಲೇಜುಗಳು ಬಹುಮಟ್ಟಿಗೆ ಸಾಮರಸ್ಯದ ವಾತಾವರಣವನ್ನೇ ಬೆಳೆಸುತ್ತಿದ್ದವು. ಮಧ್ಯಮ ವರ್ಗಗಳಲ್ಲಿ ಜಾತೀಯತೆ, ಅಸ್ಪೃಶ್ಯತೆಯು ಇದ್ದವಾದರೂ ಕೋಮು ದ್ವೇಷ ತೀರಾ ಕೆರಳಿರಲಿಲ್ಲ. ಜಾತಿಪೀಡಿತ ಹಳ್ಳಿಗಳಲ್ಲೂ ವಿಭಿನ್ನ ಧಾರ್ಮಿಕ ಸಮುದಾಯಗಳು ಒಟ್ಟಿಗೇ ಬದುಕುತ್ತಿದ್ದವು. ಕುಟುಂಬ, ಕಚೇರಿ, ರಾಜಕಾರಣ, ಪತ್ರಿಕೋದ್ಯಮ, ಸಾರ್ವಜನಿಕ ವಲಯಗಳಲ್ಲಿ ದ್ವೇಷ ಭಾಷೆಗೆ ಹೆಚ್ಚಿನ ಮನ್ನಣೆ ಇರಲಿಲ್ಲ. ಊರಿನಲ್ಲಿ ಮರ್ಯಾದೆಯಿಂದ ಬಾಳಬೇಕೆಂಬ ಕನಿಷ್ಠ ಲಜ್ಜೆ, ಒತ್ತಡ ಹಾಗೂ ಅನಿವಾರ್ಯವು ಕೂಡ ದ್ವೇಷಭಾಷಿಕರಿಗಿತ್ತು.



ಸ್ವಾತಂತ್ರ್ಯಾನಂತರ ಸ್ವಾತಂತ್ರ್ಯ ಚಳವಳಿಯ ಕಾಲದ ಒಳಿತಿನ ಭಾವವನ್ನು ಮತ್ತೆ ಹಬ್ಬಿಸಿ, ಮನಸ್ಸುಗಳನ್ನು ಒಗ್ಗೂಡಿಸಿದ ಭಾರತದಲ್ಲಿ ಈಗ ವಿಭಜನೆಯ ಕಾಲದಂಥ ಒಡಕನ್ನು ಯಾಕೆ, ಯಾರು, ವಿನಾಕಾರಣವಾಗಿ ಹುಟ್ಟು ಹಾಕುತ್ತಿದ್ದಾರೆ? ಯಾರು ಅದರ ಲಾಭ ಪಡೆಯಲೆತ್ನಿಸುತ್ತಿದ್ದಾರೆ? ಈ ಸತ್ಯ ಸಮಾಜಕ್ಕೆ ಅರಿವಾದಾಗ, ಮತದಾರರು ಎಚ್ಚರವಾಗತೊಡಗಿದಾಗ ದ್ವೇಷ ಭಾಷೆಗೆ ಕಡಿವಾಣ ಬೀಳುತ್ತದೆ. ಕೋಮುವಾದಕ್ಕೆ ಸರ್ಕಾರಗಳ ಬೆಂಬಲ ನಿಂತ ತಕ್ಷಣ ದ್ವೇಷದ ದನಿ ಅಡಗುತ್ತದೆ. ಕೋರ್ಟುಗಳ ಕ್ಷಿಪ್ರ ಮಧ್ಯಪ್ರವೇಶವೂ ಪರಿಸ್ಥಿತಿಯನ್ನು ಹತೋಟಿಯಲ್ಲಿ ಇಡಬಲ್ಲದು. ಅಷ್ಟೇ ಮುಖ್ಯವಾಗಿ, 'ಮನೆಯೇ ಮೊದಲ ಪಾಠಶಾಲೆ'ಯಾಗಿ, ಅಮ್ಮ, ಅಕ್ಕ, ತಂಗಿ, ಪತ್ನಿ... ಈ 'ತಾಯಿ ಸಂಕುಲ'ವು ಈ ದ್ವೇಷಭಾಷಿಕರ ಮಿದುಳು, ನಾಲಗೆಗಳನ್ನು ತಿದ್ದಬೇಕಾಗಿರುವುದು ಕೂಡ ಅತ್ಯಗತ್ಯವಾಗಿದೆ.

ಚುರುಮುರಿ



ಕೇಜ್ರಿ ಅರ್ಥಶಾಸ್ತ್ರ

• ಸುಮಂಗಲಾ

'ಮುಂದಿನ ವರ್ಸದ ಅರ್ಥಶಾಸ್ತ್ರದ ನೊಬೆಲ್ ಪ್ರೈಜು ನಮ್ಮ ದೇಶಕ್ಕೇ ಬರೂದು ಗ್ಯಾರಂಟಿ' ಬೆಕ್ಕಣ್ಣ ಕುಣಿಯುತ್ತ ಹೇಳಿತು.

'ಏನಲೇ ಕಣಿ ಹೇಳಾಕೆ ಶುರು ಮಾಡೀಯಲ್ಲ... ಯಾರಿಗೆ ಬರತದ?' ನನಗೆ ಅಚ್ಚರಿಯಾಯಿತು.

'ಕೇಜ್ರಿ ಅಂಕಲ್ಲಿಗೆ! ಅಂವಾ ಎಷ್ಟ್ ಶಾಣೇ ಇದ್ದಾನ. ದೇಶದ ಆರ್ಥಿಕತೆ ಹೆಂಗ್ ಸುಧಾರಣೆ ಮಾಡೂದು ಅಂತ ಅರ್ಥಶಾಸ್ತ್ರಜ್ಞರಿಗೂ ಹೊಳಿಲಾರದ್ದು ಅಂವಂಗ ಹೊಳದೈತಿ. ನೋಟಿನ ಮ್ಯಾಗೆ ಲಕ್ಷ್ಮಿ, ಗಣಪತಿ ಫೋಟೊ ಛಾಪಿಸಿದ್ರ ಸಾಕು, ರೂಪಾಯಿ ಬೆಲೆ ಡಾಲರ್‌ಗಿಂತ ಮ್ಯಾಗೆ ಆಕಾಶಕ್ಕೆ ನೆಗಿತೈತೆ ಅಂತ ಹೇಳ್ಯಾನ' ಎಂದು ಅಭಿಮಾನದಿಂದ ಉಲಿಯಿತು.

'ನೊಬೆಲ್ ಅಲ್ಲಲೇ, ಅಂವಂಗ ಇಗ್ನೊಬೆಲ್ ಅವಾರ್ಡ್ ಕೊಡತಾರ. ನೋಟಿನ ಮ್ಯಾಗೆ ದೇವರ ಚಿತ್ರ ಛಾಪಿಸಿದ ತಕ್ಷಣ ಆರ್ಥಿಕತೆ ಸುಧಾರಿಸತಿದ್ದರ, ಎಲ್ಲಾ ದೇಶಗಳು ತಮಗೆ ಬೇಕಾಗಿದ್ದ ದೇವರ ಚಿತ್ರ ಛಾಪಿಸಿ ಬಡತನ ಓಡಿಸತಿದ್ದವು'.

'ಆದ್ರೂ ಕಮಲಕ್ಕನ ಮನಿಯವ್ರಿಗೂ ಹೊಳೆಯಲಾರದ ಇಂಥ ಭಾರಿ ಐಡಿಯಾ ಅವಂಗ ಬರತದ ಅಂದ್ರ ಎಷ್ಟ್ ಮುಂದಾಲೋಚನೆ ಅದ ಅಂವಂಗ. 130 ಕೋಟಿ ಭಾರತೀಯರಿಗೆ ಮನಸ್ಸಿನಾಗೆ ಇದೇ ಆಸೆ ಐತೆ ಅಂದಾನ, ಅಂತೂ ನಿಮಗೆಲ್ಲಾರಿಗೆ ಒಬ್ಬ ಮಸ್ತ್ ಪ್ರತಿನಿಧಿ ಸಿಕ್ಕಂಗಾತು ಬಿಡು'.

'ದೇಶದ ಅಭಿವೃದ್ಧಿ ಬಗ್ಗೆ ಮುಂದಾಲೋಚನೆ ಅಲ್ಲಲೇ. ಚುನಾವಣೆ ಬಂತಲ್ಲ, ಅಂವಾ ವೋಟ್ ಬ್ಯಾಂಕ್ ರಾಜಕಾರಣದಾಗೆ ಕಮಲಕ್ಕನ ಮನಿಯವ್ರಿಗೆ ಸಡ್ಡು ಹೊಡಿತಿದಾನ. ಈ ಥರದ ಮತಬೇಟೆ ಆಟದಾಗೆ ಮೋದಿಮಾಮನ್ನೂ ಮೀರಿಸತಾನ'.

'ದಿಲ್ಲೀವಳಗ ಸರ್ಕಾರಿ ಸಾಲಿ ಸುಧಾರಣೆ ಮಾಡಿದ್ರಲ್ಲ ಸಿಸೋಡಿಯಾ, ಅತಿಶಿ ಅವರೆಲ್ಲಾರೂ ನಮ್ಮ ಕೇಜ್ರಿ ಅಂಕಲ್ಲು ಹೇಳಿದ್ದು ಬರೋಬ್ಬರಿ ಅಂತ ವಾದ ಮಾಡ್ಯಾರ. ಇವ್ರೆಲ್ಲಾರಿನ್ನೂ ಅವೇ ಸಾಲಿವಳಗ ಕುಂದ್ರಿಸಿ, ವಿಜ್ಞಾನ, ಅರ್ಥಶಾಸ್ತ್ರ ಎರಡೂ ಸರಿಯಾಗಿ ಕಲಿಸಬೇಕು ನೋಡು' ಎಂದು ಬೆಕ್ಕಣ್ಣ ಹಲ್ಲು ಕಿಸಿಯಿತು.

ಸಂಗತ

ಇದೋ ಬರಲಿದೆ 'ಸಂಭ್ರಮ ಶನಿವಾರ'

ತಿಂಗಳಿಗೊಮ್ಮೆ ಬ್ಯಾಗ್‌ರಹಿತ ದಿನವನ್ನಾಗಿ ಮಾಡುವ ನಿರ್ಧಾರವು ಶಾಲಾ ವಿದ್ಯಾರ್ಥಿಗಳಲ್ಲಿ ಸಂಭ್ರಮ ಮೂಡಿಸಿದೆ

• ಸದಾಶಿವ್ ಸೊರಟೂರು

ತರಗತಿಗೆ ಮೆಮೊ ಬಂದರೆ ಸಾಕು ಮಕ್ಕಳ ಕಣ್ಣಲ್ಲಿ ಹೊಳಪು. ರಜೆ ಇರಬಹುದೇ ಎನ್ನುವ ಆಸೆ. 'ನಾಳೆ ಒಂದು ಕಾರ್ಯಕ್ರಮ ಇದೆ ಸರಿಯಾದ ಸಮಯಕ್ಕೆ ಬನ್ನಿ' ಅಂದರೆ ಮರುಕ್ಷಣದ ಅವರ ಪ್ರಶ್ನೆ 'ಸಾರ್ ಬ್ಯಾಗ್ ತರಬೇಕಾ?' ಅವರ ಆ ದನಿಯು 'ಸಾರ್, ಈ ಬ್ಯಾಗಿನಿಂದ ಬಿಡುಗಡೆ ಎಂದು?' ಅಂದಂತೆ ಕೇಳಿಸುತ್ತದೆ. 'ಬ್ಯಾಗ್ ಬೇಡ ಹಾಗೆಯೇ ಬನ್ನಿ' ಅಂದರೆ ಸಾಕು ಅವರ ಖುಷಿ ನೂರ್ಮಡಿಗೊಳ್ಳುತ್ತದೆ. ರಜೆ ಎಂದೇನಾದರೂ ಗೊತ್ತಾದರಂತೂ ಅವರ ಸಂಭ್ರಮಕ್ಕೆ ಎಲ್ಲೆಯೇ ಇರುವುದಿಲ್ಲ.


ಬೆಳಗ್ಗೆ ಶಾಲೆಗೆ ಬರುವಾಗ ಭಾರವಾದ ಬ್ಯಾಗ್ ಮತ್ತು ಕೆಲವರು ಭಾರವಾದ ಮನಸ್ಸಿನಿಂದಲೇ ಬಂದಿರುತ್ತಾರೆ. ಶಾಲೆಯ ಅಂದಿನ ಕೊನೆಯ ಬೆಲ್ ಅವರ ಪಾಲಿನ ಇಂಪಾದ ಸಂಗೀತ. ಅವರ ಮುಖದಲ್ಲೊಂದು ಬಿಡುಗಡೆಯ ಭಾವ. ಕೆಲವು ಮಕ್ಕಳಂತೂ ಶಾಲೆಯು ಅವರನ್ನು ಅಟ್ಟಿಸಿಕೊಂಡು ಬರುತ್ತಿದೆಯೇನೋ ಎಂಬಂತೆ ಶಾಲೆ ಬಿಟ್ಟ ತಕ್ಷಣ ಓಡುತ್ತಿರುತ್ತಾರೆ.

ಶಾಲೆಯೆಂದರೆ ಸಿಲೆಬಸ್, ಶಾಲೆಯೆಂದರೆ ನಿರಂತರ ಓದು-ಬರಹ, ಶಾಲೆಯೆಂದರೆ ಮಣಭಾರದ ಬ್ಯಾಗ್, ಶಾಲೆಯೆಂದರೆ ಪರೀಕ್ಷೆಗಳು-ನಿಯೋಜಿತ ಕಾರ್ಯಗಳು, ಶಾಲೆಯೆಂದರೆ ಅಂಕಗಳು, ಶಾಲೆಯೆಂದರೆ ಒಂದು ನೌಕರಿ ಹಿಡಿಯಲು ಸವೆಸಲೇಬೇಕಾದ ಅನಿವಾರ್ಯದ ಮಾರ್ಗ ಎಂಬಂತೆ ಬಿಂಬಿಸಿ ಸತತವಾಗಿ ಮಕ್ಕಳನ್ನು ಕಾಡುವುದರಿಂದ, ಅದರಿಂದ ಬಿಡುಗಡೆ ಪಡೆಯಲು ಮಕ್ಕಳು ಹಂಬಲಿಸುತ್ತಿದ್ದಾರೆಯೇ ಎಂಬ ಪ್ರಶ್ನೆ ಮೂಡುತ್ತದೆ. ಶಾಲೆಯಲ್ಲಿ ಇದಲ್ಲದೆ ಮತ್ತೇನೋ ಬೇಕಿರಬಹುದೇ? ಹಂತ ಹಂತವಾಗಿ ಅವರನ್ನು ಸುಸ್ತು ಮಾಡುತ್ತಿರುವ ಬ್ಯಾಗಿನ ಭಾರವನ್ನು ತುಸು ಕಡಿಮೆ ಮಾಡಿದರೆ ಸರಿಹೋದೀತೇ? ಮಕ್ಕಳು ಕಲಿಯುತ್ತಿರುವ ವಿಷಯವನ್ನು ತುಸು ಭಿನ್ನವಾದ ರೀತಿಯಲ್ಲಿ ಏನಾದರೂ ಕಲಿಸಬಹುದೇ ಎಂಬಂಥ ಪ್ರಶ್ನೆಗಳು ಮೂಡುತ್ತವೆ. ಅದಕ್ಕೆ ಉತ್ತರ ಎಂಬಂತೆ ತಿಂಗಳಲ್ಲಿ ಒಂದು ದಿನ 'ಸಂಭ್ರಮ ಶನಿವಾರ' ಅನ್ನುವ ಕಾರ್ಯಕ್ರಮ ರಾಜ್ಯ ಶಿಕ್ಷಣ ಇಲಾಖೆಯಿಂದ ಜಾರಿಯಾಗುತ್ತಿದೆ. ಅಂದು ಮಗು ಬ್ಯಾಗ್ ತರುವಂತಿಲ್ಲ.

ಮಕ್ಕಳ ಬ್ಯಾಗ್ ಭಾರ ಇಳಿಸುವ ಕಾರ್ಯಗಳು ಎಂದಿನಿಂದಲೂ ಜಾರಿಯಲ್ಲಿವೆ. ಕೇಂದ್ರ ಶಿಕ್ಷಣ ಸಚಿವಾಲಯವು 'ಸ್ಕೂಲ್ ಬ್ಯಾಗ್ ಪಾಲಿಸಿ- 2020'ರಲ್ಲಿ ಕೆಲವು ನಿಯಮಗಳನ್ನು ರೂಪಿಸಿದೆ. ಬ್ಯಾಗಿನ ಭಾರವು ಮಗುವಿನ ತೂಕದ ಶೇ 10ರಷ್ಟು ಇರಬೇಕೆನ್ನುತ್ತದೆ. ಪ್ರತೀ ತರಗತಿಯ ಮಗುವು ಹೊಂದಿರಬೇಕಾದ ಬ್ಯಾಗಿನ ತೂಕದ ಪಟ್ಟಿ ನೀಡುತ್ತದೆ. ಉದಾಹರಣೆಗೆ, 1 ಮತ್ತು 2ನೇ ತರಗತಿಯ ಮಕ್ಕಳಿಗೆ 1.6ರಿಂದ 2.2 ಕೆ.ಜಿ ಇದ್ದರೆ, 11 ಮತ್ತು 12ನೇ ತರಗತಿಗಳಿಗೆ 3.5ರಿಂದ 5 ಕೆ.ಜಿ ತೂಕದ ಬ್ಯಾಗ್ ಇರಬೇಕು ಎನ್ನುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿ- 2020 ಕೂಡ ಬ್ಯಾಗ್‌ರಹಿತ ದಿನದ ಬಗ್ಗೆ ಆಸಕ್ತಿ ವ್ಯಕ್ತಪಡಿಸಿದೆ.

ನಮ್ಮಲ್ಲೂ ಮಗುವಿನ ಬ್ಯಾಗ್ ಹೊರೆ ತಗ್ಗಿಸುವ ಪ್ರಯತ್ನಗಳಾಗಿವೆ. ಪುಸ್ತಕಗಳನ್ನು ಎರಡು ಭಾಗಗಳಲ್ಲಿ ಮುದ್ರಿಸಿ ಕೊಡಲಾಗಿದೆ. ಸಣ್ಣ ಮಕ್ಕಳು ತಮ್ಮ ಚಟುವಟಿಕೆ ಪುಸ್ತಕವನ್ನು ಶಾಲೆಯಲ್ಲಿಯೇ ಇರಿಸಬೇಕು ಎಂದು ತಿಳಿಸಲಾಗಿದೆ. ತುಂಬಾ ಮನೆಗೆಲಸ ಹೇರದೆ ಪಾಳಿ ಪದ್ಧತಿ ಅನುಸರಿಸಬೇಕು. ಮಕ್ಕಳು ತಮ್ಮ ಇಡೀ ಪುಸ್ತಕದ ರಾಶಿಯನ್ನು ಬ್ಯಾಗಿನಲ್ಲಿ ತುಂಬಿಕೊಂಡು ಬರದಂತೆ ನಿಗಾ ವಹಿಸಲು ಪೋಷಕರಿಗೆ ತಿಳಿಸಲಾಗಿದೆ. ಇದನ್ನು ಮೀರಿಯೂ ಇಂದಿನ ಮಗು ಬ್ಯಾಗ್ ಭಾರದಲ್ಲಿ ಬಳಲುತ್ತಿದೆ. ವೈದ್ಯರು ಕೂಡ ಬ್ಯಾಗ್ ಹೊರುವ ಮಕ್ಕಳ ಆರೋಗ್ಯದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ.

ತಂತ್ರಜ್ಞಾನ ಬಳಸಿ ಮಗುವಿನ ಬ್ಯಾಗ್ ಭಾರವನ್ನು ಇನ್ನಷ್ಟು ಕಡಿಮೆ ಮಾಡಬಹುದಾದರೂ ಸದ್ಯಕ್ಕೆ ತಿಂಗಳಿಗೊಮ್ಮೆ ಬ್ಯಾಗ್‌ರಹಿತ ದಿನವನ್ನಾಗಿ ಮಾಡಿರುವುದು ವಿದ್ಯಾರ್ಥಿಗಳಿಗೆ ಸಂಭ್ರಮ ತಂದಿದೆ. ಅದನ್ನು 'ಸಂಭ್ರಮ ಶನಿವಾರ' ಎನ್ನಲಾಗುತ್ತದೆ.



ಬ್ಯಾಗ್ ಇಲ್ಲದೆ ಅದೇನು ಕಲಿಸಿಯಾರು ಎಂಬುದು ಬಹುತೇಕರ ಪ್ರಶ್ನೆ. ಕಲಿಕೆ ಎಂಬುದು ಬರೀ ಪುಸ್ತಕ ನೋಡಿ ಕಲಿಯುವುದು ಎಂಬುದು ಒಂದು ತಪ್ಪು ಅಭಿಪ್ರಾಯ. ಮಗು ಪುಸ್ತಕವಿಲ್ಲದೆಯೂ ಕಲಿಯಬಹುದು. ಅದಕ್ಕೆ ನೂರೆಂಟು ದಾರಿಗಳಿವೆ. ಅಂತಹ ಹಲವು ದಾರಿಗಳು ಈ ಕಾರ್ಯಕ್ರಮದಲ್ಲಿವೆ.

ಸಾರ್ವಜನಿಕ ಸೌಕರ್ಯಗಳ ವಿಷಯದಲ್ಲಿ ಮಕ್ಕಳ ಜವಾಬ್ದಾರಿ, ಲಿಂಗತ್ವ ಸಮಾನತೆ, ಪೌಷ್ಟಿಕತೆ, ಸ್ವಾಸ್ಥ್ಯ ಮತ್ತು ಶುಚಿತ್ವ, ಮಾದಕವಸ್ತು ದುರ್ಬಳಕೆ ತಡೆಗಟ್ಟುವಿಕೆ, ಆರೋಗ್ಯಪೂರ್ಣ ಜೀವನಶೈಲಿ, ಹಿಂಸೆ, ಅಪರಾಧ, ಅಪಘಾತಗಳ ಸಂದರ್ಭಗಳಲ್ಲಿ ರಕ್ಷಣೆ ಹಾಗೂ ಭದ್ರತೆ, ಆಧುನಿಕ ತಂತ್ರಜ್ಞಾನ ಸಾಧನಗಳು ಮತ್ತು ಅಂತರ್ಜಾಲದ ಸದ್ಬಳಕೆ, ಸಾರ್ವಜನಿಕ ನೈರ್ಮಲ್ಯ- ಘನತ್ಯಾಜ್ಯದ ನಿರ್ವಹಣೆಯ ಅಗತ್ಯದಂತಹ ಹತ್ತಾರು ವಿಷಯಗಳನ್ನು 'ಸಂಭ್ರಮದ ಶನಿವಾರ'ದ ದಿನ ಬೇರೆ ಬೇರೆ ಚಟುವಟಿಕೆಗಳ ಮೂಲಕ ಕಲಿಸಲು ಉದ್ದೇಶಿಸಲಾಗಿದೆ.

2019ರಲ್ಲಿ ಜಾರಿಯಲ್ಲಿದ್ದ ಈ ಕಾರ್ಯಕ್ರಮ ನಿಂತುಹೋಗಿತ್ತು. ಈಗ ಜಾರಿಯಾಗುತ್ತಿದೆ. ಆದರೆ ಅನುಷ್ಠಾನದ ಪರಿಯ ಮೇಲೆ ಅದರ ಪರಿಣಾಮ ನಿಂತಿದೆ. ಇತ್ತೀಚೆಗೆ ಜಾರಿ ಯಾಗುತ್ತಿರುವ ಹತ್ತಾರು ಕಾರ್ಯಕ್ರಮಗಳು ಬರೀ ಕಾರ್ಯಕ್ರಮಗಳಾಗಿ ಉಳಿದು ಹೋಗುತ್ತಿರುವಾಗ 'ಸಂಭ್ರಮ ಶನಿವಾರ' ಮಕ್ಕಳ ಗೆಳೆಯನಾಗಲಿ. ಮಕ್ಕಳು ಈ ಕಾರ್ಯಕ್ರಮದಲ್ಲಿ ಇನ್ನಷ್ಟು ಆಡಲಿ, ಹಾಡಲಿ, ಕುಣಿಯಲಿ, ನಲಿಯಲಿ. ಅದರ ಮೂಲಕವೇ ಕಲಿಯಲಿ.

ವಾಚಕರ ವಾಣಿ

ಅಂದವಾಗಿ ಕಾಣಬೇಕಿರುವುದು ಹೊರಗಿನಿಂದಲ್ಲ...

ರಾಜ್ಯದ ಬಿಜೆಪಿ ನಾಯಕರು ಶಾಲಾ ಕಾಲೇಜುಗಳಿಗೆ ಬಣ್ಣ ಬಳಿಯುವ 'ಬಣ್ಣ ದರ್ಪಣ' ಎಂಬ ಹೊಸ ಪ್ರಯೋಗ ಆರಂಭಿಸಿದ್ದು ಸಂತೋಷದ ವಿಷಯ. ಆದರೆ ಶಾಲೆಯ ಹೊರಗೆ ಬಣ್ಣ ಬಳಿಯುವ ಮೊದಲು, ಶಾಲೆಯಲ್ಲಿ ಶೌಚಾಲಯ ಸರಿ ಇದೆಯೋ ಇಲ್ಲವೋ, ಶಾಲೆಯ ಶೈಕ್ಷಣಿಕ ಪ್ರಗತಿ ಹೇಗಿದೆ, ಶಿಕ್ಷಕರಿಗೆ ಅಲ್ಲಿ ಏನು ಸೌಕರ್ಯ ಬೇಕಾಗಿದೆ, ಕ್ರೀಡೆಯಲ್ಲಿ ಶಾಲೆಯ ಸಾಧನೆ ಏನು, ಕಂಪ್ಯೂಟರ್ ಲ್ಯಾಬ್, ಸೈನ್ಸ್ ಲ್ಯಾಬ್ ಎಷ್ಟರಮಟ್ಟಿಗೆ ಸರಿ ಇವೆ ಎಂಬುದನ್ನೆಲ್ಲ ಶಾಸಕರು, ಸಂಸದರು ತಿಳಿದುಕೊಳ್ಳಲಿ. ಅಲ್ಲಿನ ಸಮಸ್ಯೆ ಆಲಿಸಲಿ. ಶಾಲೆ ಅಂದವಾಗಿ ಕಾಣಬೇಕಿರುವುದು ಹೊರಗಿನಿಂದಲ್ಲ, ಆಂತರಿಕವಾಗಿ.

ಬಸನಗೌಡ ಪಾಟೀಲ, ಯರಗುಪ್ಪಿ, ಧಾರವಾಡ

ಹುಚ್ಚಾಟ ನೋಡಬೇಕಿದೆ ಸಾಮಾನ್ಯ ಜನ

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಇದೀಗ ಕರೆನ್ಸಿ ನೋಟುಗಳ ಮೇಲೆ ಲಕ್ಷ್ಮಿ ಮತ್ತು ಗಣೇಶನ ಚಿತ್ರಗಳನ್ನು ಹಾಕಬೇಕೆಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ (ಪ್ರ.ವಾ., ಅ. 28). 'ದೇಶದ ಆರ್ಥಿಕ ಸ್ಥಿತಿ ಸರಿಯಾಗಿಲ್ಲ. ಸುಧಾರಿಸಲು ಎಷ್ಟೇ ಪ್ರಯತ್ನಪಟ್ಟರೂ ಕೆಲವೊಮ್ಮೆ ಉತ್ತಮ ಫಲಿತಾಂಶ ದೊರೆಯದು. ಇದಕ್ಕೆ ದೇವರ ಆಶೀರ್ವಾದ ಬೇಕಾಗುತ್ತದೆ. ಆದ್ದರಿಂದ ಲಕ್ಷ್ಮಿ ಮತ್ತು ಗಣೇಶ ದೇವರ ಚಿತ್ರಗಳಿದ್ದರೆ ದೇಶ ಅಭಿವೃದ್ಧಿ ಹೊಂದುತ್ತದೆ' ಎನ್ನುವುದು ಅವರ ಮಾತು. ಆದರೆ ಆ ಮಾತಿನ ಒಳಾರ್ಥವೆಂದರೆ, ಇಂದು ಮನುಷ್ಯಮಾತ್ರದವರು ಸರಿಪಡಿಸಿ ಹದ್ದುಬಸ್ತಿಗೆ ತರಲು ಸಾಧ್ಯವಿಲ್ಲದಷ್ಟು ಹದಗೆಟ್ಟು ಹೋಗಿದೆ ದೇಶದ ಆರ್ಥಿಕ ಪರಿಸ್ಥಿತಿ. ಆದ್ದರಿಂದ ಈಗ ಉಳಿದಿರುವ ದಾರಿಯೊಂದೇ: ನರೇಂದ್ರ ಮೋದಿ ನೇತೃತ್ವದ ಸರ್ಕಾರವು ದೇವರಲ್ಲಿ 'ಅನ್ಯಥಾ ಶರಣಂ ನಾಸ್ತಿ...' ಎಂಬ ಮೊರೆಯನ್ನು, ಸಾಂಕೇತಿಕ ರೂಪವಾಗಿ ಸಂಪದಭಿವೃದ್ಧಿಗೆ ಕಾರಣಳಾದ ಲಕ್ಷ್ಮಿಯನ್ನು ಮತ್ತು ವಿಘ್ನನಾಶಕನಾದ ಗಣೇಶನನ್ನು ನೋಟುಗಳ ಮೇಲೆ ಮುದ್ರಿಸುವ ಮೂಲಕ ಆಹ್ವಾನಿಸುವುದು.

ತಮ್ಮದು ಅಮಾಯಕನೊಬ್ಬನ (?) ಸಲಹೆ ಎಂದು ಕೇಜ್ರಿವಾಲ್ ಅವರು ಭಾವಿಸಿರಬಹುದು. ಆದರೆ, ಇದಕ್ಕೆ ಪೂರಕವಾಗಿ ಬೇರೆ ಮತಗಳವರ ಚಿತ್ರಗಳು ಸಹ ನೋಟುಗಳ ಮೇಲೆ ವಿರಾಜಿಸಲಿ ಎಂಬ ಆಗ್ರಹಪೂರ್ವಕ ಸಲಹೆಗಳೂ ಬಂದಿವೆ! ದೇಶದ ರಾಜಕಾರಣಿಗಳು ಮತಿಗೆಟ್ಟವರಂತೆ ಆಡುತ್ತಿರುವುದಾದರೂ ಏಕೆ ಎನ್ನುವುದು ಸಾಮಾನ್ಯ ಜನರಿಗೆ ಅರ್ಥವಾಗುವುದಿಲ್ಲ. ನಿಸ್ಸಹಾಯಕರಾಗಿ ಇಂಥ ಹುಚ್ಚಾಟಗಳನ್ನು ನೋಡಬೇಕಾಗಿದೆ ಈ ದೇಶದ ಜನತೆ.

ಸಾಮಗ ದತ್ತಾತ್ರಿ, ಬೆಂಗಳೂರು

ಬಿಟ್ಟುಬಿಡಲಿ

ಹುಡುಗಿಯನ್ನು ಐಟಂ
ಎನ್ನುವುದು ಅವಹೇಳನ
ಮುಂಬೈ ನ್ಯಾಯಾಲಯದ ಗುನ್ನ
ಸಿನಿಮಾ ಮಂದಿಯೂ ಬಿಟ್ಟುಬಿಡಲಿ
ಐಟಂ ಸಾಂಗ್ ಎಂಬ ಗುಂಗನ್ನ
ನ್ಯಾಯಾಲಯ ಚಾಟಿ ಬೀಸುವ ಮುನ್ನ.

ಮಲ್ಲಿಕಾರ್ಜುನ, ಸುರಧೇನುಪುರ

ಕಬ್ಬಿನ ತೂಕ: ಶೋಷಣೆ ತಪ್ಪಿಸಿ

ಬೆಳಗಾವಿಯು ರಾಜ್ಯದಲ್ಲಿ ಅತಿ ಹೆಚ್ಚು ಕಬ್ಬು ಬೆಳೆಯುವ ಜಿಲ್ಲೆಯಾಗಿದೆ. ಮಹಾರಾಷ್ಟ್ರದ ಕೆಲವು ಸಕ್ಕರೆ ಕಾರ್ಖಾನೆಗಳಿಗೂ ಇಲ್ಲಿಂದ ಕಬ್ಬು ಹೋಗುತ್ತದೆ. ಈಗ ಕಬ್ಬು ಅರೆಯುವ ಹಂಗಾಮು. ಪ್ರತೀ ಟನ್ ಕಬ್ಬಿಗೆ ದರ ಹೆಚ್ಚಳಕ್ಕೆ ಸಂಬಂಧಿಸಿದಂತೆ ಸರ್ಕಾರದ ಹಂತದಲ್ಲಿ ಪ್ರತಿವರ್ಷ ಸಭೆಗಳು ಜರುಗುತ್ತವೆ. ಆದರೆ ರೈತರಿಗೆ ಹೆಚ್ಚಿನ ಪ್ರಯೋಜನವೇನೂ ಆಗುವುದಿಲ್ಲ. ಏಕೆಂದರೆ ಸಕ್ಕರೆ ಕಾರ್ಖಾನೆಗಳ ಮಾಲೀಕರೆಲ್ಲ ಪ್ರಭಾವಿ ರಾಜಕಾರಣಿಗಳೇ.

ಮೊನ್ನೆ ಅಥಣಿ ತಾಲ್ಲೂಕಿನ ನಮ್ಮ ಗ್ರಾಮಕ್ಕೆ ಹೋದಾಗ, ಕೆಲವು ರೈತರು ಸಕ್ಕರೆ ಕಾರ್ಖಾನೆಗಳಿಗೆ ಕಳಿಸಲಾಗುವ ಕಬ್ಬಿನ ತೂಕದಲ್ಲಿ ವ್ಯತ್ಯಾಸ ಆಗುವ ಬಗ್ಗೆ ಹೇಳಿದರು. ರೈತರು ಖಾಸಗಿಯಾಗಿ ಮಾಡಿಸುವ ತೂಕಕ್ಕೂ ಕಾರ್ಖಾನೆಗಳಲ್ಲಿ ಮಾಡಲಾಗುವ ತೂಕಕ್ಕೂ ಪ್ರತೀ ಟ್ರ್ಯಾಕ್ಟರ್‌ಗೆ ಒಂದು ಟನ್‌ನಿಂದ ಎರಡು ಟನ್‌ಗಳಷ್ಟು ವ್ಯತ್ಯಾಸ ಬರುವುದಾಗಿ ಹೇಳಿದರು. ಈ ಕುರಿತು ಆಕ್ಷೇಪಿಸಿದರೆ ಕಾರ್ಖಾನೆಗಳು ಗಮನ ನೀಡುವುದಿಲ್ಲ ಎಂದು ಹೇಳಲಾಗಿದೆ. ಇದು ನಡೆಯುತ್ತಲೇ ಬಂದಿದ್ದು, ಈ ರೀತಿ ನಿತ್ಯ ದೊರಕುವ ಅಪಾರ ಬಿಟ್ಟಿ ಕಬ್ಬಿನಿಂದಲೇ ಕಾರ್ಖಾನೆಗಳ ಮಾಲೀಕರು ಕುಬೇರರಾಗುತ್ತಾ ಹೋಗುತ್ತಿದ್ದಾರೆ ಎಂಬುದು ಹಲವರ ಅಭಿಪ್ರಾಯ. ಕೆಲವೊಂದು ಕಾರ್ಖಾನೆಗಳಲ್ಲಿ ಮಾತ್ರ ಪ್ರಾಮಾಣಿಕ ಮಾಪನಗಳು ಇರುವ ಬಗ್ಗೆಯೂ ಹೇಳಿದರು.

ಒಂದು ಕಡೆ ಕಬ್ಬಿಗೆ ಯೋಗ್ಯ ದರ ನೀಡದಿರುವುದು ಮತ್ತು ಕಬ್ಬು ಪೂರೈಸಿದ ಬಳಿಕ ರೈತರಿಗೆ ಸಕಾಲದಲ್ಲಿ ಹಣ ಪಾವತಿಸದಿರುವುದು, ಮತ್ತೊಂದು ಕಡೆ ಕಬ್ಬಿನ ತೂಕದಲ್ಲಿ ಮೋಸ, ರೈತರ ಶೋಷಣೆಗೆ ಹಲವಾರು ಮುಖಗಳು. ಸರ್ಕಾರ ಈ ಕುರಿತು ಗಮನಹರಿಸಿ, ಕಾರ್ಖಾನೆಗಳ ತೂಕದ ಯಂತ್ರಗಳಲ್ಲದೆ ಪ್ರತೀ ಕಾರ್ಖಾನೆಯ ವ್ಯಾಪ್ತಿಯಲ್ಲಿ ರೈತರ ಸ್ವಾಮ್ಯದ ಅಥವಾ ಸಹಕಾರಿ ಸಂಘಗಳ ಸ್ವಾಮ್ಯದ ತೂಕದ ಯಂತ್ರಗಳನ್ನು ಸ್ಥಾಪಿಸುವ ಮೂಲಕ ಕಾರ್ಖಾನೆಗಳಿಂದ ಆಗುತ್ತಿರುವ ಶೋಷಣೆಯನ್ನು ತಪ್ಪಿಸಬೇಕು.

ವೆಂಕಟೇಶ ಮಾಚಕನೂರ, ಧಾರವಾಡ

ಸರ್ಕಾರಿ ಬಸ್ ಕೊರತೆ ಏಕೆ?

ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಬಸ್ಸುಗಳ ಕೊರತೆ ಎದ್ದು ಕಾಣುತ್ತಿದೆ. ಬೆಂಗಳೂರು-ಮೈಸೂರು ನಡುವೆ ಸಂಚರಿಸುವ ಬಸ್ಸುಗಳಂತೂ ತುಂಬಿ ತುಳುಕುತ್ತಿವೆ. ಹಣ ತೆತ್ತು ನೂರಾರು ಕಿಲೊಮೀಟರ್ ನಿಂತುಕೊಂಡು ಹೋಗಬೇಕಾದ ಅನಿವಾರ್ಯ ಪರಿಸ್ಥಿತಿ ಇದೆ. ಸರ್ಕಾರಿ ಬಸ್ಸುಗಳ ಕೊರತೆಯೋ ಅಥವಾ ಪ್ರಯಾಣಿಕರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆಯೋ ತಿಳಿಯದು. ನಿವೃತ್ತರಾದ ಚಾಲಕರು ಹಾಗೂ ನಿರ್ವಾಹಕರ ಹುದ್ದೆಯನ್ನು ಭರ್ತಿ ಮಾಡದೇ ಅಥವಾ ಬಸ್ ಕೊರತೆಯ ಕೃತಕ ಅಭಾವವನ್ನು ಸೃಷ್ಟಿಸಿಯೋ ಆದಾಯ ದುಪ್ಪಟ್ಟು ಮಾಡಿಕೊಳ್ಳುವ ಹುನ್ನಾರ ಸಾರಿಗೆ ನಿಗಮಗಳದ್ದಾಗಿರಬೇಕು ಎಂಬ ಅನುಮಾನ ಕಾಡುತ್ತಿದೆ.

ವಿಜಯ್ ರಾಂಪುರ, ಚನ್ನಪಟ್ಟಣ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

'ಬಾಹ್ಯಾಕಾಶ: ಅದ್ಭುತ ಸಾಧನೆ'

ನವದೆಹಲಿ (ಪಿಟಿಐ): ಭಾರತವು ಸೌರ ಮತ್ತು ಬಾಹ್ಯಾಕಾಶ ಕ್ಷೇತ್ರದಲ್ಲಿ ಅದ್ಭುತ ಸಾಧನೆ ಮಾಡುತ್ತಿದ್ದು, ನಮ್ಮ ಸಾಧನೆಗೆ ಜಗತ್ತು ಬೆರಗುಗೊಂಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

ಈ ವಾರ 4 ಕಂಪನಿಗಳ ಐಪಿಒ

ನವದೆಹಲಿ (ಪಿಟಿಐ): ಈ ವಾರ ನಾಲ್ಕು ಕಂಪನಿಗಳು ಆರಂಭಿಕ ಸಾರ್ವಜನಿಕ ಕೊಡುಗೆಯ (ಐಪಿಒ) ಮೂಲಕ ಷೇರುಪೇಟೆ ಪ್ರವೇಶಿಸಲಿವೆ.

ಗ್ಲೋಬಲ್ ಹೆಲ್ತ್ ಲಿಮಿಟೆಡ್, ಫ್ಯುಷನ್ ಮೈಕ್ರೊ ಫೈನಾನ್ಸ್ ಲಿಮಿಟೆಡ್, ಡಿಸಿಎಕ್ಸ್ ಸಿಸ್ಟಮ್ಸ್ ಮತ್ತು ಬಿಕಜಿ ಫುಡ್ಸ್ ಇಂಟರ್‌ನ್ಯಾಷನಲ್ ಕಂಪನಿಗಳು ಐಪಿಒ ಮೂಲಕ ₹ 4,500 ಕೋಟಿಗೂ ಹೆಚ್ಚು ಬಂಡವಾಳ ಸಂಗ್ರಹಕ್ಕೆ ಮುಂದಾಗಿವೆ ಎಂದು ಮರ್ಚೆಂಟ್ ಬ್ಯಾಂಕಿಂಗ್ ಮೂಲಗಳು ತಿಳಿಸಿವೆ.

ಯುನಿಪಾರ್ಟ್ಸ್ ಇಂಡಿಯಾ ಮತ್ತು ಫೈವ್ ಸ್ಟಾರ್ ಬಿಸಿನೆಸ್ ಫೈನಾನ್ಸ್ ಕಂಪನಿಗಳು ಸಹ ನವೆಂಬರ್‌ನಲ್ಲಿ ಐಪಿಒ ನಡೆಸುವ ನಿರೀಕ್ಷೆ ಇದೆ ಎಂದು ಹೇಳಿವೆ.

ಮಾರುಕಟ್ಟೆ ಮಾಹಿತಿಯ ಪ್ರಕಾರ, 2022ರಲ್ಲಿ ಈವರೆಗೆ 22 ಕಂಪನಿಗಳು ಐಪಿಒ ಮೂಲಕ ₹44 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಿವೆ. 2021ರಲ್ಲಿ 63 ಕಂಪನಿಗಳು ಐಪಿಒ ಮೂಲಕ ₹ 1.19 ಲಕ್ಷ ಕೋಟಿ ಬಂಡವಾಳ ಸಂಗ್ರಹಿಸಿದ್ದವು.

ಸಾಲಪತ್ರ ಮಾರುಕಟ್ಟೆಯು ಅಸ್ಥಿರವಾಗಿರುವುದರಿಂದ 2022ರಲ್ಲಿ ಐಪಿಒ ಮಾರುಕಟ್ಟೆಯು ಮಂದಗತಿಯಲ್ಲಿ ಸಾಗುವ ನಿರೀಕ್ಷೆ ಮಾಡಲಾಗಿದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಹೀಗಿದ್ದರೂ ಹೊಸ ಕಂಪನಿಗಳಲ್ಲಿ ಆಕರ್ಷಕ ಬೆಲೆಗೆ ಹೂಡಿಕೆ ಮಾಡುವ ಅವಕಾಶ ದೊರೆಯುವುದರಿಂದ ಹೂಡಿಕೆದಾರರಿಂದ ತಕ್ಕಮಟ್ಟಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಎಂದೂ ಅವರು ತಿಳಿಸಿದ್ದಾರೆ.

ಬಂಡವಾಳ ಸಂಗ್ರಹ ನಿರೀಕ್ಷೆ (ಕೋಟಿಗಳಲ್ಲಿ)	
ಡಿಸಿಎಕ್ಸ್ ಸಿಸ್ಟಮ್ಸ್	₹500
ಫ್ಯುಷನ್ ಮೈಕ್ರೊ ಫೈನಾನ್ಸ್	₹1,104
ಗ್ಲೋಬಲ್ ಹೆಲ್ತ್	₹2,206
ಬಿಕಜಿ	₹1,000

ಬಳ್ಳಾರಿ ಮೂಲಕ ಬೆಂಗಳೂರು–ಹೈದರಾಬಾದ್ ವಿಮಾನ ಸೇವೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬೆಂಗಳೂರಿನಿಂದ ಹೈದರಾಬಾದಿಗೆ ತೋರಣಗಲ್‌ನ ವಿದ್ಯಾನಗರ ಮಾರ್ಗವಾಗಿ ಪ್ರತಿದಿನ ವಿಮಾನ ಸಂಚಾರ ಮತ್ತೆ ಆರಂಭವಾಗಿದೆ.

'ಅಲಯನ್ಸ್' ವಿಮಾನಯಾನ ಕಂಪನಿಯು ಈ ವಿಮಾನ ಸೇವೆ ಒದಗಿಸುತ್ತಿದ್ದು, ವಿದ್ಯಾನಗರದ ವಿಮಾನ ನಿಲ್ದಾಣದಿಂದ ಭಾನುವಾರ ಬೆಳಿಗ್ಗೆ ವಿಮಾನವು ಮತ್ತೆ ಸಂಚಾರ ಆರಂಭಿಸಿತು.

ಹೈದರಾಬಾದ್ ವಿಮಾನ ನಿಲ್ದಾಣದಿಂದ ಬೆಳಿಗ್ಗೆ 8.55ಕ್ಕೆ ಹೊರಡುವ ವಿಮಾನ ವಿದ್ಯಾನಗರಕ್ಕೆ 10.20ಕ್ಕೆ ಬರಲಿದೆ. ವಿದ್ಯಾನಗರದಿಂದ 10.50ಕ್ಕೆ ಹೊರಡುವ ವಿಮಾನವು ಮಧ್ಯಾಹ್ನ 12.20ಕ್ಕೆ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಇಳಿಯಲಿದೆ.

ಬೆಂಗಳೂರಿನಿಂದ ಮಧ್ಯಾಹ್ನ 3.15ಕ್ಕೆ ಹೊರಟು ಸಂಜೆ 4.15ಕ್ಕೆ ವಿದ್ಯಾನಗರಕ್ಕೆ ಬರಲಿದೆ. ವಿದ್ಯಾನಗರದಿಂದ ಸಂಜೆ 4.45ಕ್ಕೆ ಹೊರಡುವ ವಿಮಾನ ಹೈದರಾಬಾದ್ ವಿಮಾನ ನಿಲ್ದಾಣವನ್ನು ಸಂಜೆ 5.55ಕ್ಕೆ ಸೇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹515
ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹515

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹400-651
ದ್ವಿತಳಿ (ಬಿ.ವಿ)	₹420-825

ಶ್ರೀಮಂತಿಕೆಗೆ ನೆರವಾಗುವ ಸಾಲ



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಸಾಲ ಅಂದರೆ ಸಾಕು ಅನೇಕರು ಭಯ ಬೀಳುತ್ತಾರೆ. ಸಾಲದಿಂದ ಹೊರಬರುವುದು ಹೇಗೆ ಎನ್ನುವುದನ್ನು ತಿಳಿಸುವ ಅನೇಕ ಪುಸ್ತಕಗಳು, ವಿಡಿಯೊಗಳು, ಟಿ.ವಿ. ಕಾರ್ಯಕ್ರಮಗಳು ಇವೆ. ಆದರೆ, ನಿಮಗೆ ಗೊತ್ತಾ? ಸರಿಯಾದ ರೀತಿಯಲ್ಲಿ ಸಾಲವನ್ನು ಬಳಸಿಕೊಂಡರೆ ಅದರಿಂದ ಸಂಪತ್ತು ಸೃಷ್ಟಿಸಲು ಸಾಧ್ಯವಿದೆ. ಸಂಪತ್ತು ವೃದ್ಧಿಗೆ ಸಾಲ ಮಾಡುವುದನ್ನು ಹಣಕಾಸು ನಿರ್ವಹಣೆಯ ಪರಿಭಾಷೆಯಲ್ಲಿ 'ಲೀವರೇಜಿಂಗ್' ಎಂದು ಕರೆಯುತ್ತಾರೆ. ಲೀವರೇಜಿಂಗ್ ಹೇಗೆ ಕೆಲಸ ಮಾಡುತ್ತದೆ, ಅದರಿಂದ ನೀವು ಹೇಗೆ ಪ್ರಯೋಜನ ಪಡೆಯಬಹುದು?

ಲೀವರೇಜಿಂಗ್ ಅಂದರೆ: ಸಾಲವಾಗಿ ಪಡೆದ ಹಣವನ್ನು ಸದ್ವಿನಿಯೋಗ ಮಾಡಿಕೊಂಡು, ಸಂಪತ್ತು ಸೃಷ್ಟಿಸಿ, ಶ್ರೀಮಂತಿಕೆಯತ್ತ ಹೆಜ್ಜೆ ಇರಿಸುವ ಪ್ರಕ್ರಿಯೆಯನ್ನು 'ಲೀವರೇಜಿಂಗ್' ಎಂದು ಕರೆಯಬಹುದು. ಇಲ್ಲಿ ಸಾಲವಾಗಿ ಪಡೆದ ಬಂಡವಾಳಕ್ಕೆ ಪಾವತಿಸುವ ಬಡ್ಡಿಗಿಂತ ಹೆಚ್ಚಿನ ಲಾಭವನ್ನು ಕಂಡುಕೊಳ್ಳುವುದು ಬಹಳ ಮುಖ್ಯ. ಉದಾಹರಣೆಗೆ, ಸುಮಾರು ₹ 1 ಕೋಟಿ ಮೌಲ್ಯದ ವಾಣಿಜ್ಯ ಆಸ್ತಿಯೊಂದು ಮಾರಾಟಕ್ಕೆ ಲಭ್ಯವಿದ್ದು ಅದನ್ನು ಖರೀದಿಸಬೇಕು ಎನ್ನುವ ಬಯಕೆ ನಿಮ್ಮದು ಎಂದುಕೊಳ್ಳಿ. ಈ ಸನ್ನಿವೇಶದಲ್ಲಿ ನಿಮ್ಮ ಬಳಿ ₹ 30 ಲಕ್ಷ ಉಳಿತಾಯದ ಹಣವಿದೆ ಎಂದು ಭಾವಿಸಿ. ಆ ಹಣದ ಜೊತೆಗೆ ₹ 70 ಲಕ್ಷ ಸಾಲ ಪಡೆದು ನೀವು ವಾಣಿಜ್ಯ ಆಸ್ತಿ ಖರೀದಿಸಿ, ಅದರಿಂದ ಬರುವ ಆದಾಯದಲ್ಲಿ ಸಾಲ ತೀರಿಸಿಕೊಂಡು, ಆ ವಾಣಿಜ್ಯ ಆಸ್ತಿಯನ್ನು ನಿಮ್ಮದಾಗಿಸಿಕೊಳ್ಳಬಹುದು.

ಈ ರೀತಿ ಆಸ್ತಿ ಗಳಿಕೆಗಾಗಿ ಸಾಲ ಬಳಸಿಕೊಳ್ಳುವುದನ್ನು 'ಲೀವರೇಜಿಂಗ್' ಎಂದು ಕರೆಯಬಹುದು. ದಿಗ್ಗಜ ಉದ್ಯಮಿಗಳೂ 'ಲೀವರೇಜಿಂಗ್' ಬಳಸಿ ಸಂಪತ್ತು ಸೃಷ್ಟಿಸಿದ್ದಾರೆ. ಉತ್ತಮ ಕಂಪನಿಗಳು ಖರೀದಿಗೆ ಸಿಕ್ಕಾಗ ಅವುಗಳನ್ನು ತೆಕ್ಕೆಗೆ ತೆಗೆದುಕೊಳ್ಳಲು ಸಾಲದ ಮೊರೆ ಹೋದ ಉದ್ಯಮಿಗಳ ಸಂಖ್ಯೆ ದೊಡ್ಡದಿದೆ. ಸಾಲ ಮಾಡಿ ಮತ್ತೊಂದು ಸಹವರ್ತಿ ಉದ್ಯಮವನ್ನು ಖರೀದಿಸಿದಾಗ ತಮ್ಮ ಉದ್ದಿಮೆಯ ವಿಸ್ತರಣೆ ಸಾಧ್ಯವಾಗಿ ಮತ್ತಷ್ಟು ಸಂಪತ್ತು ಸೃಷ್ಟಿಸಲು ಸಾಧ್ಯವಾಗುತ್ತದೆ.

ಒಳ್ಳೆಯ ಸಾಲ, ಕೆಟ್ಟ ಸಾಲ: ಎಲ್ಲದಕ್ಕೂ ನಿಮಗೆ ಸುಲಭದಲ್ಲಿ ಸಾಲ ಸಿಗುವ ಕಾಲವಿದು. ಆದರೆ ಸಾಲ ಸಿಗುತ್ತದೆ ಎಂಬ ಕಾರಣಕ್ಕೆ ಎಲ್ಲವನ್ನೂ ಸಾಲದ ಮೂಲಕವೇ ಖರೀದಿ ಮಾಡುವ ಗೋಜಿಗೆ ಹೋಗಬೇಡಿ. ಸಾಲದಿಂದ ನಿಮ್ಮ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುತ್ತದೆ ಎಂದಾದರೆ, ಅಂತಹ ಸಾಲ ಮಾಡಿದರೆ ತೊಂದರೆ ಇಲ್ಲ. ಉದಾಹರಣೆಗೆ ಮನೆ ಖರೀದಿಗೆ, ನಿವೇಶನ ಖರೀದಿಗೆ, ವಾಣಿಜ್ಯ ಕಟ್ಟಡ ಖರೀದಿಗೆ, ವಾಣಿಜ್ಯೋದ್ಯಮ ಆರಂಭಿಸಲು, ಉನ್ನತ ವಿದ್ಯಾಭ್ಯಾಸಕ್ಕೆ, ವಾಣಿಜ್ಯ ವಾಹನ ಖರೀದಿಗೆ ಮಾಡುವಂತಹ ಸಾಲಗಳು ಒಳ್ಳೆಯ ಸಾಲಗಳು. ಈ ರೀತಿಯ ಸಾಲಗಳಿಂದ ನಿಮ್ಮ ಆದಾಯ ಗಳಿಕೆ ಹೆಚ್ಚುತ್ತದೆ. ಆದರೆ ಮದುವೆ, ವಿದೇಶ ಪ್ರವಾಸದಂತಹ ವೆಚ್ಚಗಳಿಗೆ ಅನುತ್ಪಾದಕ ಸಾಲ ಮಾಡುವುದು ಕೆಟ್ಟದ್ದು. ಅದರಿಂದ ಸಂಪತ್ತು ಸೃಷ್ಟಿ ಸಾಧ್ಯವಾಗುವುದಿಲ್ಲ.

'ಲೀವರೇಜಿಂಗ್'ಗೆ ಉದಾಹರಣೆಗಳು:

- ವಾಣಿಜ್ಯ ಆಸ್ತಿ ಖರೀದಿಗಾಗಿ ಸಾಲ ಮಾಡುವುದು 'ಲೀವರೇಜಿಂಗ್'. ಏಕೆಂದರೆ ಇಲ್ಲಿ ಆಸ್ತಿ ಖರೀದಿಸಿದ ತಕ್ಷಣ ಆದಾಯ ಬರಲು ಶುರುವಾಗುತ್ತದೆ. ದಿನ ಕಳೆದಂತೆ ಆ ವಾಣಿಜ್ಯ ಆಸ್ತಿಯ ಮೌಲ್ಯವೂ ವೃದ್ಧಿಸುತ್ತದೆ.
- ಉನ್ನತವಿದ್ಯಾಭ್ಯಾಸಕ್ಕಾಗಿಸಾಲಮಾಡುವುದು 'ಲೀವರೇಜಿಂಗ್'. ಸಾಲ ಮಾಡಿ ಉನ್ನತ ವಿದ್ಯಾಭ್ಯಾಸ ಪೂರೈಸಿದ ನಂತರ ಉತ್ತಮ ಉದ್ಯೋಗ ದೊರೆತರೆ ನಿರಂತರ ಆದಾಯ ಬರಲು ಶುರುವಾಗುತ್ತದೆ. ಹಾಗಾಗಿ ಶಿಕ್ಷಣದ ಉದ್ದೇಶಕ್ಕಾಗಿ ಮಾಡುವ ಸಾಲ ಉತ್ಪಾದಕ ಸಾಲ ಎನಿಸಿಕೊಳ್ಳುತ್ತದೆ.
- ನಿಮ್ಮ ಬಳಿ ಒಂದಿಷ್ಟು ಉಳಿತಾಯದ ಹಣವಿದ್ದು ಅದರ ಜೊತೆಗೆ ಒಂದಿಷ್ಟು ಸಾಲ ಮಾಡಿ ಕೃಷಿ ಜಮೀನು ಖರೀದಿಸುತ್ತೀರಿ ಎಂದರೆ ಅದು 'ಲೀವರೇಜಿಂಗ್'.

ಕೊನೆಯ ಮಾತು: ಸಾಲ ಮಾಡಿ ಆಸ್ತಿ ಖರೀದಿಸುವುದು ಸಾಂಪ್ರದಾಯಿಕ ಹಣಕಾಸು ನಿರ್ವಹಣೆಗೆ ವಿರುದ್ಧ. ಅನೇಕರು ಈಗಲೂ ಈ ಹೂಡಿಕೆ ತಂತ್ರಗಾರಿಕೆಯನ್ನು ಒಪ್ಪುವುದಿಲ್ಲ. ಆದರೆ ಸಾಲ ಮಾಡದೆ ದೊಡ್ಡ ಮಟ್ಟದ ಸಂಪತ್ತು ಸೃಷ್ಟಿಸುತ್ತೇವೆ ಎಂದರೆ ಅದು ಆಗದ ಮಾತು. ಉತ್ಪಾದಕ ಸಾಲ, ಅಂದರೆ ಸಂಪತ್ತು ಗಳಿಕೆಯ ಉದ್ದೇಶಕ್ಕಾಗಿ ಪಡೆಯುವ ಸಾಲದಿಂದ ಹಾನಿಯಿಲ್ಲ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಚೇತರಿಕೆ ಕಂಡ ಷೇರುಪೇಟೆ



ಸತತ ಎರಡನೇ ವಾರ ಷೇರುಪೇಟೆ ಸೂಚ್ಯಂಕಗಳು ಜಿಗಿತ ಕಂಡಿವೆ. ಅಕ್ಟೋಬರ್ 28ಕ್ಕೆ ಕೊನೆಗೊಂಡ ವಾರದಲ್ಲಿ ನಿಫ್ಟಿ ಮತ್ತು ಸೆನ್ಸೆಕ್ಸ್ ಸೂಚ್ಯಂಕಗಳು ಹೆಚ್ಚಳ ದಾಖಲಿಸಿವೆ. 59,959 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇಕಡ 1.10ರಷ್ಟು ಚೇತರಿಸಿಕೊಂಡಿದೆ. 17,786 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.19ರಷ್ಟು ಸುಧಾರಿಸಿದೆ. ಅಮೆರಿಕದ ಜಿಡಿಪಿ ದತ್ತಾಂಶದಲ್ಲಿ ಚೇತರಿಕೆ, ತ್ರೈಮಾಸಿಕ ಫಲಿತಾಂಶಗಳಲ್ಲಿ ಕಂಡುಬಂದ ಸಕಾರಾತ್ಮಕತೆ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಖರೀದಿ ಉತ್ಸಾಹ, ರೂಪಾಯಿ ಮೌಲ್ಯದಲ್ಲಿ ಅಲ್ಪ ಪ್ರಮಾಣದ ಚೇತರಿಕೆ ಸೇರಿದಂತೆ ಹಲವು ಅಂಶಗಳು ಮಾರುಕಟ್ಟೆ ಗಳಿಕೆಗೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 5ರಷ್ಟು ಗಳಿಸಿಕೊಂಡಿದೆ. ವಾಹನ ವಲಯ ಶೇ 4ರಷ್ಟು, ಅನಿಲ ಮತ್ತು ತೈಲ ಸೂಚ್ಯಂಕ ಶೇ 3.2ರಷ್ಟು ಹೆಚ್ಚಳ ದಾಖಲಿಸಿವೆ. ನಿಫ್ಟಿ ಎಫ್‌ಎಂಸಿಜಿ ಸೂಚ್ಯಂಕ ಶೇ 0.7ರಷ್ಟು ಕುಸಿದಿದೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 3,986.25 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 1,240.67 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್ ಸೂಚ್ಯಂಕದಲ್ಲಿ ಟಾಟಾ ಮೋಟರ್ಸ್ ಡಿವಿಆರ್, ಮಾರುತಿ ಸುಜುಕಿ ಇಂಡಿಯಾ, ಜೆಎಸ್‌ಡಬ್ಲ್ಯು ಸ್ಟೀಲ್, ಯುನೈಟೆಡ್ ಸ್ಪಿರಿಟ್ಸ್, ಪಂಜಾಬ್ ನ್ಯಾಷನಲ್ ಬ್ಯಾಂಕ್, ಅದಾನಿ ಟೋಟಲ್ ಗ್ಯಾಸ್, ಎನ್‌ಟಿಪಿಸಿ ಮತ್ತು ಲಾರ್ಸನ್ ಆ್ಯಂಡ್ ಟುಬ್ರೊ ಗಳಿಸಿಕೊಂಡಿವೆ.

ಬಿಎಸ್‌ಇ ಮಿಡ್ ಕ್ಯಾಪ್ ಸೂಚ್ಯಂಕದಲ್ಲಿ ಬ್ಯಾಂಕ್ ಆಫ್ ಇಂಡಿಯಾ, ಎಸ್‌ಜೆವಿಎನ್, ಭಾರತ್ ಹೆವಿ ಎಲೆಕ್ಟ್ರಿಕಲ್ಸ್, ಇಂದ್ರಪ್ರಸ್ಥ ಗ್ಯಾಸ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಪವರ್ ಫೈನಾನ್ಸ್ ಕಾರ್ಪೊರೇಷನ್, ಕೆನರಾ ಬ್ಯಾಂಕ್ ಮತ್ತು ಭಾರತ್ ಫೋರ್ಜ್ ಗಳಿಕೆ ದಾಖಲಿಸಿವೆ. ಗ್ಲ್ಯಾಂಡ್ ಫಾರ್ಮಾ, ಲಾರಸ್ ಲ್ಯಾಬ್ಸ್, ಡೆಲಿವರಿ, ಪೇಜ್ ಇಂಡಸ್ಟ್ರೀಸ್, ಕ್ರಾಂಪ್ಟನ್ ಗ್ರೀವ್ಸ್ ಕನ್ಸ್ಯೂಮರ್ ಎಲೆಕ್ಟ್ರಿಕಲ್ ಮತ್ತು ಟಾಟಾ ಎಲ್ಸಿ ಶೇ 5ರಿಂದ ಶೇ 14ರವರೆಗೆ ಇಳಿಕೆಯಾಗಿವೆ.

ಮುನ್ನೋಟ: ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ಸಮಿತಿಯ ಹೆಚ್ಚುವರಿ ಸಭೆಯೊಂದು ನವೆಂಬರ್ 3ರಂದು ನಡೆಯಲಿದೆ. ಈ ವಾರ ಏರ್‌ಟೆಲ್, ಗೇಲ್, ಎಲ್‌ಐಸಿ ಹೌಸಿಂಗ್ ಫೈನಾನ್ಸ್, ಅಮೃತಾಂಜನ್, ನೈಕಾ, ಟೈಟನ್, ಜೆ ಕೆ ಪೇಪರ್, ಜೆಕೆ ಟೈಯರ್ಸ್, ಇಂಡಿಗೊ ಪೇಂಟ್ಸ್, ಐಡಿಯಾ, ಸಿಪ್ಲಾ, ಕ್ಯಾಮ್ಸ್, ಬ್ರಿಟಾನಿಯಾ, ಕರ್ಣಾಟಕ ಬ್ಯಾಂಕ್, ಅದಾನಿ ಪೋರ್ಟ್ಸ್, ಟಿವಿಎಸ್ ಮೋಟರ್ಸ್, ಟಾಟಾ ಸ್ಟೀಲ್, ಈಕ್ವಿಟಾಸ್ ಬ್ಯಾಂಕ್ ಸೇರಿದಂತೆ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ.

ವ್ಯಾಗನ್‌ಆರ್, ಸೆಲೆರಿಯೊ, ಇಗ್ನಿಸ್ ಬ್ರೇಕ್ ಪರಿಶೀಲನೆ

ನವದೆಹಲಿ (ಪಿಟಿಐ): ಹಿಂದಿನ ಚಕ್ರಗಳ ಬ್ರೇಕಿಂಗ್ ವ್ಯವಸ್ಥೆಯಲ್ಲಿ ಇರಬಹುದಾದ ದೋಷವನ್ನು ಸರಿಪಡಿಸಲು ವ್ಯಾಗನ್‌ಆರ್, ಸೆಲೆರಿಯೊ ಮತ್ತು ಇಗ್ನಿಸ್ ಮಾದರಿಗಳ ಒಟ್ಟು 9,925 ಕಾರುಗಳನ್ನು ಹಿಂದಕ್ಕೆ ಪಡೆಯುತ್ತಿರುವುದಾಗಿ ಮಾರುತಿ ಸುಜುಕಿ ಇಂಡಿಯಾ ಕಂಪನಿ ಭಾನುವಾರ ಹೇಳಿದೆ.

2022ರ ಆಗಸ್ಟ್ 3ರಿಂದ ಸೆಪ್ಟೆಂಬರ್ 1ರ ನಡುವೆ ತಯಾರಾಗಿರುವ ವಾಹನಗಳಲ್ಲಿ ದೋಷ ಇರುವ ಸಾಧ್ಯತೆ ಇದೆ ಎಂದು ಕಂಪನಿಯು ಮುಂಬೈ ಷೇರುಪೇಟೆಗೆ ಮಾಹಿತಿ ನೀಡಿದೆ.

ಗ್ರಾಹಕರ ಸುರಕ್ಷತೆ ಮತ್ತು ಮುನ್ನೆಚ್ಚರಿಕೆಯ ಉದ್ದೇಶದಿಂದ ಅನುಮಾನ ಇರುವ ವಾಹನಗಳ ಪರಿಶೀಲನೆ ನಡೆಸಲಾಗುವುದು. ದೋಷ ಕಂಡುಬಂದಲ್ಲಿ ಉಚಿತವಾಗಿ ಸರಿಪಡಿಸಿಕೊಡಲಾಗುವುದು. ಅಧಿಕೃತ ಸೇವಾ ಕೇಂದ್ರಗಳಲ್ಲಿ ಬಿಡಿಭಾಗಗಳನ್ನು ಬದಲಿಸಿಕೊಡಲಾಗುವುದು ಎಂದು ಕಂಪನಿ ತಿಳಿಸಿದೆ.

ಸಾಲ ಆ್ಯಪ್: ಕಠಿಣ ಕ್ರಮಕ್ಕೆ ಸೂಚನೆ

'ಅಕ್ರಮವಾಗಿ ಸಾಲ ನೀಡುತ್ತಿರುವ ಆ್ಯಪ್‌ಗಳಿಂದ ದೇಶದ ಭದ್ರತೆಗೆ ಅಪಾಯ'

ನವದೆಹಲಿ (ಪಿಟಿಐ): ಚೀನಾ ಮೂಲದವರ ನಿಯಂತ್ರಣದಲ್ಲಿ ಇರುವ, ಅಕ್ರಮವಾಗಿ ಸಾಲ ಕೊಡುವ ಆ್ಯಪ್‌ಗಳು ಸಾಲ ವಸೂಲಿ ಸಂದರ್ಭದಲ್ಲಿ ಗ್ರಾಹಕರಿಗೆ ಕಿರುಕುಳ ನೀಡುವುದು, ಬೆದರಿಸುವುದು ಆತ್ಮಹತ್ಯೆಗೆ ಕಾರಣವಾಗುತ್ತಿರುವುದರಿಂದ, ಇಂತಹ ಆ್ಯಪ್‌ಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಕೇಂದ್ರ ಗೃಹ ಸಚಿವಾಲಯವು ಕಾನೂನು ಜಾರಿ ಸಂಸ್ಥೆಗಳಿಗೆ ಸೂಚಿಸಿದೆ.

ಕ್ರಮವನ್ನು ತ್ವರಿತಗತಿಯಲ್ಲಿ ಕೈಗೊಳ್ಳಬೇಕು ಎಂದು ಕೂಡ ಸಚಿವಾಲಯ ಹೇಳಿದೆ. ಈ ಸೂಚನೆಯನ್ನು ಸಚಿವಾಲಯವು ಎಲ್ಲ ರಾಜ್ಯಗಳಿಗೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ರವಾನಿಸಿದೆ. ಈ ಆ್ಯಪ್‌ಗಳ ವರ್ತನೆಯು ರಾಷ್ಟ್ರದ ಭದ್ರತೆ, ಅರ್ಥ ವ್ಯವಸ್ಥೆ ಮತ್ತು ನಾಗರಿಕರ ಭದ್ರತೆಯ ಮೇಲೆ ಗಂಭೀರ ಪರಿಣಾಮ ಉಂಟುಮಾಡಿದೆ ಎಂದು ಅದು ಎಚ್ಚರಿಸಿದೆ.

ಡಿಜಿಟಲ್ ವೇದಿಕೆ ಮೂಲಕ ಸಾಲ ನೀಡುವ ಅಕ್ರಮ ಆ್ಯಪ್‌ಗಳ ವಿರುದ್ಧ ದೇಶದ ಎಲ್ಲೆಡೆ ಹಲವು ದೂರುಗಳು ದಾಖಲಾಗಿವೆ. ಇಂತಹ ಆ್ಯಪ್‌ಗಳು ಕಿರು ಅವಧಿಗೆ ಅಥವಾ ಸಣ್ಣ ಮೊತ್ತದ ಸಾಲಗಳನ್ನು ಭಾರಿ ಬಡ್ಡಿ ದರಕ್ಕೆ ನೀಡುತ್ತಿವೆ. ಇವು ಗೋಪ್ಯ ಶುಲ್ಕಗಳನ್ನು ಕೂಡ ವಿಧಿಸುತ್ತಿವೆ. ಕಡಿಮೆ ಆದಾಯ ಇರುವ ವರ್ಗಗಳಿಗೇ ಇವು ಹೆಚ್ಚಾಗಿ ಸಾಲ ನೀಡುತ್ತಿವೆ ಎಂದು ಸಚಿವಾಲಯವು ಹೇಳಿದೆ.

ಸಾಲ ಪಡೆದ ವ್ಯಕ್ತಿಯ ಗೋಪ್ಯ ವಿವರಗಳಾದ ಸಂಪರ್ಕ ಸಂಖ್ಯೆಗಳು, ಆತ ವಾಸವಿರುವ ಸ್ಥಳದ ಮಾಹಿತಿ, ಭಾವಚಿತ್ರಗಳು ಮತ್ತು ವಿಡಿಯೊಗಳನ್ನು ಬೆದರಿಕೆ ಹಾಕಲು ಮತ್ತು ಕಿರುಕುಳ ನೀಡಲು ಬಳಸುತ್ತಿವೆ.

'ಇಂತಹ ಅಕ್ರಮ ಆ್ಯಪ್‌ಗಳು ಅನುಸರಿಸುವ ಕಠಿಣ ಸಾಲ ವಸೂಲಾತಿ ನಿಯಮಗಳು ದೇಶದ ಹಲವೆಡೆ ಪ್ರಾಣಹಾನಿಗೂ ಕಾರಣವಾಗಿವೆ' ಎಂದು ಸಚಿವಾಲಯವು ಕಳವಳ ವ್ಯಕ್ತಪಡಿಸಿದೆ.

ಆರ್‌ಬಿಐ ನಿಯಂತ್ರಣಕ್ಕೆ ಒಳಪಡದೆ ಇರುವ ಅಕ್ರಮವಾಗಿ ಸಾಲ ಕೊಡುವ ಆ್ಯಪ್‌ಗಳು ಎಸ್‌ಎಂಎಸ್ ಸೇವೆಗಳನ್ನು, ಡಿಜಿಟಲ್ ಜಾಹೀರಾತು ಮಾಧ್ಯಮವನ್ನು, ಚಾಟ್ ಮೆಸೆಂಜರ್‌ಗಳನ್ನು ಮತ್ತು ಆ್ಯಪ್ ಸ್ಟೋರ್‌ಗಳನ್ನು ಭಾರಿ ಪ್ರಮಾಣದಲ್ಲಿ ಬಳಸಿಕೊಳ್ಳುತ್ತಿವೆ ಎಂದು ಎಚ್ಚರಿಸಿದೆ.

ಇಲ್ಲಿ ಸಂಘಟಿತ ಸೈಬರ್ ಅಪರಾಧ ನಡೆಯುತ್ತಿದೆ ಎಂಬುದು ತನಿಖೆಯಿಂದ ಗೊತ್ತಾಗಿದೆ. ಹೀಗಾಗಿ, ಪ್ರಕರಣಗಳ ತನಿಖೆಗೆ ತಜ್ಞರ ನೆರವು ಪಡೆಯಬೇಕು ಎಂದು ಅದು ಸೂಚಿಸಿದೆ.

ಗೃಹ ಸಚಿವಾಲಯದ ಸೂಚನೆಗಳು

- ಅಕ್ರಮವಾಗಿ ಸಾಲ ನೀಡುವ ಆ್ಯಪ್‌ಗಳ ವಿರುದ್ಧ ಎಲ್ಲ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಕಠಿಣ ಕಾನೂನು ಕ್ರಮ ಜರುಗಿಸಬೇಕು
- ಇಂತಹ ಆ್ಯಪ್ ಬಳಸುವುದರ ವಿರುದ್ಧ ಪ್ರತಿ ಜಿಲ್ಲೆಯಲ್ಲಿಯೂ ಜನಜಾಗೃತಿ ಕಾರ್ಯಕ್ರಮ ಆಯೋಜಿಸಬೇಕು

ದೇಶದಾದ್ಯಂತ ಒಂದು ವಾರ ಶೋಕ • ಸಮಗ್ರ ತನಿಖೆಗೆ ಆದೇಶ

ಕಾಲ್ತುಳಿತ: ಮೃತರ ಸಂಖ್ಯೆ 153ಕ್ಕೆ ಏರಿಕೆ

ಸೋಲ್ (ಎ.ಪಿ): ದಕ್ಷಿಣ ಕೊರಿಯಾದ ರಾಜಧಾನಿ ಸೋಲ್‌ನಲ್ಲಿ ಶನಿವಾರ ರಾತ್ರಿ ಸಂಭವಿಸಿದ ಕಾಲ್ತುಳಿತದ ಅವಘಡದಲ್ಲಿ ಮೃತಪಟ್ಟವರ ಸಂಖ್ಯೆ 153ಕ್ಕೆ ಏರಿದೆ. ದುರಂತದಿಂದಾಗಿ ದಕ್ಷಿಣ ಕೊರಿಯಾ ದಿಗ್ಭ್ರಮೆಗೀಡಾಗಿದೆ.

ನೈಟ್‌ಲೈಫ್ ಜಿಲ್ಲೆಯಲ್ಲಿ ಹ್ಯಾಲೋವಿನ್ ಉತ್ಸವದ ವೇಳೆ ಅವಘಡ ಸಂಭವಿಸಿದ್ದು, ಮೃತಪಟ್ಟವರಲ್ಲಿ ಹೆಚ್ಚಿನವರು 20–25ರ ಹರೆಯದವರು. ಮೃತರಲ್ಲಿ 19 ಮಂದಿ ವಿದೇಶಿಯರಿದ್ದಾರೆ ಎಂದು ಅಗ್ನಿಶಾಮಕ ದಳದ ಮುಖ್ಯಸ್ಥ ಚೊಯ್ ಸಿಯೊಂಗ್ ಬಿಯೊಮ್ ಹೇಳಿದರು.

ಜಿಲ್ಲೆಯ ಇಟೆವೊನ್ ವಲಯದಲ್ಲಿ ಒಂದು ಹಂತದಲ್ಲಿ ಗುಂಪು ಕಣಿವೆಯಂತಿದ್ದ ಮಾರ್ಗದಲ್ಲಿ ಏಕಕಾಲಕ್ಕೆ ನುಗ್ಗಿದ್ದು ಅವಘಡಕ್ಕೆ ಕಾರಣ. ಇನ್ನೊಂದೆಡೆ ಇದರ ಪರಿವಿಲ್ಲದೆ ಹಾಡು, ಅದಕ್ಕೆ ಸಮೂಹದ ನರ್ತನವು ಮುಂದುವರಿದಿತ್ತು.

ಇಟೆವೊನ್‌ನಲ್ಲಿ ಪ್ರವಾಸೋದ್ಯಮ ಪ್ರಚಾರಕ್ಕೆ ಒತ್ತು ನೀಡುವ ಸಂಸ್ಥೆಯ ಪ್ರತಿನಿಧಿಯೊಬ್ಬರು, 'ಏನಾಗಿದೆ, ಹೇಗಾಯಿತು ಎಂದು ಸ್ಪಷ್ಟವಾಗಿಲ್ಲ. ಆಗಿನ ಸಂದರ್ಭ ಮಾತ್ರ ನರಕದಂತಿತ್ತು' ಎಂದು ಪ್ರತಿಕ್ರಿಯಿಸಿದರು.

ಶವಗಳನ್ನು ವಿವಿಧ 42 ಆಸ್ಪತ್ರೆಗಳ ಶವಾಗಾರದಲ್ಲಿ ಇಡಲಾಗಿದೆ. ನಿತ್ಯ ಹೆಚ್ಚಿನ ಸಂಖ್ಯೆಯಲ್ಲಿ ಅಂತ್ಯಕ್ರಿಯೆ ನಡೆಸಲು ಸ್ಥಳೀಯ ಚಿತಾಗಾರದ ಸಿಬ್ಬಂದಿಗೆ ತಿಳಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಒಂದು ವಾರ ಶೋಕ': ಅವಘಡದ ಹಿನ್ನೆಲೆಯಲ್ಲಿ ದಕ್ಷಿಣ ಕೊರಿಯಾ ಅಧ್ಯಕ್ಷ ಯೂನ್ ಸುಕ್ ಯೆಯೊಲ್ ಅವರು ದೇಶದಾದ್ಯಂತ ಒಂದು ವಾರ ಶೋಕ ಘೋಷಿಸಿದ್ದಾರೆ.

ಮೃತರ ಗೌರವಾರ್ಥ ಈ ಅವಧಿಯಲ್ಲಿ ಸರ್ಕಾರಿ ಕಟ್ಟಡಗಳು, ಸಾರ್ವಜನಿಕ ಕಚೇರಿಗಳಲ್ಲಿ ರಾಷ್ಟ್ರಧ್ವಜವನ್ನು ಅರ್ಧಮಟ್ಟದಲ್ಲಿ ಹಾರಿಸಬೇಕು. ಅಂತ್ಯಕ್ರಿಯೆಗೆ ನೆರವು, ಗಾಯಾಳುಗಳಿಗೆ ಚಿಕಿತ್ಸೆ ಸೇರಿದಂತೆ ನೊಂದವರ ಕುಟುಂಬಗಳಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವುದು ಸರ್ಕಾರದ ಆದ್ಯತೆಯಾಗಿದೆ ಎಂದು ತಿಳಿಸಿದ್ದಾರೆ.

ಕಾಂಗೊ: ಕಾಲ್ತುಳಿತಕ್ಕೆ 11 ಮಂದಿ ಸಾವು

ಕಿನ್ಶಾಸಾ (ರಾಯಿಟರ್ಸ್): ಕಾಂಗೊ ರಾಜಧಾನಿ ಕಿನ್ಶಾಸಾದ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಸಂಗೀತ ಕಾರ್ಯಕ್ರಮದ ವೇಳೆ ಕಾಲ್ತುಳಿತ ಸಂಭವಿಸಿದ್ದು, 11 ಮಂದಿ ಮೃತಪಟ್ಟಿದ್ದಾರೆ. ಮೃತರಲ್ಲಿ ಇಬ್ಬರು ಪೊಲೀಸ್ ಅಧಿಕಾರಿಗಳು ಸೇರಿದ್ದಾರೆ ಎಂದು ಸಚಿವ ಡೇನಿಯಲ್ ಅಸೆಲೊ ಒಕಿಟೊ ತಿಳಿಸಿದ್ದಾರೆ. ಗಾಯಕಿ ಫಾಲಿ ಇಪುಪಾ ಅವರ ಸಂಗೀತ ಕಾರ್ಯಕ್ರಮದ ವೇಳೆ ಅವಘಡ ಸಂಭವಿಸಿದೆ.



ದಕ್ಷಿಣ ಕೊರಿಯಾದ ನೈಟ್‌ಲೈಫ್ ಜಿಲ್ಲೆಯಲ್ಲಿ ಶನಿವಾರ ರಾತ್ರಿ ಕಾಲ್ತುಳಿತ ಸಂಭವಿಸಿದ ಪ್ರದೇಶದಲ್ಲಿ ರಕ್ಷಣಾ ಕಾರ್ಯದಲ್ಲಿ ನಿರತರಾಗಿರುವ ಸಿಬ್ಬಂದಿ —ಎಎಫ್‌ಪಿ ಚಿತ್ರ

ಕಾರು ಬಾಂಬ್ ಸ್ಫೋಟ: 100 ಮಂದಿ ಬಲಿ

ಮೊಗದಿಶು (ಸೊಮಾಲಿಯಾ): ಸೊಮಾಲಿಯಾ ರಾಜಧಾನಿ ಮೊಗದಿಶುವಿನ ಜನನಿಬಿಡ ಪ್ರದೇಶದಲ್ಲಿ ಶನಿವಾರ ನಡೆದ ಎರಡು ಕಾರ್ ಬಾಂಬ್ ಸ್ಫೋಟ ಕೃತ್ಯದಲ್ಲಿ ಕನಿಷ್ಠ 100 ಜನರು ಮೃತಪಟ್ಟಿದ್ದಾರೆ.

ತೆಲಂಗಾಣ ಸಿ.ಎಂ ಆರೋಪ

ಹೈದರಾಬಾದ್ (ಪಿಟಿಐ): ಆಡಳಿತಾರೂಢ ಟಿಆರ್‌ಎಸ್ ಸರ್ಕಾರವನ್ನು ಉರುಳಿಸುವ ಸಲುವಾಗಿ ಬಿಜೆಪಿಯು ಟಿಆರ್‌ಎಸ್‌ನ ಸುಮಾರು 20ರಿಂದ 30 ಶಾಸಕರನ್ನು ಖರೀದಿಸಲು ಯತ್ನಿಸುತ್ತಿದೆ ಎಂದು ತೆಲಂಗಾಣದ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಭಾನುವಾರ ಆರೋಪಿಸಿದ್ದಾರೆ. ಮನುಗುಡೆ ರಾವ್ ಕ್ಷೇತ್ರದಲ್ಲಿ ನಡೆಯಲಿರುವ ಉಪ ಚುನಾವಣೆಯ ನಿಮಿತ್ತ ನಡೆದ ರ‍್ಯಾಲಿಯಲ್ಲಿ ಮಾತನಾಡಿದರು.

₹50 ಸಾವಿರ ಕೋಟಿ ವೆಚ್ಚದಲ್ಲಿ ಬೆಂಗಳೂರು–ಪುಣೆ ಎಕ್ಸ್‌ಪ್ರೆಸ್‌ವೇ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ರಸ್ತೆ ಮತ್ತು ಹೆದ್ದಾರಿ ಸಚಿವಾಲಯವು ಉದ್ದೇಶಿತ ಬೆಂಗಳೂರು–ಪುಣೆ ಎಕ್ಸ್‌ಪ್ರೆಸ್‌ವೇ ನಿರ್ಮಾಣಕ್ಕೆ ಸಿದ್ಧತೆ ಆರಂಭಿಸಿದ್ದು, ಈ ಸಂಬಂಧ ವಿವರವಾದ ಯೋಜನಾ ವರದಿ ತಯಾರಿಸುತ್ತಿದೆ.


₹50 ಸಾವಿರ ಕೋಟಿ ವೆಚ್ಚದಲ್ಲಿ ಒಟ್ಟು 699 ಕಿ.ಮೀ. ಉದ್ದನೆಯ ಮಾರ್ಗ ನಿರ್ಮಾಣ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಆರು ಪಥಗಳ ಈ ಮಾರ್ಗವು ಕರ್ನಾಟಕದಲ್ಲೇ ಅತಿ ಹೆಚ್ಚು ದೂರ (498 ಕಿ.ಮೀ) ಹಾದು ಹೋಗಲಿದೆ. ಇದಕ್ಕಾಗಿ ರಾಜ್ಯದಲ್ಲೇ 5,205 ಹೆಕ್ಟೇರ್ ಭೂಮಿ ಸ್ವಾಧೀನಪಡಿಸಿಕೊಳ್ಳಬೇಕಿದೆ.

'ವಾಹನಗಳು 120 ಕಿ.ಮೀ. ವೇಗದಲ್ಲಿ ಚಲಿಸುವಂತೆ ಈ ಹೆದ್ದಾರಿಯನ್ನು ಅಭಿವೃದ್ಧಿಪಡಿಸಲಾಗುತ್ತದೆ. ಉದ್ದೇಶಿತ ಹೆದ್ದಾರಿಯಿಂದಾಗಿ ಉಭಯ ನಗರಗಳ ನಡುವಣ ಪ್ರಯಾಣದ ಅವಧಿಯು 6 ಗಂಟೆಗಳಿಗೆ ತಗ್ಗಲಿದೆ.

'ಸದ್ಯ ಇರುವ ಬೆಂಗಳೂರು–ಪುಣೆ (ಎನ್‌ಎಚ್‌–4) ಹೆದ್ದಾರಿಯು ಒಟ್ಟು 783 ಕಿ.ಮೀ ಉದ್ದವಿದ್ದು, ಇದನ್ನು ಕ್ರಮಿಸಲು 14 ರಿಂದ 15 ಗಂಟೆ ಬೇಕಾಗುತ್ತದೆ' ಎಂದು ಸಚಿವಾಲಯದ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಭಾರತ್ ಮಾಲಾ ಹಂತ–2ರ ಅಡಿಯಲ್ಲಿ ಎಕ್ಸ್‌ಪ್ರೆಸ್‌ವೇ ನಿರ್ಮಿಸಲು ನಿರ್ಧರಿಸಲಾಗಿದೆ. ಪುಣೆಯ ಕಂಜಾಳೆಯಲ್ಲಿ ಆರಂಭವಾಗಲಿರುವ ಮಾರ್ಗವು ದೊಡ್ಡಬಳ್ಳಾಪುರ ತಾಲ್ಲೂಕಿನ ಮುತುಗದಹಳ್ಳಿಯ ಹೊರ ವರ್ತುಲ ರಸ್ತೆಯಲ್ಲಿ ಕೊನೆಗೊಳ್ಳಲಿದೆ. ಕರ್ನಾಟಕದಲ್ಲಿ ಈ ಮಾರ್ಗ ಅಥಣಿ ತಾಲ್ಲೂಕಿನ ಬೊಮ್ಮನಾಳ್‌ನಲ್ಲಿ ಆರಂಭವಾಗಲಿದ್ದು, ಅಥಣಿ, ಜಮಖಂಡಿ, ಬಾಗಲಕೋಟೆ, ಮುಧೋಳ, ಬಾದಾಮಿ, ನರಗುಂದ, ರೋಣ, ಯಲಬುರ್ಗ, ಕೊಪ್ಪಳ, ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ, ಜಗಳೂರು, ಚಿತ್ರದುರ್ಗ, ಸಿರಾ, ಮಧುಗಿರಿ, ಕೊರಟಗೆರೆ, ತುಮಕೂರು, ನೆಲಮಂಗಲ ಹಾಗೂ ದೊಡ್ಡಬಳ್ಳಾಪುರ ತಾಲ್ಲೂಕಿನ ಮೂಲಕ ಹಾದುಹೋಗಲಿದೆ.

ಮಹಾರಾಷ್ಟ್ರದಲ್ಲಿ ಪುಣೆ, ಸತಾರ ಮತ್ತು ಸಾಂಗ್ಲಿ ಜಿಲ್ಲೆಗಳ ಮೂಲಕ ಹಾದು ಹೋಗಲಿದೆ.



ಶತಮಾನದಷ್ಟು ಹಳೆಯದಾದ ತೂಗು ಸೇತುವೆಯ ಚಿತ್ರ



ಶೋಧ ಕಾರ್ಯದಲ್ಲಿ ರಕ್ಷಣಾ ಪಡೆಗಳ ಜೊತೆ ಸ್ಥಳೀಯರು ಕೈಜೋಡಿಸಿದ್ದರು – ಪಿಟಿಐ ಚಿತ್ರಗಳು



ಗಾಯಗೊಂಡಿದ್ದ ವ್ಯಕ್ತಿಯನ್ನು ರಕ್ಷಿಸಲಾಯಿತು

ತೂಗುಸೇತುವೆ ಕುಸಿತ: 78 ಮಂದಿ ಸಾವು

ಒಂದನೇ ಪುಟದಿಂದ...

ಕನಿಷ್ಠ 100ರಿಂದ 150 ಜನರು ಇದ್ದಿರಬಹುದು' ಎಂದು ಮೊರ್ಬಿ ಜಿಲ್ಲಾ ವ್ಯಾಪ್ತಿಯ ಭಾವನಗರ ಐಜಿ ಅಶೋಕ್ ಯಾದವ್ ಹೇಳಿದ್ದಾರೆ.

'ಈ ದುರಂತದಿಂದ ನಮಗೂ ಆಘಾತವಾಗಿದೆ. ಈ ದುರ್ಘಟನೆಯ ಹೊಣೆಯನ್ನು ಸರ್ಕಾರವೇ ಹೊರಲಿದೆ' ಎಂದು ಗುಜರಾತ್‌ನ ಕಾರ್ಮಿಕ ಸಚಿವ ಬ್ರಿಜೇಶ್ ಮೆರ್ಜಾ ಹೇಳಿದ್ದಾರೆ.

ರಕ್ಷಣಾ ತಂಡಗಳ ನಿಯೋಜನೆ– ಸಿಎಂಗೆ ಮೋದಿ ಸೂಚನೆ: 'ಪ್ರಧಾನಿ ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ ಸೇತುವೆ ದುರಂತದಲ್ಲಿ ಸಿಲುಕಿರುವವರ ರಕ್ಷಣೆಗೆ ಹೆಚ್ಚಿನ ತಂಡಗಳನ್ನು ನಿಯೋಜಿಸುವಂತೆ ಸೂಚಿಸಿದ್ದಾರೆ' ಎಂದು ಪ್ರಧಾನಿಯವರ ಕಾರ್ಯಾಲಯ ತಿಳಿಸಿದೆ.

'ಪ್ರಧಾನಿಯವರು ಮೃತರ ಕುಟುಂಬಗಳಿಗೆ ತಲಾ ₹2 ಲಕ್ಷ ಪರಿಹಾರ ಹಾಗೂ ಘಟನೆಯಲ್ಲಿ ಗಾಯಗೊಂಡವರ ಚಿಕಿತ್ಸೆಗೆ ತಲಾ ₹50 ಸಾವಿರ ನೆರವು ಘೋಷಿಸಿದ್ದಾರೆ' ಎಂದು ಪಿಎಂಒ ಟ್ವೀಟ್ ಮಾಡಿದೆ. ರಾಜ್ಯ ಸರ್ಕಾರವು ಮೃತರ ಕುಟುಂಬಗಳಿಗೆ ತಲಾ ₹4 ಲಕ್ಷ ಪರಿಹಾರ ಹಾಗೂ ಗಾಯಗೊಂಡವರಿಗೆ ತಲಾ ₹50 ಸಾವಿರ ನೆರವು ಪ್ರಕಟಿಸಿದೆ.



ದುರಂತ ಸ್ಥಳಕ್ಕೆ ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಭೇಟಿ ನೀಡಿ ಪರಿಶೀಲಿಸಿದರು –ಪಿಟಿಐ ಚಿತ್ರ

'ದುರಂತಕ್ಕೆ ಸರ್ಕಾರದ ನಿರ್ಲಕ್ಷ್ಯ ಕಾರಣ'


ನವದೆಹಲಿ (ಪಿಟಿಐ): 'ಪಶ್ಚಿಮ ಗುಜರಾತ್‌ನ ಮಚ್ಛು ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದ್ದ ಶತಮಾನದಷ್ಟು ಹಳೆಯ ತೂಗುಸೇತುವೆ ಕುಸಿತವಾಗಿರುವುದಕ್ಕೆ ಆಡಳಿತಾರೂಢ ಬಿಜೆಪಿ ಸರ್ಕಾರದ ನಿರ್ಲಕ್ಷ್ಯವೇ ಕಾರಣ' ಎಂದು ಸಿಪಿಐ ರಾಜ್ಯಸಭಾ ಸದಸ್ಯ ಬಿನೋಯ್ ವಿಶ್ವಂ ಟೀಕಿಸಿದ್ದಾರೆ.

'ಆರು ತಿಂಗಳ ಕಾಲ ಸೇತುವೆಯ ನವೀಕರಣ ಕಾರ್ಯ ಕೈಗೊಳ್ಳಲಾಗಿತ್ತು ಎಂದು ಹೇಳಲಾಗಿದೆ. ನಾಲ್ಕು ದಿನಗಳ ಹಿಂದೆಯಷ್ಟೇ ಪ್ರವಾಸಿಗರಿಗೆ ಮುಕ್ತವಾಗಿದ್ದ ಈ ಸೇತುವೆ ಮುರಿದು ಬಿದ್ದಿರುವುದಕ್ಕೆ ಕಳಪೆ ಕಾಮಗಾರಿ ಕಾರಣ. ಸರ್ಕಾರವು ಮೃತರ ಕುಟುಂಬಗಳಿಗೆ ನೀಡುವ ಪರಿಹಾರದ ಮೊತ್ತವನ್ನು ಹೆಚ್ಚಳ ಮಾಡಬೇಕು. ಈ ಕುರಿತು ಸೂಕ್ತ ತನಿಖೆ ನಡೆಸಬೇಕು. ಈ ನಿರ್ಲಕ್ಷ್ಯದಲ್ಲಿ ರಾಜಕಾರಣಿಗಳ ಪಾತ್ರದ ಕುರಿತೂ ತನಿಖೆಯಾಗಬೇಕು' ಎಂದು ಟ್ವೀಟ್ ಮೂಲಕ ಒತ್ತಾಯಿಸಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಹಾಗೂ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಸೇತುವೆ ದುರಂತದ ಕುರಿತು ಆಘಾತ ವ್ಯಕ್ತಪಡಿಸಿದ್ದಾರೆ.

'ಸೇತುವೆ ದುರಂತದ ಸುದ್ದಿ ತಿಳಿದು ಆಘಾತವಾಗಿದೆ. ಗಾಯಗೊಂಡವರು ಬೇಗನೆ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸುತ್ತೇನೆ' ಎಂದು ಧನಕರ್ ಅವರು ಟ್ವೀಟ್ ಮಾಡಿದ್ದಾರೆ.

'ಸೇತುವೆ ದುರಂತದ ಸುದ್ದಿ ತಿಳಿದು ತುಂಬಾ ನೋವಾಗಿದೆ. ನದಿ ನೀರಿನಲ್ಲಿ ಸಿಲುಕಿರುವವರು ಸುರಕ್ಷಿತವಾಗಿ ಹೊರಗೆ ಬರಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ' ಎಂದು ಯೋಗಿ ಆದಿತ್ಯನಾಥ್ ಟ್ವೀಟ್ ಮಾಡಿದ್ದಾರೆ.



- ಇತ್ತೀಚೆಗೆ ಛಟ್ ಪೂಜೆ ಆಚರಿಸಿದ್ದ ಸಂಭ್ರಮದಲ್ಲೇ ನೂರಾರು ಜನರು ಸೇತುವೆ ಮೇಲೆ ಸೇರಿದ್ದರು.
- ಈ ಸೇತುವೆಯನ್ನು ಎಂಜಿನಿಯರಿಂಗ್ ಕ್ಷೇತ್ರದ ಅದ್ಭುತ ಎಂದು ಮೊರ್ಬಿ ಜಿಲ್ಲೆಯ ಅಧಿಕೃತ ವೆಬ್‌ಸೈಟ್ ಬಣ್ಣಿಸಿದೆ

ಸೇತುವೆ ಕುಸಿತದ ನಂತರ ಜನರು ಅದಕ್ಕೆ ಆತುಕೊಂಡಿರುವ ಚಿತ್ರ– ಪಿಟಿಐ

ರಕ್ಷಣಾ ಕಾರ್ಯಕ್ಕೆ ನೆರವಾಗುವಂತೆ ಸೂಚಿಸಿದ ಖರ್ಗೆ, ರಾಹುಲ್

ಸೇತುವೆ ದುರಂತದಲ್ಲಿ ಸಿಲುಕಿರುವವರ ರಕ್ಷಣೆಗೆ ಅಗತ್ಯವಿರುವ ಎಲ್ಲಾ ಸಹಕಾರವನ್ನು ನೀಡುವಂತೆ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ನಾಯಕ ರಾಹುಲ್ ಗಾಂಧಿ ಅವರು ಪಕ್ಷದ ಕಾರ್ಯಕರ್ತರಿಗೆ ಸೂಚಿಸಿದ್ದಾರೆ.

'ಸೇತುವೆ ದುರಂತದ ಸುದ್ದಿ ತಿಳಿದು ಮನಸ್ಸು ಭಾರವಾಗಿದೆ. ಗುಜರಾತ್‌ನಲ್ಲಿರುವ ಪಕ್ಷದ ಕಾರ್ಯಕರ್ತರು ಅಪಾಯದಲ್ಲಿ ಸಿಲುಕಿರುವವ ರಕ್ಷಣೆಗೆ ಅಗತ್ಯವಿರುವ ಸಹಕಾರ ನೀಡಿ. ಗಾಯಗೊಂಡಿರುವವರ ಚಿಕಿತ್ಸೆಗೂ ನೆರವಾಗಿ' ಎಂದು ಖರ್ಗೆ ಟ್ವೀಟ್ ಮೂಲಕ ಮನವಿ ಮಾಡಿದ್ದಾರೆ.

> **ಮೊರ್ಬಿಯಲ್ಲಿ ನಡೆದಿರುವ ದುರಂತದ ಸುದ್ದಿ ತಿಳಿದು ತುಂಬಾ ದುಃಖವಾಗಿದೆ**
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

'ಸೇತುವೆ ಬಳಕೆಗೆ ಯೋಗ್ಯ ಪ್ರಮಾಣಪತ್ರ ಸಿಕ್ಕಿರಲಿಲ್ಲ'

ಮೊರ್ಬಿ (ಪಿಟಿಐ): 'ಆರು ತಿಂಗಳ ಕಾಲ ದುರಸ್ತಿಯ ಬಳಿಕ ಸಾರ್ವಜನಿಕ ಬಳಕೆಗೆ ಮುಕ್ತವಾಗಿದ್ದ ಮೊರ್ಬಿ ಸೇತುವೆ ಸುರಕ್ಷಿತ ಹಾಗೂ ಬಳಕೆಗೆ ಯೋಗ್ಯವಾಗಿದೆ ಎನ್ನುವ ಕುರಿತು ಸ್ಥಳೀಯ ಪುರಸಭೆಯಿಂದ ಪ್ರಮಾಣಪತ್ರ ದೊರೆತಿರಲಿಲ್ಲ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದೇ ಮಾರ್ಚ್‌ನಲ್ಲಿ ನವೀಕರಣಕ್ಕಾಗಿ ಸೇತುವೆಯನ್ನು ಬಂದ್ ಮಾಡಲಾಗಿತ್ತು. ಇತ್ತೀಚೆಗಷ್ಟೇ ಸೇತುವೆಯನ್ನು ಪುನರ್ ಬಳಕೆಗೆ ತೆರೆಯಲಾಗಿತ್ತು. ನವೀಕರಣದ ಬಳಿಕ ಸೇತುವೆಯು ಜನರ ಬಳಕೆಗೆ ಯೋಗ್ಯ ಮತ್ತು ಸುರಕ್ಷಿತವಾಗಿರುವ ಕುರಿತು ಪಾಲಿಕೆಯಿಂದ ಯಾವುದೇ ಪ್ರಮಾಣ ಪತ್ರ ಪಡೆದಿರಲಿಲ್ಲ' ಎಂದು ಮೊರ್ಬಿ ಪುರಸಭೆಯ ಮುಖ್ಯಾಧಿಕಾರಿ ಸಂದೀಪ್ ಸಿನ್ಹಾ ಝಾಲಾ ಹೇಳಿದ್ದಾರೆ.

ಮಾನವ ನಿರ್ಮಿತ ದುರಂತ: 'ಮೊರ್ಬಿ ಸೇತುವೆ ದುರಂತವು ಮಾನವ ನಿರ್ಮಿತವಾದದ್ದು. ಇದಕ್ಕೆ ರಾಜ್ಯ ಸರ್ಕಾರವೇ ನೇರ ಹೊಣೆ' ಎಂದು ಕಾಂಗ್ರೆಸ್‌ನ ಹಿರಿಯ ಮುಖಂಡ ರಣದೀಪ್ ಸುರ್ಜೇವಾಲ ಹೇಳಿದ್ದಾರೆ.

ದಿಗ್ವಿಜಯ ಸಿಂಗ್ ಆಕ್ರೋಶ, ಟ್ವೀಟ್- ಭೋಪಾಲ್ ವರದಿ: ದುರಂತದ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರನ್ನು ಉದ್ದೇಶಿಸಿ ಟ್ವೀಟ್ ಮಾಡಿರುವ ಕಾಂಗ್ರೆಸ್‌ನ ಹಿರಿಯ ನಾಯಕ ದಿಗ್ವಿಜಯ ಸಿಂಗ್, ' ಮೋದಿ ಅವರೇ, ಇದು ದೇವರ ಕೃತ್ಯವೇ ಅಥವಾ ವಂಚನೆಯಿಂದಾದ ಕೃತ್ಯವೇ' ಎಂದು ಪ್ರಶ್ನಿಸಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಸಿಂಗ್, 2016ರಲ್ಲಿ ಕೋಲ್ಕತ್ತದ ವಿವೇಕಾನಂದ ರಸ್ತೆ ಮೇಲ್ಸೇತುವೆ ಕುಸಿದಾಗ ಮಮತಾ ಬ್ಯಾನರ್ಜಿ ಸರ್ಕಾರದ ವಿರುದ್ಧ ಪ್ರಧಾನಿ ಮೋದಿ ಅವರು ಪದೇಪದೇ ವಾಗ್ದಾಳಿ ನಡೆಸಿದ್ದನ್ನು ಉಲ್ಲೇಖಿಸಿದ್ದಾರೆ.

'ಗುಜರಾತಿನಲ್ಲಿ ಬಿಜೆಪಿಯು ಕಳೆದ 27 ವರ್ಷಗಳಿಂದ ಅಧಿಕಾರದಲ್ಲಿದೆ. ಮರುಬಳಕೆಗೆ ತೆರವಾದ 5 ದಿನಗಳಲ್ಲೇ ಸೇತುವೆ ಕುಸಿದಿದೆ. ಅಂತೆಯೇ ಇದೇ ವರ್ಷ ಜುಲೈನಲ್ಲಿ ಕಚ್ ಜಿಲ್ಲೆಯ ಬಿದ್ರಾ ಗ್ರಾಮದಲ್ಲಿ ಮೊದಲ ದಿನದ ಪರೀಕ್ಷೆಯ ಸಮಯದಲ್ಲೇ ನರ್ಮದಾ ಕಾಲುವೆ ಒಡೆದರೆ, ಭುಜ್‌ನಲ್ಲಿ ಮೇಲ್ಸೇತುವೆ ನಿರ್ಮಿಸಲು 8-9 ವರ್ಷ ಆಯಿತು. ಕಾರ್ಯಾರಂಭ ಮಾಡಿದ ಒಂದು ವರ್ಷದೊಳಗೆ ದುರಸ್ತಿ ಮಾಡಬೇಕಾಯಿತು' ಎಂದೂ ಅವರು ಕಿಡಿಕಾರಿದ್ದಾರೆ.

'ಬಿಹಾರ ಉಪ ಚುನಾವಣೆಯಲ್ಲಿ ಬಿಜೆಪಿಗೆ ಬೆಂಬಲ'

ಪಟ್ನಾ (ಪಿಟಿಐ): ಬಿಹಾರದಲ್ಲಿ ಮುಂದಿನ ವಾರ ನಡೆಯಲಿರುವ ವಿಧಾನಸಭಾ ಉಪಚುನಾವಣೆಗಳಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಬೆಂಬಲಿಸುವುದಾಗಿ ಲೋಕ ಜನಶಕ್ತಿ ಪಕ್ಷದ ಮುಖ್ಯಸ್ಥ ಚಿರಾಗ್ ಪಾಸ್ವಾನ್ ಘೋಷಿಸಿದರು.

ಭಾನುವಾರ ಇಲ್ಲಿನ ವಿಮಾನ ನಿಲ್ದಾಣದಲ್ಲಿ ಮಾತನಾಡಿದ ಪಾಸ್ವಾನ್, ಮೊಕಾಮಾ ಮತ್ತು ಗೋಪಾಲ್‌ಗಂಜ್ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರ ಮಾಡುವುದಾಗಿ ತಿಳಿಸಿದರು.

ಐಟಿಬಿಪಿ ಸಿಬ್ಬಂದಿಗೆ ತರಬೇತಿ

ಭಾನು, ಪಂಚಕುಲ (ಪಿಟಿಐ): ಭಾರತ ಮತ್ತು ಚೀನಾ ಗಡಿಯಲ್ಲಿನ ವಾಸ್ತವ ನಿಯಂತ್ರಣ ರೇಖೆ ಬಳಿ ಪಹರೆ ಕಾಯುವ ಇಂಡೊ ಟಿಬೇಟನ್ ಬಾರ್ಡರ್ ಪೊಲೀಸ್ (ಐಟಿಬಿಪಿ) ಸಿಬ್ಬಂದಿಗೆ ಶಸ್ತ್ರಾಸ್ತ್ರ ರಹಿತವಾದಂತಹ ಆಕ್ರಮಣಕಾರಿ ಯುದ್ಧ ತಂತ್ರಗಳ ಕುರಿತು ತರಬೇತಿ ನೀಡಲು ನಿರ್ಧರಿಸಲಾಗಿದೆ.

ಜೂಡೊ, ಕರಾಟೆ, ಕ್ರಾವ್ ಮಾಗಾದಂತಹ ಸಮರ ಕಲೆ ಪ್ರಕಾರಗಳಿಂದ ಆಯ್ಕೆ ಮಾಡಿಕೊಂಡಿರುವ ಪಂಚಿಂಗ್, ಜಾಯಿಂಟ್ ಲಾಕ್, ಒದೆಯುವುದು ಮತ್ತು ಎತ್ತಿ ಬಿಸಾಕುವುದೂ ಸೇರಿದಂತೆ 15 ರಿಂದ 20 ರಕ್ಷಣಾತಂತ್ರಗಳ ಕುರಿತು 3 ತಿಂಗಳು ಸಿಬ್ಬಂದಿಗೆ ತರಬೇತಿ ನೀಡಲಾಗುತ್ತದೆ.

ಏಕರೂಪ ನಾಗರಿಕ ಸಂಹಿತೆ ಸಂಬಂಧ ಸಮಿತಿ ರಚನೆ ನಿರ್ಧಾರ ಕೈಗೊಂಡ ಗುಜರಾತ್ ಸರ್ಕಾರ

ದೇಶದಾದ್ಯಂತ ಜಾರಿ ಏಕಿಲ್ಲ: ಕೇಜ್ರಿವಾಲ್ ಪ್ರಶ್ನೆ

ಪ್ರಜಾ ಮತ – ಜನತಂತ್ರದ ಹಬ್ಬ 2022

ಭಾವನಗರ (ಪಿಟಿಐ): ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತರುವುದಕ್ಕೆ ಸಂಬಂಧಿಸಿ ಸಮಿತಿಯೊಂದನ್ನು ರಚಿಸಿದ ಗುಜರಾತ್ ಸರ್ಕಾರದ ನಿರ್ಧಾರದ ಹಿಂದಿನ ಉದ್ದೇಶವನ್ನು ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಭಾನುವಾರ ಪ್ರಶ್ನಿಸಿದ್ದಾರೆ.

ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತರುವ ಮನಸ್ಸು ಬಿಜೆಪಿಗೆ ಇದ್ದರೆ ಅದನ್ನು ದೇಶದಾದ್ಯಂತ ಜಾರಿಗೊಳಿಸಬೇಕು. ಅದಕ್ಕಾಗಿ ಲೋಕಸಭೆ ಚುನಾವಣೆ ನಡೆಯುವುದಕ್ಕಾಗಿ ಬಿಜೆಪಿಯವರು ಕಾಯುತ್ತಿದ್ದಾರೆಯೇ ಎಂದು ಅವರು ಪ್ರಶ್ನಿಸಿದ್ದಾರೆ. ಗುಜರಾತ್‌ಗೆ ಮೂರು ದಿನಗಳ ಭೇಟಿ ನೀಡಿರುವ ಅವರು ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ್ದಾರೆ.

ಏಕರೂಪ ನಾಗರಿಕ ಸಂಹಿತೆ ಜಾರಿ ಸಂಬಂಧ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಸಮಿತಿ ರಚಿಸುವ ನಿರ್ಧಾರವನ್ನು ಗುಜರಾತ್ ಸರ್ಕಾರವು ಕೈಗೊಂಡಿದೆ ಎಂದು ಕೇಂದ್ರ ಸಚಿವ ಪುರುಷೋತ್ತಮ ರೂಪಾಲಾ ಹೇಳಿದ್ದಾರೆ.

ಸಂವಿಧಾನದ 44ನೇ ವಿಧಿಯ ಭಾಗ–4ರ ಅನ್ವಯ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಗುಜರಾತ್‌ನ ಗೃಹ ಖಾತೆಯ ರಾಜ್ಯ ಸಚಿವ ಹರ್ಷ ಸಂಘವಿ ಹೇಳಿದ್ದಾರೆ.

'ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತರುವುದು ಸರ್ಕಾರದ ಹೊಣೆಗಾರಿಕೆ ಎಂದು ಸಂವಿಧಾನದ 44ನೇ ವಿಧಿಯು ಹೇಳುತ್ತದೆ. ಹಾಗಾಗಿ, ಎಲ್ಲ ಸಮುದಾಯಗಳ ಜೊತೆ ಸಮಾಲೋಚನೆ ನಡೆಸಿ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೊಳಿಸಬೇಕು' ಎಂದು ಕೇಜ್ರಿವಾಲ್ ಒತ್ತಾಯಿಸಿದ್ದಾರೆ.

ಚುನಾವಣೆ ಘೋಷಣೆ ಈ ವಾರ?

ಚುನಾವಣಾ ಆಯೋಗವು ಗುಜರಾತ್ ವಿಧಾನಸಭೆ ಚುನಾವಣೆಯ ವೇಳಾಪಟ್ಟಿಯನ್ನು ಈ ವಾರ ಪ್ರಕಟಿಸುವ ಸಾಧ್ಯತೆ ಇದೆ. ಗುಜರಾತ್‌ನ ಮತ ಎಣಿಕೆಯನ್ನೂ ಡಿ.8ರಂದೇ ನಡೆಸುವ ಯೋಚನೆಯನ್ನು ಆಯೋಗವು ಹೊಂದಿದೆ. ಹಾಗಾಗಿ, ಗುಜರಾತ್ ಮತದಾನ ಪ್ರಕ್ರಿಯೆಯು ಡಿ. 5ರೊಳಗೆ ಪೂರ್ಣಗಳ್ಳುವ ಸಾಧ್ಯತೆ ಹೆಚ್ಚು.

'ಕೈ' ಗೆದ್ದರೆ ಹಳೆ ಪಿಂಚಣಿ ಯೋಜನೆ: ರಾಹುಲ್

ನವದೆಹಲಿ: ಗುಜರಾತ್ ವಿಧಾನಸಭೆ ಚುನಾವಣಾ ಪ್ರಚಾರದ ಬಿಸಿಯನ್ನು ಕಾಂಗ್ರೆಸ್ ನಿಧಾನವಾಗಿ ಏರಿಸುತ್ತಿದೆ. ಕಾಂಗ್ರೆಸ್ ಗೆದ್ದರೆ ಗುತ್ತಿಗೆ ನೌಕರರಿಗೆ ಕಾಯಂ ನೌಕರಿ ನೀಡಲಾಗುವುದು ಮತ್ತು ಹಳೆಯ ಪಿಂಚಣಿ ಯೋಜನೆ ಜಾರಿ ಮಾಡಲಾಗುವುದು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಟ್ವೀಟ್ ಮೂಲಕ ಅವರು ಈ ಭರವಸೆ ಕೊಟ್ಟಿದ್ದಾರೆ.

'ಭಾರತ್ ಜೋಡೊ' ಯಾತ್ರೆ ನಡೆಸುತ್ತಿರುವ ರಾಹುಲ್ ಅವರು ಯಾತ್ರೆಗೆ ಬಿಡುವು ಕೊಟ್ಟು ಚುನಾವಣಾ ಪ್ರಚಾರಕ್ಕಾಗಿ ಕೆಲ ದಿನ ಗುಜರಾತ್‌ಗೆ ಭೇಟಿ ಕೊಡಬೇಕು ಎಂದು ರಾಜ್ಯ ಕಾಂಗ್ರೆಸ್‌ನ ಮುಖಂಡರು ಒತ್ತಾಯಿಸಿದ್ದಾರೆ.

ರಾಹುಲ್ ಅವರು 2017ರ ಗುಜರಾತ್ ಚುನಾವಣೆಯಲ್ಲಿ ವ್ಯಾಪಕವಾಗಿ ಪ್ರಚಾರ ಮಾಡಿದ್ದರು. ಆದರೆ, ಈ ಬಾರಿ ಚುನಾವಣಾ ಪ್ರಚಾರದ ಅವಧಿಯಲ್ಲಿ ಅವರು ಯಾತ್ರೆಯಲ್ಲಿಯೇ ಇರಲಿದ್ದಾರೆ. ಯಾತ್ರೆ ಆರಂಭಕ್ಕೆ ಎರಡು ದಿನ ಮುಂಚೆ, ಅಂದರೆ ಸೆಪ್ಟೆಂಬರ್ 5ರಂದು ಅಹಮದಾಬಾದ್‌ನಲ್ಲಿ ಮತಗಟ್ಟೆ ಮಟ್ಟದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ್ದರು.

'ಇದು ಕಾಂಗ್ರೆಸ್ ಪಕ್ಷದ ದೃಢ ಭರವಸೆ– ಗುತ್ತಿಗೆ ನೌಕರರಿಗೆ ಕಾಯಂ ಉದ್ಯೋಗ ದೊರೆಯಲಿದೆ. ಹಳೆಯ ಪಿಂಚಣಿ ಯೋಜನೆ ಜಾರಿಗೆ ತರುತ್ತೇವೆ ಮತ್ತು ಸಕಾಲದಲ್ಲಿ ಬಡ್ತಿಯೂ ಸಿಗಲಿದೆ' ಎಂದು ಟ್ವೀಟ್‌ನಲ್ಲಿ ಹೇಳಿದ್ದಾರೆ.

ನ.8ಕ್ಕೆ ಪೂರ್ಣ ಚಂದ್ರಗ್ರಹಣ

ಕೋಲ್ಕತ್ತ (ಪಿಟಿಐ): ನ. 8ರ ಸಂಜೆ ಪೂರ್ಣ ಚಂದ್ರ ಗ್ರಹಣ ಸಂಭವಿಸಲಿದ್ದು, ಕೋಲ್ಕತ್ತ, ಕೊಹಿಮಾ, ಅಗರ್ತಲಾ, ಗುವಾಹಟಿಗಳಲ್ಲಿ ಪೂರ್ಣವಾಗಿ ಗೋಚರಿಸಲಿದೆ. ಬೆಂಗಳೂರಿನಲ್ಲಿ ಚಂದ್ರೋದಯದ 5.57ರ ವೇಳೆ ಶೇ 23ರಷ್ಟು ಗ್ರಹಣ ಕಾಣಿಸಲಿದೆ.

'ಅಂದು ಮಧ್ಯಾಹ್ನ 2.39ಕ್ಕೆ ಗ್ರಹಣ ಆರಂಭವಾಗಲಿದ್ದು, 3.46ಕ್ಕೆ ಸಂಪೂರ್ಣ ಗ್ರಹಣ ಸಂಭವಿಸುತ್ತದೆ. ಗ್ರಹಣವು 4.29ಕ್ಕೆ ಗರಿಷ್ಠ ಮಟ್ಟದಲ್ಲಿ ಇರಲಿದೆ. ಸಂಜೆ 5.11ಕ್ಕೆ ಪೂರ್ಣ ಗ್ರಹಣ ಕೊನೆಗೊಳ್ಳುತ್ತದೆ. ಬಳಿಕ ಭಾಗಶಃ ಗ್ರಹಣ ಗೋಚರಿಸಲಿದ್ದು, ಸಂಜೆ 6.19ಕ್ಕೆ ಗ್ರಹಣ ಕೊನೆಗೊಳ್ಳುತ್ತದೆ' ಎಂದು ಖಗೋಳ ಭೌತಶಾಸ್ತ್ರಜ್ಞ ದೇವಿ ಪ್ರಸಾದ್ ದುವಾರಿ ತಿಳಿಸಿದರು.

ಚಂದ್ರೋದಯಕ್ಕೆ ಮೊದಲೇ ಪೂರ್ಣ ಚಂದ್ರಗ್ರಹಣ ಆರಂಭವಾಗುತ್ತದೆ. ಹೀಗಾಗಿ ದೇಶದಲ್ಲಿ ಮೊದಲಿಗೆ ಚಂದ್ರೋದಯ ಆಗುವ ಭಾಗಗಳಲ್ಲಿ ಮಾತ್ರ ಸಂಜೆ ಹೊತ್ತು ಪೂರ್ಣ ಗ್ರಹಣ ಗೋಚರಿಸಲಿದೆ ಎಂದರು.

ದೆಹಲಿಯಲ್ಲಿ ಶೇಕಡ 66ರಷ್ಟು ಹಾಗೂ ಮುಂಬೈನಲ್ಲಿ ಶೇಕಡ 14ರಷ್ಟು ಗ್ರಹಣ ಕಾಣಿಸಲಿದೆ ಎಂದರು.

ಗ್ರಹಣವನ್ನು ದೀರ್ಘಕಾಲದವರೆಗೆ ವೀಕ್ಷಣೆ ಮಾಡದಿರಲು ಸೂಚಿಸಿರುವ ದುವಾರಿ ಅವರು, 'ಈ ಗ್ರಹಣ ಕೆಲವರಿಗೆ ಕಿರಿಕಿರಿ ಉಂಟುಮಾಡಬಹುದು ಹಾಗೂ ಅನಾರೋಗ್ಯಕ್ಕೂ ಕಾರಣವಾಗಬಹುದು' ಎಂದು ಎಚ್ಚರಿಸಿದ್ದಾರೆ.

ಬಾಹ್ಯಾಕಾಶ ನಿಲ್ದಾಣ: ಉದ್ಯಮಗಳ ಸಹಕಾರ ಕೋರಿದ ಇಸ್ರೊ

ನವದೆಹಲಿ (ಪಿಟಿಐ): ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) 2035ರ ವೇಳೆಗೆ ಸ್ವಂತ ಬಾಹ್ಯಾಕಾಶ ನಿಲ್ದಾಣ ನಿರ್ಮಿಸುವ ಗುರಿ ಹೊಂದಿದ್ದು, ಇದಕ್ಕಾಗಿ ಅಗತ್ಯವಿರುವ ಮರು ಬಳಕೆಯ ರಾಕೆಟ್ ನಿರ್ಮಾಣಕ್ಕಾಗಿ ಉದ್ಯಮಗಳ ಸಹಕಾರ ಕೋರಿದೆ.

'ರಾಕೆಟ್‌ನ ವಿನ್ಯಾಸ ಕಾರ್ಯದಲ್ಲಿ ಇಸ್ರೊ ತೊಡಗಿಕೊಂಡಿದೆ. ಇದರ ಅಭಿವೃದ್ಧಿಗಾಗಿ ಉದ್ಯಮಗಳು ನಮ್ಮೊಂದಿಗೆ ಕೈಜೋಡಿಸಬೇಕು' ಎಂದು ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಭಾನುವಾರ ಇಲ್ಲಿ ಮನವಿ ಮಾಡಿದ್ದಾರೆ.

'ರಾಕೆಟ್ ನಿರ್ಮಾಣ ಕಾರ್ಯದಲ್ಲಿ ಉದ್ಯಮಗಳ ಸಹಭಾಗಿತ್ವ ಪ್ರೋತ್ಸಾಹಿಸುವುದು ನಮ್ಮ ಉದ್ದೇಶ. ರಾಕೆಟ್ ಅಭಿವೃದ್ಧಿಗೆ ತಗಲುವ ಸಂಪೂರ್ಣ ವೆಚ್ಚವನ್ನು ನಾವೇ ಭರಿಸುವುದು ಅಸಾಧ್ಯ. ಉದ್ಯಮಗಳೂ ಈ ಕಾರ್ಯದಲ್ಲಿ ಹೂಡಿಕೆ ಮಾಡಬೇಕು. ಭೂಸ್ಥಿರ ಕಕ್ಷೆಗೆ 10 ಟನ್ ತೂಕದ ಅಥವಾ ಕಡಿಮೆ ಎತ್ತರದ ಕಕ್ಷೆಗೆ 20 ಟನ್ ತೂಕದ ಉಪಗ್ರಹಗಳನ್ನು ಸಾಗಿಸುವ ರಾಕೆಟ್ ನಿರ್ಮಿಸುವುದು ನಮ್ಮ ಗುರಿ' ಎಂದು ಹೇಳಿದ್ದಾರೆ.

'ಪಿಎಸ್‌ಎಲ್‌ವಿ ಮೂಲಕ ಮುಂದಿನ ದಿನಗಳಲ್ಲಿ ಉಪಗ್ರಹಗಳನ್ನು ಉಡಾವಣೆ ಮಾಡುವುದು ಕಷ್ಟ' ಎಂದಿದ್ದಾರೆ.

ವಿಮಾನ ತಯಾರಿಕಾ ಘಟಕಕ್ಕೆ ಶಂಕುಸ್ಥಾಪನೆ

ವಡೋದರ (ಪಿಟಿಐ): ಭಾರತವು ಸಾರಿಗೆ ವಿಮಾನಗಳ ತಯಾರಿಕೆಯ ಪ್ರಮುಖ ದೇಶ ಎಂದು ಗುರುತಿಸಿಕೊಳ್ಳಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಭಾರತೀಯ ವಾಯುಪಡೆಗಾಗಿ ಯುರೋಪ್‌ನ ಏರ್‌ಬಸ್ ಸಂಸ್ಥೆಯ ಸಿ–295 ವಿಮಾನಗಳನ್ನು ತಯಾರಿಸುವ ಘಟಕಕ್ಕೆ ಭಾನುವಾರ ಶಂಕುಸ್ಥಾಪನೆ ಮಾಡಿ ಅವರು ಮಾತನಾಡಿದರು.

'ಭಾರತವು ತಯಾರಿಕಾ ಕೇಂದ್ರವಾಗಿ ಬೆಳೆದಿದೆ. ಸರ್ಕಾರದ ನೀತಿಗಳು ಸ್ಥಿರ, ನಿರೀಕ್ಷಿತ ಮತ್ತು ಭವಿಷ್ಯದತ್ತ ದೃಷ್ಟಿ ನೆಟ್ಟದ್ದಾಗಿರುವುದರಿಂದ ದೇಶದಲ್ಲಿ ಆರ್ಥಿಕ ಸುಧಾರಣೆಯ ಹೊಸ ಯುಗವೇ ಆರಂಭವಾಗಿದೆ. ಇಂದು ಭಾರತವು ಹೊಸ ಮನಃಸ್ಥಿತಿ ಮತ್ತು ಹೊಸ ಕೆಲಸದ ಸಂಸ್ಕೃತಿಯನ್ನು ಅಳವಡಿಸಿಕೊಂಡಿದೆ' ಎಂದು ಮೋದಿ ಹೇಳಿದರು.

'ಭಾರತದಲ್ಲಿ ತಯಾರಿಸಿ' ಮತ್ತು 'ಜಗತ್ತಿಗಾಗಿ ತಯಾರಿಸಿ' ಎಂಬ ಧೋರಣೆಗಳು ದೇಶದ ಶಕ್ತಿಯನ್ನು ಇನ್ನಷ್ಟು ಹೆಚ್ಚಿಸಿವೆ. ಸಿ–295 ವಿಮಾನಗಳನ್ನು ವಡೋದರದಲ್ಲಿ ತಯಾರಿಸುವುದು ಸೇನೆಗೆ ಶಕ್ತಿ ತುಂಬುವುದಷ್ಟೇ ಅಲ್ಲದೆ ವಿಮಾನ ತಯಾರಿಕೆ ಕ್ಷೇತ್ರಕ್ಕೆ ಪೂರಕವಾದ ವಾತಾವರಣ ಸೃಷ್ಟಿಸಲಿದೆ. ವಾಣಿಜ್ಯ ವಿಮಾನಗಳನ್ನು ತಯಾರಿಸುವ ದಿನಗಳನ್ನೂ ನಾವು ನೋಡಲಿದ್ದೇವೆ' ಎಂಬ ಭರವಸೆಯನ್ನು ಮೋದಿ ವ್ಯಕ್ತಪಡಿಸಿದರು.

ರಕ್ಷಣಾ ಸಾಧನಗಳ ತಯಾರಿಕೆಯಲ್ಲಿ ಸ್ವಾವಲಂಬನೆ ಸಾಧಿಸುವ ದೇಶದ ತುಡಿತದಲ್ಲಿ ಭಾರತದಲ್ಲಿ ವಿಮಾನ ತಯಾರಿಯು ಒಂದು ಮೈಲುಗಲ್ಲು ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.

ಯುರೋಪ್‌ನ ಏರ್‌ಬಸ್ ಸಂಸ್ಥೆ ಮತ್ತು ಟಾಟಾ ಸಮೂಹದ ಪಾಲುದಾರಿಕೆಯಲ್ಲಿ ವಿಮಾನ ತಯಾರಿಕೆ ನಡೆಯಲಿದೆ.

ಸಿ–295 ವಿಮಾನ ತಯಾರಿಕೆ ಯೋಜನೆ ಮೂಲಕ ಭಾರತೀಯ ವಾಯುಪಡೆಯನ್ನು ಆಧುನೀಕರಣಗೊಳಿಸಲು ನೆರವಾಗಲು ನಮ್ಮ ಏರ್‌ಬಸ್ ತಂಡವು ಬದ್ಧವಾಗಿದೆ. ಈ ಯೋಜನೆಯು ದೇಶದ ರಕ್ಷಣಾ ಸಾಧನಗಳ ತಯಾರಿಕೆಯಲ್ಲಿ ಖಾಸಗಿಯವರ ಭಾಗವಹಿಸುವಿಕೆಗೂ ಕೊಡುಗೆ ನೀಡಲಿದೆ ಎಂದು ಏರ್‌ಬಸ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಗಿಯೋಮ್ ಫೌರಿ ಹೇಳಿದ್ದಾರೆ.

ಈ ಘಟಕವು ಭಾರತೀಯ ವಾಯು ಪಡೆಯ ಅಗತ್ಯಗಳನ್ನು ಪೂರೈಸುವುದರ ಜೊತೆಗೆ ರಫ್ತಿನ ಕಡೆಗೂ ಗಮನ ಹರಿಸಲಿದೆ. 56 ಸಿ–295 ವಿಮಾನಗಳ ಪೂರೈಕೆಗೆ ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಏರ್‌ಬಸ್ ಜೊತೆಗೆ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಇದು ₹21,935 ಕೋಟಿ ಮೊತ್ತದ ಒಪ್ಪಂದವಾಗಿದೆ.



ಪ್ರಧಾನಿ ನರೇಂದ್ರ ಮೋದಿ ಅವರು ವಿಮಾನ ತಯಾರಿಕಾ ಘಟಕಕ್ಕೆ ಭಾನುವಾರ ಶಂಕುಸ್ಥಾಪನೆ ನೆರವೇರಿಸಿ, ವಿಮಾನದ ಮಾದರಿ ಪ್ರದರ್ಶಿಸಿದರು. ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್, ಏರ್‌ಬಸ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗಿಯೋಮ್ ಫೌರಿ ಉಪಸ್ಥಿತರಿದ್ದರು –ಪಿಟಿಐ ಚಿತ್ರ

ಮುಖ್ಯಾಂಶಗಳು

- ಭಾರತೀಯ ವಾಯುಪಡೆಯ ಅಗತ್ಯ ಪೂರೈಕೆಯ ಉದ್ದೇಶ
- ರಫ್ತಿನ ಕಡೆಗೂ ಘಟಕವು ಗಮನ ಹರಿಸಲಿದೆ
- 2026ರಲ್ಲಿ ಮೊದಲ ವಿಮಾನ ತಯಾರಿ ಆಗಲಿದೆ

> **ಇದು ಟಾಟಾ ಸಮೂಹಕ್ಕೆ ಮಾತ್ರವಲ್ಲ ಇಡೀ ದೇಶಕ್ಕೆ ಚಾರಿತ್ರಿಕ ಕ್ಷಣವಾಗಿದೆ. ದೇಶವನ್ನು ಆತ್ಮನಿರ್ಭರಗೊಳಿಸುವ ಪ್ರಧಾನಿಯವರ ದೃಷ್ಟಿಕೋನಕ್ಕೆ ಇದು ಪೂರಕವಾಗಿದೆ**
> **ಎನ್. ಚಂದ್ರಶೇಖರನ್**
> ಅಧ್ಯಕ್ಷ, ಟಾಟಾ ಸನ್ಸ್

'ತೆಲಂಗಾಣದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ನೇಕಾರರು ಪಾವತಿಸಿರುವ ಜಿಎಸ್‌ಟಿ ವಾಪಸ್'

ಭಾರತ್ ಜೋಡೊ: ಮಕ್ಕಳೊಂದಿಗೆ ರಾಹುಲ್ ಓಟ

ಜಡಚೆರ್ಲಾ, ತೆಲಂಗಾಣ (ಪಿಟಿಐ): ಇಲ್ಲಿನ ಮೆಹಬೂಬ್ ನಗರ ಜಿಲ್ಲೆಯಲ್ಲಿ ಭಾನುವಾರ ನಡೆದ ಭಾರತ್ ಜೋಡೊ ಯಾತ್ರೆ ವೇಳೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಶಾಲಾ ಮಕ್ಕಳೊಂದಿಗೆ ಓಡುವ ಮೂಲಕ ಗಮನ ಸೆಳೆದರು.

ಮಕ್ಕಳೊಂದಿಗೆ ಮಾತನಾಡುತ್ತಾ ಮುಂದಡಿ ಇಡುತ್ತಿದ್ದ ರಾಹುಲ್, ಇದ್ದಕ್ಕಿದ್ದಂತೆ ಅವರನ್ನೆಲ್ಲಾ ಹಿಂದಿಕ್ಕಿ ಓಡಲಾರಂಭಿಸಿದರು. ಇದನ್ನು ಕಂಡ ಕಾರ್ಯಕರ್ತರು ಹಾಗೂ ಅಂಗರಕ್ಷಕರು ಅವರನ್ನು ಹಿಂಬಾಲಿಸಿದರು. ತೆಲಂಗಾಣ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರೇವಂತ್ ರೆಡ್ಡಿ ಕೂಡ ರಾಹುಲ್ ಹಿಂದೆ ಓಡಿದರು.

ಭಾನುವಾರ ಬೆಳಿಗ್ಗೆ ಕಾರ್ಯಕರ್ತರೊಂದಿಗೆ ಉತ್ಸಾಹದಿಂದಲೇ ಹೆಜ್ಜೆ ಹಾಕಿದ ರಾಹುಲ್, ಸುಮಾರು 22 ಕಿ.ಮೀ ದೂರ ಸಂಚರಿಸಿದರು. ಇಲ್ಲಿನ ಶಾದಬ್‌ನಗರದ ಸೋಲಿಪುರ್ ವೃತ್ತದಲ್ಲಿ ಆಯೋಜನೆಯಾಗಿದ್ದ ಸಭೆಯಲ್ಲಿ ಸ್ಥಳೀಯರ ಜೊತೆ ಚರ್ಚಿಸಿದರು.



ತೆಲಂಗಾಣದ ಮೆಹಬೂಬ್ ನಗರ ಜಿಲ್ಲೆಯಲ್ಲಿ ಭಾನುವಾರ ಭಾರತ್ ಜೋಡೊ ಯಾತ್ರೆ ವೇಳೆ ರಾಹುಲ್ ಗಾಂಧಿ ಅವರು ಓಡಿದರು –ಪಿಟಿಐ ಚಿತ್ರ

ಜಡಚೆರ್ಲಾದಲ್ಲಿ ನಿಗದಿಯಾಗಿದ್ದ ಸಭೆಯಲ್ಲಿ ಮಾತನಾಡಿದ ರಾಹುಲ್, 'ಭಾರತವು ಅತ್ಯಧಿಕ ನಿರುದ್ಯೋಗಿಗಳನ್ನು ಹೊಂದಿರುವ ದೇಶವಾಗಿದೆ. ವಿಶ್ವದ ಶ್ರೀಮಂತ ವ್ಯಕ್ತಿಗಳೂ ನಮ್ಮ ದೇಶದಲ್ಲಿದ್ದಾರೆ' ಎಂದರು.

'ಹಿಂದಿನ 35 ವರ್ಷಗಳಿಗೆ ಹೋಲಿಸಿದರೆ ಭಾರತದಲ್ಲಿ ಈಗ ಅತಿ ಹೆಚ್ಚು ನಿರುದ್ಯೋಗಿಗಳಿದ್ದಾರೆ. ವಿಶ್ವದ ಶ್ರೀಮಂತ ವ್ಯಕ್ತಿಗಳೆನಿಸಿಕೊಂಡವರು ತಮಗೆ ಬೇಕಾದುದನ್ನೆಲ್ಲಾ ಮಾಡುತ್ತಿದ್ದಾರೆ. ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಮತ್ತು ಪ್ರಧಾನಿ ಮೋದಿ ಅವರು ಶ್ರೀಮಂತರಿಗೆ ಬೆಂಬಲವಾಗಿ ನಿಂತಿದ್ದಾರೆ. ಇವು ರಾಜಕೀಯ ಪಕ್ಷಗಳಲ್ಲ ಉದ್ಯಮಗಳು. ಮೋದಿ ಸರ್ಕಾರವು ಯಾವುದೇ ಜನ ವಿರೋಧಿ ನೀತಿ ಜಾರಿಗೊಳಿಸಿದರೂ ಕೆಸಿಆರ್ ಅದನ್ನು ಬೆಂಬಲಿಸುತ್ತಾರೆ' ಎಂದು ವಾಗ್ದಾಳಿ ನಡೆಸಿದರು.

'ಕಾಂಗ್ರೆಸ್ ಪಕ್ಷವು ತೆಲಂಗಾಣದಲ್ಲಿ ಅಧಿಕಾರಕ್ಕೆ ಬಂದರೆ ನೇಕಾರರು ಪಾವತಿಸುತ್ತಿರುವ ಜಿಎಸ್‌ಟಿ ಮೊತ್ತವನ್ನು ಮರು ಪಾವತಿ ಮಾಡಲಾಗುತ್ತದೆ. ಬಜೆಟ್‌ನಲ್ಲಿ ಶಿಕ್ಷಣ ಹಾಗೂ ಆರೋಗ್ಯಕ್ಕೆ ಹೆಚ್ಚಿನ ಅನುದಾನ ಮೀಸಲಿಡಲಾಗುತ್ತದೆ' ಎಂದು ಹೇಳಿದರು.

ಸಾಯಿಬಾಬಾ–ರಾಹುಲ್ ಅವರದ್ದು ಸಮಾನ ಚಿಂತನೆ: ರಾಬರ್ಟ್ ವಾದ್ರಾ

'ಶಿರಡಿ ಸಾಯಿಬಾಬಾ ಹಾಗೂ ರಾಹುಲ್ ಗಾಂಧಿ ಅವರು ಒಂದೇ ಬಗೆಯ ಚಿಂತನೆಯನ್ನು ಹೊಂದಿದ್ದಾರೆ. ಸಾಯಿಬಾಬಾ ಅವರಂತೆ ರಾಹುಲ್ ಕೂಡ ಏಕತೆಯನ್ನು ಪ್ರತಿಪಾದಿಸುತ್ತಿದ್ದಾರೆ' ಎಂದು ರಾಹುಲ್ ಅವರ ಬಾವ ರಾಬರ್ಟ್ ವಾದ್ರಾ ಹೇಳಿದ್ದಾರೆ.

ಸಾಯಿಬಾಬಾ ದರ್ಶನಕ್ಕಾಗಿ ಭಾನುವಾರ ಶಿರಡಿಗೆ ಭೇಟಿ ನೀಡಿದ್ದ ಅವರು, 'ಭಾರತ್ ಜೋಡೊ ಯಾತ್ರೆಯು ದೇಶದಲ್ಲಿ ಬದಲಾವಣೆಗೆ ನಾಂದಿ ಹಾಡಲಿದೆ. ಯಾತ್ರೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನ ಭಾಗವಹಿಸುತ್ತಿರುವುದು ಇದಕ್ಕೆ ಸಾಕ್ಷಿ. ರಾಹುಲ್ ಅವರು ಈ ದೇಶದ ಜನರ ಪಾಲಿನ ಹೊಸ ಭರವಸೆಯಾಗಿದ್ದಾರೆ' ಎಂದರು.

ದಕ್ಷಿಣ ಆಫ್ರಿಕಾ ಜಯಭೇರಿ; ಸೂರ್ಯಕುಮಾರ್ ಯಾದವ್ ಅರ್ಧಶತಕ ವ್ಯರ್ಥ

ಲುಂಗಿ ವೇಗಕ್ಕೆ ಮುಗ್ಗರಿಸಿದ ಭಾರತ

• ಆರ್. ಕೌಶಿಕ್

ಪರ್ತ್: ಭಾನುವಾರ ರಾತ್ರಿ ಆಪ್ಟಸ್ ಕ್ರೀಡಾಂಗಣದಲ್ಲಿ ವೇಗದ ಬೌಲರ್‌ಗಳ ಪ್ರಭಾವ ಅನಿರೀಕ್ಷಿತವೇನೂ ಆಗಿರಲಿಲ್ಲ.

ಅತ್ಯಂತ ಉತ್ಕೃಷ್ಟ ದರ್ಜೆಯ ವೇಗದ ಬೌಲಿಂಗ್ ದಾಳಿ ನಡೆಸಿದ ದಕ್ಷಿಣ ಆಫ್ರಿಕಾದ ಬೌಲರ್‌ಗಳು ಹಾಗೂ ಬ್ಯಾಟಿಂಗ್‌ನಲ್ಲಿ ಏಡನ್ ಮರ್ಕರಂ, ಡೇವಿಡ್ ಮಿಲ್ಲರ್ ಅವರ ನಾಲ್ಕನೇ ವಿಕೆಟ್ ಜೊತೆಯಾಟವು ಭಾರತದ ಗೆಲುವಿನ ಓಟಕ್ಕೆ ತಡೆಯೊಡ್ಡಿತು. ಟಿ20 ವಿಶ್ವಕಪ್ ಟೂರ್ನಿಯ ಸೂಪರ್ 12ರ ಎರಡನೆ ಗುಂಪಿನ ಪಂದ್ಯದಲ್ಲಿ 5 ವಿಕೆಟ್‌ಗಳಿಂದ ಗೆದ್ದ ದಕ್ಷಿಣ ಆಫ್ರಿಕಾ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಭಾರತಕ್ಕೆ ಎದುರಾಳಿ ತಂಡದ ವೇಗಿ ಲುಂಗಿ ಗಿಡಿ ತಮ್ಮ ಮೊದಲ ಸ್ಪೆಲ್‌ನಲ್ಲಿ ಬಲವಾದ ಪೆಟ್ಟುಕೊಟ್ಟರು. ಕೆ.ಎಲ್. ರಾಹುಲ್, ವಿರಾಟ್ ಕೊಹ್ಲಿ ಹಾಗೂ ಹಾರ್ದಿಕ್ ಪಾಂಡ್ಯ ಅವರ ವಿಕೆಟ್‌ಗಳನ್ನು ಮೊದಲ ಮೂರು ಓವರ್‌ಗಳಲ್ಲಿಯೇ ತಮ್ಮ ಬುಟ್ಟಿಗೆ ಹಾಕಿಕೊಂಡರು. ಆದರೆ ಮತ್ತೊಮ್ಮೆ ದಿಟ್ಟ ಆಟವಾಡಿದ ಸೂರ್ಯಕುಮಾರ್ ಯಾದವ್ (68; 40ಎ, 4X6, 6X3) ಅವರಿಂದಾಗಿ ಭಾರತ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 133 ರನ್ ಗಳಿಸಿತು. ವೇಯ್ನ್ ಪಾರ್ನೆಲ್, ಶಿಸ್ತಿನ ದಾಳಿ ನಡೆಸಿದ ಕಗಿಸೊ ರಬಾಡ ಹಾಗೂ ಎನ್ರಿಚ್ ನಾಕಿಯಾ ಬ್ಯಾಟರ್‌ಗಳಿಗೆ ಕಡಿವಾಣ ಹಾಕಿದರು. ಭಾರತವು 49 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿದ್ದ ಸಂದರ್ಭದಲ್ಲಿ ಸೂರ್ಯ ಜೊತೆಗೂಡಿದ ದಿನೇಶ್ ಕಾರ್ತಿಕ್ (6;15ಎ) ತಂಡದ ಮೊತ್ತ ನೂರರ ಗಡಿ ದಾಟಿಸಲು ನೆರವಾದರು. ಕಳೆದ ಪಂದ್ಯದಲ್ಲಿಯೂ ಅರ್ಧಶತಕ ಗಳಿಸಿದ್ದ ಸೂರ್ಯ ಇಲ್ಲಿಯೂ ಸುಂದರ ಬ್ಯಾಟಿಂಗ್ ಮಾಡಿದರು. ಬೌಲರ್‌ಗಳ ಬೌನ್ಸ್, ಸ್ವಿಂಗ್‌ಗಳನ್ನು ಚಾಣಾಕ್ಷತೆಯಿಂದ ಎದುರಿಸಿದರು. ಅವರ ಫುಟ್‌ವರ್ಕ್ ಹಾಗೂ ಅಪರ್ ಕಟ್, ಸ್ಕೂಪ್ ಕೌಶಲಗಳು ಚಿತ್ತಾಪಹಾರಿಯಾಗಿದ್ದವು. ಈ ಪಂದ್ಯದಲ್ಲಿ ಅವಕಾಶ ಗಿಟ್ಟಿಸಿದ್ದ ದೀಪಕ್ ಹೂಡಾ ಖಾತೆ ತೆರೆಯಲಿಲ್ಲ. ಕೆಟ್ಟ ಪಾದಚಲನೆಯ ಆಟಕ್ಕೆ ದಂಡ ತೆತ್ತರು.



ಭಾರತದ ಕೆ.ಎಲ್. ರಾಹುಲ್ ವಿಕೆಟ್ ಗಳಿಸಿದ ದಕ್ಷಿಣ ಆಫ್ರಿಕಾದ ಲುಂಗಿ ಗಿಡಿ ಸಂಭ್ರಮ –ಎಎಫ್‌ಪಿ ಚಿತ್ರ

ಲುಂಗಿ ಭಾರತದ ಎದುರಿನ ಪಂದ್ಯಗಳಲ್ಲಿ ತಮ್ಮ ತಂಡದ ರೂವಾರಿಯಾಗುವುದನ್ನು ಹವ್ಯಾಸ ಮಾಡಿಕೊಂಡಿದ್ದಾರೆ. 2018ರಲ್ಲಿ ಸೆಂಚುರಿಯನ್‌ನಲ್ಲಿ ನಡೆದಿದ್ದ ಟೆಸ್ಟ್‌ನ ಎರಡನೇ ಇನಿಂಗ್ಸ್‌ನಲ್ಲಿ ಅವರು ಆರು ವಿಕೆಟ್ ಗಳಿಸಿ ದಕ್ಷಿಣ ಆಫ್ರಿಕಾಕ್ಕೆ ಜಯದ ಕಾಣಿಕೆ ನೀಡಿದ್ದರು. ಬೌಲಿಂಗ್ ಜೊತೆಗೆ ಫೀಲ್ಡಿಂಗ್‌ನಲ್ಲಿಯೂ ಮಿಂಚಿದ ರಬಾಡ ಮೂರು ಅಮೋಘ ಕ್ಯಾಚ್‌ಗಳನ್ನು ಪಡೆದರು.

ಈ ಸಾಧಾರಣ ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾಕ್ಕೆ ಆರಂಭದಲ್ಲಿಯೇ ಅರ್ಷದೀಪ್ ಸಿಂಗ್ (25ಕ್ಕೆ2) ಪೆಟ್ಟು ಕೊಟ್ಟರು. ಇದರಿಂದಾಗಿ ಭಾರತಕ್ಕೂ ಗೆಲುವಿನತ್ತ ಸಾಗುವ ಅವಕಾಶ ಇತ್ತು. ಆದರೆ, ಫೀಲ್ಡಿಂಗ್‌ನಲ್ಲಿ ನಡೆದ ಲೋಪಗಳು ದುಬಾರಿಯಾದವು. ಅಶ್ವಿನ್ ಬೌಲಿಂಗ್‌ನಲ್ಲಿ ವಿರಾಟ್ ಕೊಹ್ಲಿ ಡೀಪ್ ಮಿಡ್ ವಿಕೆಟ್‌ನಲ್ಲಿ ಸುಲಭವಾದ ಕ್ಯಾಚ್ ಅನ್ನು ಕೈಚೆಲ್ಲಿದ್ದರಿಂದ ಏಡನ್ ಮರ್ಕರಂ ಜೀವದಾನ ಪಡೆದರು. ಆಗ ಅವರು 35 ರನ್ ಗಳಿಸಿ ಆಡುತ್ತಿದ್ದರು.

ಇದಾಗಿ ಸ್ವಲ್ಪ ಹೊತ್ತಿನ ನಂತರ ಮರ್ಕರಂ ಅವರನ್ನು ರನೌಟ್ ಮಾಡುವ ಅವಕಾಶವನ್ನು ನಾಯಕ ರೋಹಿತ್ ಶರ್ಮಾ ಕೈಚೆಲ್ಲಿದರು. ಮುಂಬೈಕರ್ ಕೇವಲ 10 ಅಡಿ ಅಂತರದಲ್ಲಿ ಗುರಿತಪ್ಪಿದರು. ಸಾಧಾರಣ ಮೊತ್ತದ ಗುರಿಯೊಡ್ಡಿ ಆಡುವಾಗ ಇಂತಹ ಲೋಪಗಳು ದುಬಾರಿಯಾಗುತ್ತವೆ.

ಮರ್ಕರಂ ಹಾಗೂ ಮಿಲ್ಲರ್ ಆಫ್‌ಸ್ಪಿನ್ನರ್ ಅಶ್ವಿನ್ ಅವರನ್ನು ದಂಡಿಸಿದರು. ಅವರ ನಾಲ್ಕು ಓವರ್‌ಗಳಲ್ಲಿ 43 ರನ್‌ಗಳನ್ನು ಸೂರೆ ಮಾಡಿದರು. ಇದು ದಕ್ಷಿಣ ಆಫ್ರಿಕಾದ ಜಯದ ಅವಕಾಶವನ್ನು ಮತ್ತಷ್ಟು ಸುಲಭಗೊಳಿಸಿತು. 19.4 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 137 ರನ್ ಗಳಿಸಿ ತೆಂಬಾ ಬವುಮಾ ಬಳಗವು ಸಂಭ್ರಮಿಸಿತು.

ಕೀಪಿಂಗ್ ತೊರೆದ ದಿನೇಶ್ : ಭಾರತದ ದಿನೇಶ್ ಕಾರ್ತಿಕ್ ವಿಕೆಟ್‌ಕೀಪಿಂಗ್ ಮಾಡುವಾಗ ಬೆನ್ನುನೋವಿನಿಂದ ಬಳಲಿದರು. ಅದರಿಂದಾಗಿ ಅವರಿಗೆ ವಿಶ್ರಾಂತಿ ನೀಡಲಾಯಿತು. ರಿಷಭ್ ಪಂತ್ ಕೀಪಿಂಗ್ ಹೊಣೆ ನಿಭಾಯಿಸಿದರು.

ಸ್ಕೋರ್ ಕಾರ್ಡ್

ಭಾರತ 9ಕ್ಕೆ 133 (20 ಓವರ್)
ರಾಹುಲ್ ಸಿ ಮರ್ಕರಂ ಬಿ ಗಿಡಿ 9 (14ಎ, 6X1), ರೋಹಿತ್ ಸಿ ಮತ್ತು ಬಿ ಗಿಡಿ 15 (14ಎ, 4X1, 6X1), ವಿರಾಟ್ ಸಿ ರಬಾಡ ಬಿ ಗಿಡಿ 12 (11ಎ, 4X2), ಸೂರ್ಯಕುಮಾರ್ ಸಿ ಮಹಾರಾಜ್ ಬಿ ಪಾರ್ನೆಲ್ 68 (40ಎ, 4X6, 6X3), ಹೂಡಾ ಸಿ ಡಿಕಾಕ್ ಬಿ ನಾಕಿಯಾ 0 (3ಎ), ಹಾರ್ದಿಕ್ ಸಿ ರಬಾಡ ಬಿ ಗಿಡಿ 2 (3ಎ), ದಿನೇಶ್ ಸಿ ರೊಸೊ ಬಿ ಪಾರ್ನೆಲ್ 6 (15ಎ), ಅಶ್ವಿನ್ ಸಿ ರಬಾಡ ಬಿ ಪಾರ್ನೆಲ್ 7 (11ಎ), ಭುವನೇಶ್ವರ್ ಔಟಾಗದೆ 4 (6ಎ), ಶಮಿ ರನೌಟ್ (ನಾಕಿಯಾ) 0 (2ಎ), ಅರ್ಷದೀಪ್ ಔಟಾಗದೆ 2 (1ಎ)
ಇತರೆ: 8 (ಬೈ 5, ಲೆಗ್‌ಬೈ 2, ವೈಡ್ 1)
ವಿಕೆಟ್ ಪತನ: 1-23 (ರೋಹಿತ್ ಶರ್ಮಾ, 4.2), 2-26 (ಕೆ.ಎಲ್. ರಾಹುಲ್, 4.6), 3-41 (ವಿರಾಟ್ ಕೊಹ್ಲಿ, 6.5), 4-42 (ದೀಪಕ್ ಹೂಡಾ, 7.3), 5-49 (ಹಾರ್ದಿಕ್ ಪಾಂಡ್ಯ, 8.3), 6-101 (ದಿನೇಶ್ ಕಾರ್ತಿಕ್, 15.1), 7-124 (ರವಿಚಂದ್ರನ್ ಅಶ್ವಿನ್, 18.1), 8-127 (ಸೂರ್ಯಕುಮಾರ್ ಯಾದವ್, 18.5), 9-130 (ಮೊಹಮ್ಮದ್ ಶಮಿ, 19.4)
ಬೌಲಿಂಗ್: ವೇಯ್ನ್ ಪಾರ್ನೆಲ್ 4-1-15-3, ಕಗಿಸೊ ರಬಾಡ 4-0-26-0, ಲುಂಗಿ ಗಿಡಿ 4-0-29-4, ಎನ್ರಿಚ್ ನಾಕಿಯಾ 4-0-23-1, ಕೇಶವ್ ಮಹಾರಾಜ್ 3-0-28-0, ಏಡನ್ ಮರ್ಕರಂ 1-0-5-0

ದಕ್ಷಿಣ ಆಫ್ರಿಕಾ 5ಕ್ಕೆ 137 (19.4 ಓವರ್)
ಡಿಕಾಕ್ ಸಿ ರಾಹುಲ್ ಬಿ ಅರ್ಷದೀಪ್ 1 (3ಎ), ಬವುಮಾ ಸಿ ಕಾರ್ತಿಕ್ ಬಿ ಶಮಿ 10 (15ಎ, 6X1), ರೊಸೊ ಎಲ್‌ಬಿಡಬ್ಲ್ಯು ಅರ್ಷದೀಪ್ 0 (2ಎ), ಮರ್ಕರಂ ಸಿ ಸೂರ್ಯಕುಮಾರ್ ಬಿ ಹಾರ್ದಿಕ್ 52 (41ಎ, 4X6, 6X1), ಮಿಲ್ಲರ್ ಔಟಾಗದೆ 59 (46ಎ, 4X3, 6X3), ಸ್ಟಬ್ಸ್ ಎಲ್‌ಬಿಡಬ್ಲ್ಯು ಬಿ ಅಶ್ವಿನ್ 6 (6ಎ, 4X1), ಪಾರ್ನೆಲ್ ಔಟಾಗದೆ 2 (5ಎ)
ಇತರೆ: 7 (ಬೈ 4, ಲೆಗ್‌ಬೈ 2, ವೈಡ್ 1)
ವಿಕೆಟ್ ಪತನ: 1-3 (ಕ್ವಿಂಟನ್ ಡಿಕಾಕ್, 1.1), 2-3 (ರಿಲಿ ರೊಸೊ, 1.3), 3-24 (ತೆಂಬಾ ಬವುಮಾ, 5.4), 4-100 (ಏಡನ್ ಮರ್ಕರಂ, 15.4), 5-122 (ತ್ರಿಸ್ಟನ್ ಸ್ಟಬ್ಸ್, 17.4)
ಬೌಲಿಂಗ್: ಭುವನೇಶ್ವರ್ ಕುಮಾರ್ 3.4-0-21-0, ಅರ್ಷದೀಪ್ ಸಿಂಗ್ 4-0-25-2, ಮೊಹಮ್ಮದ್ ಶಮಿ 4-0-13-1, ಹಾರ್ದಿಕ್ ಪಾಂಡ್ಯ 4-0-29-1, ರವಿಚಂದ್ರನ್ ಅಶ್ವಿನ್ 4-0-43-1

ಫಲಿತಾಂಶ: ದಕ್ಷಿಣ ಆಫ್ರಿಕಾಕ್ಕೆ 5 ವಿಕೆಟ್ ಗೆಲುವು

ಸಾವಿರ ರನ್ ದಾಟಿದ ವಿರಾಟ್



ವಿರಾಟ್ ಕೊಹ್ಲಿ

ಭಾರತದ ವಿರಾಟ್ ಕೊಹ್ಲಿ ಅವರು ಟಿ20 ವಿಶ್ವಕಪ್ ಟೂರ್ನಿಗಳಲ್ಲಿ ಒಂದು ಸಾವಿರ ರನ್‌ಗಳ ಗಡಿ ದಾಟಿದ ಎರಡನೇ ಬ್ಯಾಟರ್ ಆಗಿದ್ದಾರೆ.

ಭಾನುವಾರದ ದಕ್ಷಿಣ ಆಫ್ರಿಕಾ ವಿರುದ್ಧದ ಪಂದ್ಯದಲ್ಲಿ 12 ರನ್ ಗಳಿಸಿದರು. ಇದರೊಂದಿಗೆ ಅವರು ವಿಶ್ವಕಪ್‌ನಲ್ಲಿ 1001 ರನ್ ಗಳಿಸಿದರು. ಒಟ್ಟು 24 ಪಂದ್ಯಗಳಲ್ಲಿ ಅವರು ಈ ಸಾಧನೆ ಮಾಡಿದ್ದಾರೆ. ಶ್ರೀಲಂಕಾದ ಮಹೇಲಾ ಜಯವರ್ಧನೆ (1016 ರನ್) ಮೊದಲ ಸ್ಥಾನದಲ್ಲಿದ್ದಾರೆ. ಅವರು 31 ಪಂದ್ಯಗಳನ್ನು ಆಡಿದ್ದರು. ಮೂರನೇ ಸ್ಥಾನದಲ್ಲಿ ವೆಸ್ಟ್ ಇಂಡೀಸ್‌ನ ಕ್ರಿಸ್ ಗೇಲ್ (965) ಹಾಗೂ ನಾಲ್ಕನೇ ಸ್ಥಾನದಲ್ಲಿ ಭಾರತದ ರೋಹಿತ್ ಶರ್ಮಾ (919) ಇದ್ದಾರೆ.

ಕೊಹ್ಲಿ ಇನ್ನು 15 ರನ್ ಗಳಿಸಿದರೆ ಜಯವರ್ಧನೆ ಅವರ ದಾಖಲೆಯನ್ನು ಸರಿಗಟ್ಟುವರು.

ಬಾಂಗ್ಲಾಕ್ಕೆ ರೋಚಕ ಜಯ


ಮತ್ತೊಂದು 'ನೋಬಾಲ್' ಪ್ರಭಾವ; ಜಿಂಬಾಬ್ವೆಗೆ ಸೋಲು

ಬ್ರಿಸ್ಬೇನ್ (ಪಿಟಿಐ): ಭಾನುವಾರ ಗಾಬಾ ಕ್ರೀಡಾಂಗಣದಲ್ಲಿ ಅಪರೂಪದ ಪ್ರಸಂಗವೊಂದು ನಡೆಯಿತು. ಇಲ್ಲಿ ನಡೆದ ಟಿ20 ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಗೆಲುವಿನ ಖುಷಿಯಲ್ಲಿದ್ದ ಬಾಂಗ್ಲಾ ಹಾಗೂ ನಿರಾಶೆಯಲ್ಲಿದ್ದ ಜಿಂಬಾಬ್ವೆ ತಂಡಗಳು ಡಗ್‌ಔಟ್‌ಗೆ ಮರಳಿದ್ದವು. ಆದರೆ ಮೂರನೇ ಅಂಪೈರ್ ಕೊಟ್ಟ 'ನೋಬಾಲ್' ಕಾರಣಕ್ಕೆ ತಂಡಗಳನ್ನು ಮರಳಿ ಮೈದಾನಕ್ಕೆ ಕರೆಸಿ ಕೊನೆಯ ಎಸೆತ ಆಡಿಸಿದ ವಿದ್ಯಮಾನ ಜರುಗಿತು!

151 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಜಿಂಬಾಬ್ವೆ ಕೊನೆಯ ಎಸೆತದಲ್ಲಿ ಐದು ರನ್‌ಗಳ ಅಗತ್ಯವಿತ್ತು. ಸ್ಟ್ರೈಕ್‌ನಲ್ಲಿದ್ದ ಬ್ಯಾಟರ್ ಬ್ಲೆಸಿಂಗ್ ಮುಜರಬಾನಿ ಅವರನ್ನು ಮೊಸದೆಕ್ ಹುಸೇನ್ ಬೌಲಿಂಗ್‌ನಲ್ಲಿ ವಿಕೆಟ್‌ಕೀಪರ್ ನೂರುಲ್ ಹಸನ್ ಸ್ಟಂಪ್ಡ್ ಮಾಡಿದರು.

ಈ ವೇಳೆ ಪಂದ್ಯ ಗೆದ್ದ ಖುಷಿಯಲ್ಲಿ ಬಾಂಗ್ಲಾ ಆಟಗಾರರು ಮತ್ತು ಅಭಿಮಾನಿಗಳು ಸಂಭ್ರಮಾಚರಣೆ ಮಾಡಿದರು. ಸ್ಟಂಪ್‌ಗಳನ್ನು ಕಿತ್ತು ಆಟಗಾರರು ಡಗ್‌ಔಟ್‌ಗೆ ತೆರಳಿದ್ದರು. ಆದರೆ ಟಿವಿ ಅಂಪೈರ್‌ಗಳ ಮರುಪರಿಶೀಲನೆಯಲ್ಲಿ ನೂರುಲ್ ಅವರು ಸ್ಟಂಪ್‌ಗಳ ಮುಂಭಾಗದಲ್ಲಿ ಚೆಂಡು ಹಿಡಿದು ಸ್ಟಂಪಿಂಗ್ ಮಾಡಿದ್ದು ಕಂಡುಬಂದ ನಂತರ ಆ ಎಸೆತವನ್ನು ನೋಬಾಲ್ ಎಂದು ಘೋಷಿಸಿ ಆಟಗಾರರನ್ನು ವಾಪಸು ಕರೆಸಲಾಯಿತು. ಜಿಂಬಾಬ್ವೆಗೆ ಫ್ರೀಹಿಟ್ ಸಿಕ್ಕಿತು. ಆಗ ಪಂದ್ಯದ ಗೆಲುವಿಗೆ ನಾಲ್ಕು ರನ್‌ಗಳು ಬೇಕಿದ್ದವು.

ಆದರೆ ಬೌಲರ್ ಮೊಸದೆಕ್ ಒತ್ತಡವನ್ನು ಮೀರುವಲ್ಲಿ ಯಶಸ್ವಿಯಾದರು. ಕೊನೆಯ ಎಸೆತ ಮುಜರಬಾನಿ ಅವರ ಬ್ಯಾಟ್‌ಗೆ ತಾಗಲಿಲ್ಲ. ಬಾಂಗ್ಲಾದೇಶ ಆಟಗಾರರು ಮತ್ತೊಮ್ಮೆ ಸಂಭ್ರಮಿಸಿದರು. ಕೊನೆಯ ಓವರ್‌ನಲ್ಲಿ ಜಿಂಬಾಬ್ವೆಗೆ 16 ರನ್‌ಗಳು ಬೇಕಿದ್ದವು. ಮೊದಲ ಐದು ಎಸೆತಗಳಲ್ಲಿ 11 ರನ್ ಗಳಿಸಿದ್ದ ಆಟಗಾರರು 'ಪವಾಡ'ದ ನಿರೀಕ್ಷೆಯಲ್ಲಿದ್ದರು. ಆದರೆ ಯಶಸ್ಸು ಸಾಧ್ಯವಾಗಲಿಲ್ಲ.



ವಿಕೆಟ್ ಗಳಿಸಿದ ತಸ್ಕಿನ್ ಅಹ್ಮದ್ ಸಂಭ್ರಮ– ಎಎಫ್‌ಪಿ ಚಿತ್ರ

ಟಾಸ್ ಗೆದ್ದ ಬಾಂಗ್ಲಾದೇಶ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತ್ತು. ಆರಂಭಿಕ ಆಟಗಾರ ನಜ್ಮುಲ್ ಹುಸೇನ್ (71, 55ಎ, 4X7, 6X1) ಅವರ ಬ್ಯಾಟಿಂಗ್ ಬಲದಿಂದ 20 ಓವರ್‌ಗಳಲ್ಲಿ 7 ವಿಕೆಟ್ ಗಳಿಗೆ 150 ರನ್ ಗಳಿಸಿತ್ತು.

ಜಿಂಬಾಬ್ವೆ 20 ಓವರ್‌ಗಳಲ್ಲಿ 8 ವಿಕೆಟ್‌ಗಳನ್ನು ಕಳೆದುಕೊಂಡು 147 ರನ್ ಮಾತ್ರ ಕಲೆಹಾಕಿತು. ತಂಡದ ಪರ ಸೀನ್ ವಿಲಿಯಮ್ಸ್ (64, 42ಎ, 4X8) ಏಕಾಂಗಿ ಹೋರಾಟ ವ್ಯರ್ಥವಾಯಿತು. ತಸ್ಕಿನ್ ಅಹ್ಮದ್ (19ಕ್ಕೆ 3) ಬಾಂಗ್ಲಾ ಪರ ಬೌಲಿಂಗ್‌ನಲ್ಲಿ ಮಿಂಚಿದರು.

ಸಂಕ್ಷಿಪ್ತ ಸ್ಕೋರ್: ಬಾಂಗ್ಲಾದೇಶ: 20 ಓವರ್‌ಗಳಲ್ಲಿ 7ಕ್ಕೆ 150 (ನಜ್ಮುಲ್ ಹುಸೇನ್ 71, ಅಫಿಫ್ ಹುಸೇನ್ 29, ಶಕೀಬ್ ಅಲ್ ಹಸನ್ 23; ರಿಚರ್ಡ್ ಗರವಾ 24ಕ್ಕೆ 2, ಬ್ಲೆಸಿಂಗ್ ಮುಜರಬಾನಿ 13ಕ್ಕೆ 2, ಸೀನ್ ವಿಲಿಯಮ್ಸ್ 10ಕ್ಕೆ 1). ಜಿಂಬಾಬ್ವೆ: 20 ಓವರ್‌ಗಳಲ್ಲಿ 8ಕ್ಕೆ 147 (ಸೀನ್ ವಿಲಿಯಮ್ಸ್ 64, ರ್‍ಯಾನ್ ಬರ್ಲ್ ಔಟಾಗದೆ 27; ತಸ್ಕಿನ್ ಅಹ್ಮದ್ 19ಕ್ಕೆ 3, ಮೊಸದೆಕ್ ಹುಸೇನ್ 34ಕ್ಕೆ 2, ಮುಸ್ತಫಿಜುರ್ ರೆಹಮಾನ್ 15ಕ್ಕೆ 2). ಫಲಿತಾಂಶ: ಬಾಂಗ್ಲಾದೇಶ ತಂಡಕ್ಕೆ ಮೂರು ರನ್‌ಗಳ ಜಯ

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಫಲಿತಾಂಶವಿಲ್ಲ	ಪಾಯಿಂಟ್ಸ್	ರನ್ ರೇಟ್
ಗುಂಪು 1						
ನ್ಯೂಜಿಲೆಂಡ್	3	2	0	1	5	3.850
ಇಂಗ್ಲೆಂಡ್	3	1	1	1	3	0.239
ಐರ್ಲೆಂಡ್	3	1	1	1	3	-1.169
ಆಸ್ಟ್ರೇಲಿಯಾ	3	1	1	1	3	-1.155
ಶ್ರೀಲಂಕಾ	3	1	2	0	2	-0.890
ಅಫ್ಗಾನಿಸ್ತಾನ	3	0	1	2	2	-0.620
ಗುಂಪು 2						
ದಕ್ಷಿಣ ಆಫ್ರಿಕಾ	3	2	0	1	5	2.772
ಭಾರತ	3	2	1	0	4	0.844
ಬಾಂಗ್ಲಾದೇಶ	3	2	1	0	4	-1.533
ಜಿಂಬಾಬ್ವೆ	3	1	1	1	3	-0.050
ಪಾಕಿಸ್ತಾನ	3	1	2	0	2	0.765
ನೆದರ್ಲೆಂಡ್ಸ್	3	0	3	0	0	-1.948



ಆ್ಯರನ್ ಫಿಂಚ್ –ಎಎಫ್‌ಪಿ ಚಿತ್ರ

ಆಸ್ಟ್ರೇಲಿಯಾಕ್ಕೆ ಐರ್ಲೆಂಡ್ ಸವಾಲು

ಮೆಲ್ಬರ್ನ್ (ರಾಯಿಟರ್ಸ್): ಆತಿಥೇಯ ಆಸ್ಟ್ರೇಲಿಯಾ ತಂಡ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಸೋಮವಾರ ಐರ್ಲೆಂಡ್ ತಂಡದ ಸವಾಲು ಎದುರಿಸಲಿದೆ.

ಇಂಗ್ಲೆಂಡ್ ತಂಡವನ್ನು ಮಣಿಸಿ ಅಚ್ಚರಿ ಮೂಡಿಸಿದ್ದ ಐರ್ಲೆಂಡ್ ತಂಡವನ್ನು ಲಘುವಾಗಿ ಪರಿಗಣಿಸುವುದಿಲ್ಲ ಎಂದು ಆಸ್ಟ್ರೇಲಿಯಾ ತಂಡದ ನಾಯಕ ಆ್ಯರನ್ ಫಿಂಚ್ ಹೇಳಿದ್ದಾರೆ.

'ಐರ್ಲೆಂಡ್ ತಂಡ ಕೆಲವು ಪ್ರತಿಭಾನ್ವಿತ ಆಟಗಾರರನ್ನು ಒಳಗೊಂಡಿದೆ. ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಅನುಭವಿಗಳಾಗಿದ್ದಾರೆ. ಆದ್ದರಿಂದ ಆ ತಂಡವನ್ನು ಕಡೆಗಣಿಸುವಂತಿಲ್ಲ' ಎಂದು ಪಂದ್ಯದ ಮುನ್ನಾದಿನವಾದ ಭಾನುವಾರ ಅವರು ತಿಳಿಸಿದ್ದಾರೆ. ಮೂರು ಪಂದ್ಯಗಳಿಂದ ಅಷ್ಟೇ ಪಾಯಿಂಟ್ಸ್ ಹೊಂದಿರುವ ಆಸ್ಟ್ರೇಲಿಯಾ ತಂಡ 'ಗುಂಪು 1' ರಲ್ಲಿ ನಾಲ್ಕನೇ ಸ್ಥಾನದಲ್ಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ಪಾಕ್ ಸೆಮಿ ಆಸೆ ಜೀವಂತ

ಪರ್ತ್ (ಪಿಟಿಐ): ಪಾಕಿಸ್ತಾನ ತಂಡವು ನೆದರ್ಲೆಂಡ್ಸ್ ತಂಡವನ್ನು ಆರು ವಿಕೆಟ್‌ಗಳಿಂದ ಮಣಿಸಿ ಟಿ20 ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಆಸೆ ಜೀವಂತವಾಗಿರಿಸಿಕೊಂಡಿತು.

ಬೌಲರ್‌ಸ್ನೇಹಿ ಪಿಚ್‌ನಲ್ಲಿ, ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ನೆದರ್ಲೆಂಡ್ಸ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 91 ರನ್‌ಗಳ ಅಲ್ಪಮೊತ್ತ ಗಳಿಸಿತು. ಇದಕ್ಕುತ್ತರವಾಗಿ ಬಾಬರ್ ಆಜಂ ನಾಯಕತ್ವದ ತಂಡ 13.5 ಓವರ್‌ಗಳಲ್ಲಿ 4 ವಿಕೆಟ್‌ಗಳನ್ನು ಕಳೆದುಕೊಂಡು ಜಯದ ಗುರಿ ತಲುಪಿತು.

ಮೊಹಮ್ಮದ್ ರಿಜ್ವಾನ್ (49, 39ಎ, 4X5) ಗೆಲುವಿಗೆ ಕೊಡುಗೆ ನೀಡಿದರು. ಫಕರ್ ಜಮಾನ್ (20) ಅವರೂ ಕಾಣಿಕೆ ಕೊಟ್ಟರು.

ಇದಕ್ಕೂ ಮೊದಲು ನೆದರ್ಲೆಂಡ್ಸ್ ಬ್ಯಾಟರ್‌ಗಳನ್ನು ಪಾಕ್ ತಂಡದ ಬೌಲರ್‌ಗಳಾದ ಮೊಹಮ್ಮದ್ ವಾಸೀಂ (15ಕ್ಕೆ 2) ಮತ್ತು ಶಾದಾಬ್ ಖಾನ್ (22ಕ್ಕೆ 3) ನಿಯಂತ್ರಿಸಿದರು.

ಸಂಕ್ಷಿಪ್ತ ಸ್ಕೋರು: ನೆದರ್ಲೆಂಡ್ಸ್: 20 ಓವರ್‌ಗಳಲ್ಲಿ 9ಕ್ಕೆ 91 (ಕಾಲಿನ್ ಅಕರ್‌ಮನ್ 27, ಶಾಹೀನ್ ಶಾ ಅಫ್ರಿದಿ 19ಕ್ಕೆ 1, ನಸೀಮ್ ಶಾ 11ಕ್ಕೆ 1, ಮೊಹಮ್ಮದ್ ವಾಸೀಂ 15ಕ್ಕೆ 2, ರವೂಫ್ 10ಕ್ಕೆ 1, ಶಾದಾಬ್ ಖಾನ್ 22ಕ್ಕೆ 3). ಪಾಕಿಸ್ತಾನ: 13.5 ಓವರ್‌ಗಳಲ್ಲಿ 4ಕ್ಕೆ 95 (ಮೊಹಮ್ಮದ್ ರಿಜ್ವಾನ್ 49, ಫಕರ್ ಜಮಾನ್ 20, ಶಾನ್ ಮಸೂದ್ 12, ಬ್ರೆಂಡನ್ ಗ್ಲೋವರ್ 22ಕ್ಕೆ 2). ಫಲಿತಾಂಶ: ಪಾಕಿಸ್ತಾನಕ್ಕೆ ಆರು ವಿಕೆಟ್‌ಗಳ ಜಯ

ಪ್ರೊ ಕಬಡ್ಡಿ ಲೀಗ್: ಜೈಪುರ ವಿರುದ್ಧ ಬುಲ್ಸ್ ಜಯಭೇರಿ

ಭರತ್, ವಿಕಾಸ್ ಮಿಂಚಿನ ಆಟ

ಪುಣೆ: 'ಸೂಪರ್ 10' ಸಾಧಿಸಿದ ಭರತ್ ಮತ್ತು ಭರ್ಜರಿ ಆಟವಾಡಿದ ವಿಕಾಸ್ ಖಂಡೋಲ ಅವರು ಪ್ರೊ ಕಬಡ್ಡಿ ಲೀಗ್‌ನಲ್ಲಿ ಬೆಂಗಳೂರು ಬುಲ್ಸ್ ತಂಡಕ್ಕೆ ಮತ್ತೊಂದು ಜಯ ತಂದುಕೊಟ್ಟರು.

ಇಲ್ಲಿಯ ಶಿವ ಛತ್ರಪತಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಹಣಾಹಣಿಯಲ್ಲಿ ಬುಲ್ಸ್ 37-31ರಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವನ್ನು ಪರಾಭವಗೊಳಿಸಿತು. ರೇಡರ್ ಭರತ್ 10 ಪಾಯಿಂಟ್ಸ್ ಗಳಿಸಿದರೆ, ವಿಕಾಸ್ ಒಂಬತ್ತು ಪಾಯಿಂಟ್ಸ್ ಕಲೆಹಾಕಿದರು. ತಂಡದ ಇನ್ನೊಬ್ಬ ರೇಡರ್ ನೀರಜ್ ನರ್ವಾಲ್ (5 ಪಾಯಿಂಟ್ಸ್) ಕೊಡುಗೆ ನೀಡಿದರು. ಈ ಜಯದೊಂದಿಗೆ ಬೆಂಗಳೂರು ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ಭದ್ರಪಡಿಸಿಕೊಂಡಿತು.

ಜೈಪುರ ಪರ ಅರ್ಜುನ್ ದೇಸ್ವಾಲ್ ಗಳಿಸಿದ 10 ಪಾಯಿಂಟ್ಸ್ ವ್ಯರ್ಥವಾದವು.

ಉಭಯ ತಂಡಗಳು ಆರಂಭದಿಂದಲೇ ಜಿದ್ದಾಜಿದ್ದಿ ಪೈಪೋಟಿ ನಡೆಸಿದವು. ಮೊದಲಾರ್ಧದ ವೇಳೆಗೆ 19-19ರಿಂದ ಸಮಬಲ ಸಾಧಿಸಿದ್ದವು. ಎರಡೂ ತಂಡಗಳು ತಲಾ ಒಂದು ಬಾರಿ ಆಲೌಟ್ ಆದವು. ದ್ವಿತೀಯಾರ್ಧದಲ್ಲಿ ಬುಲ್ಸ್ ಆಟದ ವೇಗವನ್ನು ಹೆಚ್ಚಿಸಿತು. ಈ ಅವಧಿಯಲ್ಲಿ ತಂಡವು 18 ಪಾಯಿಂಟ್ಸ್ ಕಲೆಹಾಕಿದರೆ ಜೈಪುರ 12 ಪಾಯಿಂಟ್ಸ್ ಮಾತ್ರ ಗಳಿಸಿತು. ಒಂದು ಬಾರಿ ಜೈಪುರ ಆಟಗಾರರನ್ನು ಆಲೌಟ್ ಮಾಡುವಲ್ಲಿ ಬೆಂಗಳೂರು ಯಶಸ್ವಿಯಾಯಿತು.



ಬೆಂಗಳೂರು ಬುಲ್ಸ್ ಮತ್ತು ಜೈಪುರ ಪಿಂಕ್ ಪ್ಯಾಂಥರ್ಸ್ ಆಟಗಾರರ ಪೈಪೋಟಿ

ದಿನದ ಮತ್ತೊಂದು ಪಂದ್ಯದಲ್ಲಿ ತಮಿಳ್ ತಲೈವಾಸ್ 49-39 ಪಾಯಿಂಟ್ಸ್‌ಗಳಿಂದ ದಬಾಂಗ್ ಡೆಲ್ಲಿ ವಿರುದ್ಧ ಗೆದ್ದಿತು.

ಇಂದಿನ ಪಂದ್ಯಗಳು

ಗುಜರಾತ್ ಜೈಂಟ್ಸ್-ಪಟ್ನಾ ಪೈರೇಟ್ಸ್ (ಆರಂಭ: ರಾತ್ರಿ 7.30)

ಯುಪಿ ಯೋಧಾಸ್- ತೆಲುಗು ಟೈಟನ್ಸ್ (ಆರಂಭ: ರಾತ್ರಿ 8.30)

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಬೆಂಗಳೂರು	9	6	2	1	34
ಡೆಲ್ಲಿ	9	5	4	0	28
ಜೈಪುರ	9	5	4	0	27
ಪುಣೇರಿ	8	4	2	2	27
ಮುಂಬಾ	8	5	3	0	26
ಗುಜರಾತ್	8	4	3	1	24

ಸಂಕ್ಷಿಪ್ತ ಸುದ್ದಿ

ಈಜು: ಕೇಟಿ ಲೆಡೆಕಿ ವಿಶ್ವದಾಖಲೆ



ಲೆಡೆಕಿ

ಮಾಂಟ್ರಿಯಲ್ (ಎಎಫ್‌ಪಿ): ಅಮೆರಿಕದ ಕೇಟಿ ಲೆಡೆಕಿ ಇಲ್ಲಿ ನಡೆಯುತ್ತಿರುವ ಫಿನಾ ವಿಶ್ವಕಪ್ ಈಜು ಕೂಟದಲ್ಲಿ ವಿಶ್ವದಾಖಲೆ ಬರೆದರು.

1,500 ಮೀಟರ್ಸ್ ಫ್ರೀಸ್ಟೈಲ್ ಶಾರ್ಟ್‌ಕೋರ್ಸ್ ವಿಭಾಗದಲ್ಲಿ ಶನಿವಾರ ಅವರು 15 ನಿಮಿಷ 8.24 ಸೆಕೆಂಡುಗಳಲ್ಲಿ ಗುರಿ ತಲುಪಿ ಅಗ್ರಸ್ಥಾನ ಗಳಿಸಿದರು. ಇದರೊಂದಿಗೆ 2019ರಲ್ಲಿ ಬರ್ಲಿನ್ ಕೂಟದಲ್ಲಿ ಜರ್ಮನಿಯ ಸಾರಾ ವೆಲ್‌ಬ್ರಾಕ್ ನಿರ್ಮಿಸಿದ್ದ ದಾಖಲೆಯನ್ನು (15 ನಿ. 18.01 ಸೆ.) ಮೀರಿದರು.

ಬ್ರೆಜಿಲ್‌ನ ಬೀಟ್‌ರಿಜ್ ಡಿಜೊಟ್ಟಿ (15 ನಿ. 48.82 ಸೆ.) ಮತ್ತು ಕೆನಡಾದ ಲೈಲಾ ಒರಾವಸ್ಕಿ (16 ನಿ. 16.86 ಸೆ.) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.

ಲೆಡೆಕಿ ಅವರು ವೃತ್ತಿಜೀವನದಲ್ಲಿ ಒಟ್ಟು ಏಳು ಒಲಿಂಪಿಕ್ ಚಿನ್ನ ಮತ್ತು 19 ವಿಶ್ವ ಚಾಂಪಿಯನ್‌ಷಿಪ್ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಯಾವ ಮಹಿಳಾ ಈಜುಪಟುವೂ ಇಷ್ಟು ಪದಕಗಳನ್ನು ಗಳಿಸಿಲ್ಲ.

ಕೊಕೇನ್ ಚಟಕ್ಕೆ ಬಿದ್ದಿದ್ದೆ: ವಾಸಿಂ

ನವದೆಹಲಿ (ಪಿಟಿಐ): ಕ್ರಿಕೆಟ್‌ನಿಂದ ನಿವೃತ್ತಿಯಾದ ನಂತರ ಮಾದಕದ್ರವ್ಯ ಕೊಕೇನ್ ಚಟಕ್ಕೆ ಅಂಟಿಕೊಂಡಿದ್ದೆ ಎಂಬುದನ್ನು ಪಾಕಿಸ್ತಾನ ತಂಡದ ದಿಗ್ಗಜ ಆಟಗಾರ ವಾಸಿಂ ಅಕ್ರಂ ಬಹಿರಂಗಪಡಿಸಿದ್ದಾರೆ.

ಶೀಘ್ರದಲ್ಲೇ ಬಿಡುಗಡೆಯಾಗಲಿರುವ ತಮ್ಮ ಹೊಸ ಆತ್ಮಚರಿತ್ರೆಯಲ್ಲಿ ಈ ವಿಷಯವನ್ನು ತಿಳಿಸಿದ್ದು, '2009 ರಲ್ಲಿ ಪತ್ನಿ ಹುಮಾ ಅವರ ಅಕಾಲಿಕ ನಿಧನದ ಬಳಿಕ ಮಾದಕದ್ರವ್ಯ ಸೇವನೆ ಚಟದಿಂದ ಹೊರಬಂದೆ' ಎಂದಿದ್ದಾರೆ.

'ದಕ್ಷಿಣ ಏಷ್ಯಾದಲ್ಲಿ ನಡೆಯುವ ಪಾರ್ಟಿಗಳಲ್ಲಿ ಮಾದಕದ್ರವ್ಯ ಸೇವನೆ ಸಹಜ ಎನಿಸಿಬಿಟ್ಟಿದೆ. ಒಂದೇ ರಾತ್ರಿ ನಿಮಗೆ 10 ಪಾರ್ಟಿಗಳಿಗೆ ತೆರಳಬಹುದು. ಅಂತಹ ಪಾರ್ಟಿಯಲ್ಲಿ ನನಗೂ ಕೊಕೇನ್ ಸೇವನೆ ಚಟ ಹತ್ತಿತು. ಅದರಿಂದ ಸಾಕಷ್ಟು ತೊಂದರೆಯನ್ನೂ ಅನುಭವಿಸಿದ್ದೇನೆ' ಎಂದಿದ್ದಾರೆ.

'ಈ ಚಟವನ್ನು ಬಿಡಿಸಲು ಪತ್ನಿ ಹುಮಾ ಸಾಕಷ್ಟು ಪ್ರಯತ್ನಪಟ್ಟಿದ್ದರು. ಆದರೂ ನನಗೆ ಸುಲಭದಿಂದ ಹೊರಬರಲು ಆಗಲಿಲ್ಲ. ಪತ್ನಿಯ ನಿಧನದ ಬಳಿಕ ಕೊಕೇನ್ ಸೇವನೆ ಪೂರ್ಣವಾಗಿ ನಿಲ್ಲಿಸಿದೆ' ಎಂದು ವಿವರಿಸಿದ್ದಾರೆ.

ಪ್ರೊ ಲೀಗ್ ಹಾಕಿ: ಭಾರತಕ್ಕೆ ನಿರಾಸೆ

ಭುವನೇಶ್ವರ (ಪಿಟಿಐ): ಭಾರತ ತಂಡದವರು ಎಫ್‌ಐಎಚ್ ಪ್ರೊ ಹಾಕಿ ಲೀಗ್ ಟೂರ್ನಿಯಲ್ಲಿ 2-3 ಗೋಲುಗಳಿಂದ ಸ್ಪೇನ್ ಎದುರು ಪರಾಭವಗೊಂಡರು.

ಭಾನುವಾರ ನಡೆದ ಪಂದ್ಯದಲ್ಲಿ ಎಡ್ವರ್ಡೊ ಇಗ್ನೇಸಿಯೊ ಸಿಮೊ (16ನೇ ನಿ.), ಮಾರ್ಕ್ ಮಿರಾಲೆಸ್ (26) ಮತ್ತು ಮಾರ್ಕ್ ರೇಯ್ನೆ (56) ಅವರು ಗೋಲು ಗಳಿಸಿ ಸ್ಪೇನ್ ತಂಡದ ಗೆಲುವಿಗೆ ಕಾರಣರಾದರು.

ಆತಿಥೇಯ ತಂಡದ ಪರ ಹರ್ಮನ್‌ಪ್ರೀತ್ ಸಿಂಗ್ (26) ಹಾಗೂ ಅಭಿಷೇಕ್ (54) ಚೆಂಡನ್ನು ಗುರಿ ಸೇರಿಸಿದರು. ಭಾರತ ತನ್ನ ಮುಂದಿನ ಪಂದ್ಯದಲ್ಲಿ ನ.4 ರಂದು ನ್ಯೂಜಿಲೆಂಡ್‌ನ ಸವಾಲು ಎದುರಿಸಲಿದೆ.

ಫಿಫಾ ಮಹಿಳೆಯರ ವಿಶ್ವಕಪ್: ಸ್ಪೇನ್ ಚಾಂಪಿಯನ್

ನವಿ ಮುಂಬೈ (ಪಿಟಿಐ): ಹಾಲಿ ಚಾಂಪಿಯನ್ ಸ್ಪೇನ್ ತಂಡ ಫಿಫಾ 17 ವರ್ಷದೊಳಗಿನ ಮಹಿಳೆಯರ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಕಿರೀಟ ಮುಡಿಗೇರಿಸಿಕೊಂಡಿತು.

ಭಾನುವಾರ ನಡೆದ ಫೈನಲ್‌ನಲ್ಲಿ ಸ್ಪೇನ್ 1-0 ಗೋಲಿನಿಂದ ಕೊಲಂಬಿಯಾ ತಂಡವನ್ನು ಮಣಿಸಿತು. ಇದೇ ಮೊದಲ ಬಾರಿ ಫೈನಲ್ ಪ್ರವೇಶಿಸಿದ್ದ ಕೊಲಂಬಿಯಾ ತಂಡ, ಎದುರಾಳಿಗಳಿಗೆ 'ಉಡುಗೊರೆ' ಗೋಲು ನೀಡಿ ನಿರಾಸೆ ಅನುಭವಿಸಿತು.

ಪಂದ್ಯದ 82ನೇ ನಿಮಿಷದಲ್ಲಿ ಕೊಲಂಬಿಯದ ಡಿಫೆಂಡರ್ ಅನಾ ಮರಿಯಾ ಗಜ್ಮನ್ ಅವರು ಎದುರಾಳಿ ಆಟಗಾರ್ತಿಯ ಗೋಲು ಗಳಿಸುವ ಪ್ರಯತ್ನವನ್ನು ತಡೆಯುವಲ್ಲಿ ಎಡವಿ ಚೆಂಡನ್ನು ತಮ್ಮದೇ ಗೋಲುಪೆಟ್ಟಿಗೆಯೊಳಗೆ ಕಳುಹಿಸಿದರು.

2018 ರಲ್ಲಿ ನಡೆದಿದ್ದ ಟೂರ್ನಿಯಲ್ಲೂ ಸ್ಪೇನ್ ಚಾಂಪಿಯನ್ ಆಗಿತ್ತು.

ಟಿ20 ಟೂರ್ನಿ: ಕರ್ನಾಟಕಕ್ಕೆ ಪಂಜಾಬ್ ಎದುರಾಳಿ

ಕೋಲ್ಕತ್ತ: ಅಭಿಷೇಕ್ ಶರ್ಮಾ ಹಾಗೂ ಪ್ರಭಸಿಮ್ರನ್ ಸಿಂಗ್ ಅರ್ಧಶತಕಗಳ ಬಲದಿಂದ ಪಂಜಾಬ್ ತಂಡವು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಜಯಿಸಿತು.

ಮಂಗಳವಾರ ನಡೆಯಲಿರುವ ಎಂಟರ ಘಟ್ಟದ ಪಂದ್ಯದಲ್ಲಿ ಪಂಜಾಬ್ ತಂಡವು ಕರ್ನಾಟಕವನ್ನು ಎದುರಿಸಲಿದೆ. ಲೀಗ್ ಹಂತದಲ್ಲಿ ಕರ್ನಾಟಕವು ಅಗ್ರಸ್ಥಾನದೊಂದಿಗೆ ಎಂಟರ ಘಟ್ಟ ತಲುಪಿತ್ತು.

ಭಾನುವಾರ ಈಡನ್ ಗಾರ್ಡನ್‌ನಲ್ಲಿ ನಡೆದ ಪಂದ್ಯದಲ್ಲಿ ಪಂಜಾಬ್ ತಂಡವು 49 ರನ್‌ಗಳಿಂದ ಹರಿಯಾಣ ವಿರುದ್ಧ ಗೆದ್ದಿತು. ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಅಭಿಷೇಕ್ (55; 48ಎ, 4X5, 6X1) ಹಾಗೂ ಪ್ರಭಸಿಮ್ರನ್ (64; 36ಎ, 4X5,6X5) ಅವರ ಬ್ಯಾಟಿಂಗ್‌ನಿಂದ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 176 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಹರಿಯಾಣ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 127 ರನ್ ಗಳಿಸಲಷ್ಟೇ ಶಕ್ತವಾಯಿತು. ಪಂಜಾಬ್ ತಂಡದ ಸಿದ್ಧಾರ್ಥ್ ಕೌಲ್ ಹಾಗೂ ಬಲ್ತೇಜ್ ಸಿಂಗ್ ಕ್ರಮವಾಗಿ ಎರಡು ಹಾಗೂ ಮೂರು ವಿಕೆಟ್ ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಛತ್ತೀಸಗಡದ ವಿರುದ್ಧ 5 ವಿಕೆಟ್‌ಗಳಿಂದ ಗೆದ್ದ ವಿದರ್ಭ ಕ್ವಾರ್ಟರ್‌ಫೈನಲ್‌ನಲ್ಲಿ ದೆಹಲಿ ತಂಡವನ್ನು ಎದುರಿಸಲಿದೆ. ಮೂರನೇ ಕ್ವಾರ್ಟರ್‌ಫೈನಲ್‌ನಲ್ಲಿ ಹಿಮಾಚಲ ಪ್ರದೇಶ ಹಾಗೂ ಬಂಗಾಳ ಹಣಾಹಣಿ ನಡೆಸಲಿವೆ.



ಸಾತ್ವಿಕ್ (ಎಡ) ಮತ್ತು ಚಿರಾಗ್ ಶೆಟ್ಟಿ

ಸಾತ್ವಿಕ್– ಚಿರಾಗ್‌ಗೆ ಪ್ರಶಸ್ತಿ

ಪ್ಯಾರಿಸ್ (ಪಿಟಿಐ): ಅಮೋಘ ಆಟವಾಡಿದ ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಫ್ರೆಂಚ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್ ವಿಭಾಗದ ಕಿರೀಟ ಮುಡಿಗೇರಿಸಿಕೊಂಡರು.

ಭಾರತದ ಜೋಡಿಗೆ ವೃತ್ತಿಜೀವನದಲ್ಲಿ ದೊರೆತ ಅತಿದೊಡ್ಡ ಪ್ರಶಸ್ತಿ ಇದಾಗಿದೆ. ಭಾನುವಾರ ನಡೆದ ಫೈನಲ್‌ನಲ್ಲಿ ಅವರು 21-13, 21-19 ರಲ್ಲಿ ಚೀನಾ ತೈಪೆಯ ಲು ಚಿಂಗ್ ಯಾವೊ ಮತ್ತು ಯಾಂಗ್ ಪೊ ಹಾನ್ ವಿರುದ್ಧ ಗೆದ್ದರು.

ಬಿರುಸಿನ ಸ್ಮ್ಯಾಷ್ ಮತ್ತು ಡ್ರಾಪ್ ಶಾಟ್‌ಗಳ ಮೂಲಕ ಮಿಂಚಿದ ಸಾತ್ವಿಕ್–ಚಿರಾಗ್ 49 ನಿಮಿಷಗಳಲ್ಲಿ ಗೆಲುವು ಒಲಿಸಿಕೊಂಡರು. ವಿಶ್ವ ರ್‍ಯಾಂಕಿಂಗ್‌ನಲ್ಲಿ 8ನೇ ಸ್ಥಾನದಲ್ಲಿರುವ ಭಾರತದ ಜೋಡಿ 2019 ರಲ್ಲಿ ಇಲ್ಲಿ 'ರನ್ನರ್ಸ್ ಅಪ್' ಆಗಿತ್ತು.

ಈ ಗೆಲುವಿನ ಮೂಲಕ ಸಾತ್ವಿಕ್ – ಚಿರಾಗ್ ಈ ವರ್ಷದಲ್ಲಿ ತಮ್ಮ ಯಶಸ್ಸಿನ ಓಟ ಮುಂದುವರಿಸಿದ್ದಾರೆ. ಇಂಡಿಯನ್ ಓಪನ್ ಸೂಪರ್ 500 ಟೂರ್ನಿ ಗೆದ್ದಿದ್ದ ಅವರು ಬರ್ಮಿಂಗ್‌ಹ್ಯಾಂ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನ ಜಯಿಸಿದ್ದರು. ಆಗಸ್ಟ್‌ನಲ್ಲಿ ನಡೆದಿದ್ದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಪಡೆದಿದ್ದರು.

ಶಂಕರ್‌ಗೆ ಬೆಳ್ಳಿ

ಸ್ಯಾಂಟಂಡರ್, ಸ್ಪೇನ್ (ಪಿಟಿಐ): ಭಾರತದ ಶಂಕರ್ ಮುತ್ತುಸ್ವಾಮಿ ಅವರು ಇಲ್ಲಿ ನಡೆದ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗಳಿಸಿದರು.

ಭಾನುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಶಂಕರ್ 14-21, 20-22ರಿಂದ ಚೀನಾ ತೈಪೆಯ ಕುವೊ ಕುವಾನ್ ಲಿನ್ ಎದುರು ಸೋತರು.

ಇದರೊಂದಿಗೆ ಶಂಕರ್ ಅವರು ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಗೆದ್ದ ಭಾರತೀಯರಾದ ಅಪರ್ಣಾ ಪೋಪಟ್ (1996), ಸೈನಾ ನೆಹ್ವಾಲ್ (2006), ಸಿರಿಲ್ ವರ್ಮಾ (2015) ಅವರ ಸಾಲಿಗೆ ಸೇರಿದರು.